# ಅಪರಂಜಿ

ತಿಳಿನಗೆಯ ಕಾರಂಜಿ

ನವಂಬರ್ 2025




ಬಿಡಿ ಪ್ರತಿ: ರೂ. 10/–

TEMPLE OF KNOWLEDGE

ಬೀchi ಸಾಹಿತ್ಯ

# ಬೀChi Prakashana

1. ರೇಡಿಯೋ ನಾಟಕಗಳು
2. ಮಾತ್ರೆಗಳು
3. ತಿಂಮನ ತಲೆ
4. ದಾಸಕೂಟ
5. ಹುಚ್ಚು ಹುರುಳು
6. ಹನ್ನೊಂದನೆ ಅವತಾರ
7. ಸತೀಸೂಳೆ
8. ಸರಸ್ವತಿ ಸಂಹಾರ
9. ಖಾದೀಸೀರೆ
10. ಬೆಂಗಳೂರು ಬಸ್ಸು
11. ಹೆಣ್ಣು ಕಾಣದ ಗಂಡು
12. ಸತ್ತವನು ಎದ್ದು ಬಂದಾಗ
13. ಚಿನ್ನದ ಕಸ
14. ಕಾಣದ ಸುಂದರಿ
15. ಕಲ್ಲು ಹೇಳಿತು
16. ತಿಮ್ಮ ರಸಾಯನ
17. ದೇವನ ಹೆಂಡ
18. ಏರದ ಬಳೆ
19. ಮೇಡಮ್ಮನ ಗಂಡ
20. ಆಟೋ !
21. ಎಲ್ಲಿರುವೆ ತಂದೆ ಬಾರೋ
22. ಬಂಗಾರದ ಕತ್ತೆ
23. ಎಲ್ಲರೂ ಸಂಪನ್ನರೇ
24. ಟೆಂಟ್ ಸಿನೇಮಾ
25. ಬ್ರಹ್ಮಚಾರಿಯ ಮಗ
26. ಬೆಳ್ಳಿ ತಿಂಮ ನೂರೆಂಟು ಹೇಳಿದ
27. ಮೂರು ಹೆಣ್ಣು ಐದು ಜಡೆ
28. ಮುರಿದ ಬೊಂಬೆ
29. ಹುಲಿಯ ಬೆನ್ನ ಮೇಲಿಂದ
30. ಸುನಂದೂಗೆ ಏನಂತೆ ?
31. ಕಮಲಮ್ಮನ ಕುಂಕುಮ ಬಲ
32. 6-7 ಸ್ತ್ರೀ ಸೌಖ್ಯ
33. ಆಗಿಷ್ಟು-ಈಗಿಷ್ಟು
34. ಸೀತೂ ಮದುವೆ
35. ಲೇವಡಿ ಟೈಪಿಸ್ಟ್
36. ಆರಿದ ಚಹಾ
37. ಸಕ್ಕರೆ ಮೂಟೆ
38. ಬೆಳ್ಳಿ ಪತ್ರಗಳು
39. ಮಹಾಯುದ್ಧ
40. ಲಕ್ಷ್ಮೀ ಪೂಜೆ
41. ದೇವರು ಕೊಟ್ಟಿದ್ದು
42. ಅಮ್ಮಾವ್ರ ಕಾಲ್ಗುಣ
43. ಸಾಹುಕಾರ ಸುಬ್ಬಮ್ಮ
44. ಸುಬ್ಬಿ !
45. ಕತ್ತಲಲ್ಲಿ ಬಂದವಳು
46. ಹೆಂಡತಿ ನಕ್ಕಾಗ
47. ಚಿತ್ರದ್ದೇ ಬೇವು
48. ಕಾಮಂಣ
49. ಕಾಮಲೋಕ
50. ಮಾತನಾಡುವ ದೇವರುಗಳು
51. ಅಂದನಾ ತಿಂಮ
52. ಸಂಪನ್ನರಿದ್ದಾರೆ ಎಚ್ಚರಿಕೆ
53. ಗರತಿಯ ಗುಟ್ಟು
54. ಕಮಲೆಯ ಓಲೆಗಳು
55. ನಂಬರ್ ಐವತ್ತೈದು
56. ದೇವರಿಲ್ಲದ ಗುಡಿ
57. ಮನೆತನದ ಗೌರವ
58. ಉತ್ತರ ಭೂಪ
59. ಕನ್ನಡ ಎಮ್ಮೆ
60. ಅಮ್ಮನವರ ಇಚ್ಛಾ
61. ನರಪ್ರಾಣಿ
62. ನನ್ನ ಭಯಾಗ್ರಫಿ
63. ದೇವರಿಗೇ ಪ್ರೀತಿ
64. ಬೀchi ಬುಲ್ಲೆಟಿನ್
65. ಬೀchi ತೋಚಿದ್ದು ಗೀಚಿದ್ದು
66. ಬೊಂಬಾಟ್ ಬೀchi
67. ವಾಗ್ಬಾಣಗಳು (ಗಂಗಾವತಿ ಪ್ರಾಣೇಶ್)
68. ನಗಿಸುವವನ ನೋವುಗಳು (ಗಂಗಾವತಿ ಪ್ರಾಣೇಶ್)
69. **Best of Best** ಬರಹಗಳು ಭಾಗ-1 (ಬಿ.ಎಸ್.ಕೆ)
70. **Best of Best** ಬರಹಗಳು ಭಾಗ-2 (ಬಿ.ಎಸ್.ಕೆ)
71. ಪೋಲೀಸ್ ಎನ್‌ಕೌಂಟರ್ (ಡಾ. ಡಿ.ವಿ. ಗುರುಪ್ರಸಾದ್)
72. ಪೋಲೀಸ್ ಜೀವನದಲ್ಲಿ ಹಾಸ್ಯ (ಡಾ. ಡಿ.ವಿ. ಗುರುಪ್ರಸಾದ್)
73. ವಿಶ್ವ ಪರ್ಯಟನೆ (ಡಾ. ಡಿ.ವಿ. ಗುರುಪ್ರಸಾದ್)
74. ರಾಜೀವ್ ಗಾಂಧಿ ಚೀಕರ ಹತ್ಯೆ
75. ಮರಣದಂಡನೆಗೀಡಾದ ಕುಖ್ಯಾತ ಕೈದಿಗಳು
76. ತ್ರಿಮುಖಿ
77. ರಕ್ಷ-ಖಾ-NALINI GOWDA
78. ಕವನ ಸಂಕಲನ-ARUNDATHI JOSHI
79. WHAT ON EARTH IS THE COSMETIC TRUTH ?!!! -B K DORESWAMY
80. THE PANDEMIC PROSE -VINOD D GANGOLLI
81. AN ATOM OF KNOWLEDGE A RESOURCE OF CURIOUS MINDS -SUBRAY SHAMBHU AVADHANI

MEENA RAMAN BOOKS

82. ESSAYS & POEMS
83. EASY COOKING OF DELICIOUS RECIPES
84. BOOK OF POEMS
85. BIRDS AND OTHER POEMS
86. EASY COOKING OF DELICIOUS RECIPES PART-II
87. CHANDRAYAAN -3 AND OTHER POEMS
88. ANECDOTES OF MY STUDENT LIFE
89. EXCERPTS FROM SRIMAD BHAGAVAT
90. EASY COOKING OF DELICIOUS RECIPES PART-III
91. RAIN AND OTHER POEMS
92. EASY COOKING OF DELICIOUS RECIPES PART-IV




Ph : 080-29731414, Mob : 9845264304.

Website : www.beechi.in

# ಅಂದ ಹಾಗೆ...!

ರಾಂಕಿ ಬೆಳ್ಳೂರ್



Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457







MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 43**
**ಸಂಚಿಕೆ – 02**
**ನವಂಬರ್–2025**

## ಈ ಸಂಚಿಕೆಯಲ್ಲಿ...


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಅವಿಸ್ಮರಣೀಯ ನಗೆಗಾರರು-4 | ಶಿವಕುಮಾರ್ | 5 |
| ಆರ್.ಕೆ. ಲಕ್ಷ್ಮಣ್‌ರ ರಾಜಕೀಯ ವ್ಯಂಗ್ಯಚಿತ್ರಗಳು | | 10 |
| ಮೂರು ಮಿನಿ, ಹನಿ ಕಥೆಗಳು | ಎಸ್.ಎನ್. ಪುರಾಣಿಕ್ | 12 |
| ಜೀವನದ ಹಾಸ್ಯಮಯ ವೈಫಲ್ಯಗಳು... | ಎಸ್ ರಘುನಂದನ್ | 14 |
| ದೇವರಿಗೆ ಬೇಜಾರು....... | ಎಚ್. ಗೋಪಾಲಕೃಷ್ಣ | 15 |
| ತುಂತುರು | ದಂನಆ | 19 |
| ಜೇಬು | ಸೌಮ್ಯ ಮಿತ್ರ | 22 |
| ಸಮಯ ತಿರುಗಿಸಿದ ಕ್ಷಣ | ರಾಜೇಶ್ವರಿ. ಹುಲ್ಲೇನಹಳ್ಳಿ | 26 |
| ಬೂಸ್ಟ್ | ಗೌತಮ | 27 |
| ಬೃಹತ್ ಬೆಂಗಳೂರು ಪ್ರಾಧಿಕಾರ.... | ಇ.ಆರ್. ರಾಮಚಂದ್ರನ್ | 30 |
| ಹೆಂಡತಿ ಪ್ರಾಣ ಹಿಂಡುತೀ....! | ಎನ್.ವ್ಹಿ. ರಮೇಶ್ | 33 |
| ನಮ್ಮ ಮೂಣುಮಲೈ ಮುತ್ತಣ್ಣ | ಡಾ. ಎಚ್.ಕೆ. ರಂಗನಾಥ್ | 37 |


ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್
ಒಳಪುಟಗಳು : ರಾಂಕಿ ಬೆಳ್ಳೂರ್

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/-
ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು-560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

***ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು-560010***



## ಅಪರಂಜಿ ಕಿಡಿ

● ಪ್ರಕಾಶ್

ಸಮರ್ಪಕ ಅಭಿವೃದ್ಧಿಗೆ ಗ್ರೇಟರ್ ಬೆಂಗಳೂರು ಅಥಾರಿಟಿ

– ಶೀರ್ಷಿಕೆ

ಸರಿ, ಚೆನ್ನಾಗಿ ತುರಿದು ಹಾಕೋದಕ್ಕೆ ಮಹೂರ್ತ
ಸಿದ್ಧವಾಗಿರುವಂತಿದೆ !!!

* * *

"ಗಂಟು" ಸುಲಿಗೆಗೆ ಮುಂಬೈ "ನಂಟು"

– ದಿನಪತ್ರಿಕೆ

ತಾಜಾ ಶೀರ್ಷಿಕೆ ಹೀಗಿರಬೇಕು !!

* * *

ಪೋಲೀಸ್ ವಸತಿಗೃಹದಲ್ಲಿ ಸ್ಕೌಟ್ –ಗೈಡ್ಸ್ ಮುಕ್ತದಳ
ಆಹಾ ಎಂಥ ವಿರೋಧಾಭಾಸ!!

* * *

"ಲಾಲ್‌ಬಾಗ್ ಹಾಳುಮಾಡಿದರೆ ತಲೆ ಒಡೀತಾರೆ"

– ಡಿ.ಕೆ.ಶಿ.

ಕರಾಳ ಸತ್ಯದ ಉದಾಹರಣೆ !!

* * *

"ತಾಲಿಬಾನ್ : ಪಾಕ್ ದೂರ, ಭಾರತಕ್ಕೆ ಇನ್ನಷ್ಟು ಹತ್ತಿರ"

– ಪತ್ರಿಕೆ

ಅಪರಂಜಿ ದಿಗ್ಭ್ರಮೆಗೊಂಡಳಂತೆ !!

* * *

ಚುನಾವಣೆ ಅವ್ಯವಸ್ಥೆ ; ಮದ್ದುಂಟೆ?

– ಅಭಿಮತ

ಯಕ್ಷಪ್ರಶ್ನೆ ನೆನಪಿಗೆ ಬರುತ್ತೆ !!

* * *

ಪರಭಾಷಿಕರ ಕನ್ನಡ ಕಲಿಕೆ : ಕನ್ನಡಿಗರೇ ಅಡ್ಡಿ

– ಸುದ್ದಿ

ಇಸ್ ಕೋ ಬದಲ್‌ನೇಕಿ ಜರೂರತ್ ಹೈ !!

* * *

●

✍ ಶಿವಕುಮಾರ್

## "ನಮ್ಮ ನಿಮ್ಮಲ್ಲಿ"

ನಮ್ಮ ಮನೆಯಲ್ಲಿ ಚಿಕ್ಕಂದಿನಿಂದಲೇ ಸಣ್ಣಕತೆಗಳನ್ನು ಓದುವ ಸಂಸ್ಕೃತಿ ಒದಗಿಬಂದದ್ದು ನಮ್ಮೆಲ್ಲರ ಸೌಭಾಗ್ಯವೆಂದೇ ಹೇಳಬೇಕು. ಕಿರಿಯರಾದ ನಮಗೆ ಕಾದಂಬರಿ, ಕವನಗಳಿಗಿಂತ ಕತೆಗಳನ್ನು ಓದುವುದರಲ್ಲೇ ಒಂದು ವಿಶೇಷ ಆಕರ್ಷಣೆ. ಆ ದಿನಗಳಲ್ಲಿ ನಮ್ಮ ತಂದೆ ಆರ್ಗೋಸಿ ಎಂಬ ಆಂಗ್ಲ ಮಾಸಪತ್ರಿಕೆಯನ್ನು ಮನೆಗೆ ತರಿಸುತ್ತಿದ್ದರು. ಇದರಲ್ಲಿ ಅಂದಿನ ಕಾಲದ ಖ್ಯಾತ ಕತೆಗಾರರು ಪ್ರತಿ ತಿಂಗಳೂ ತಮ್ಮ ಸರಕನ್ನು ವಿತರಿಸುತ್ತಿದ್ದರು. ಎಚ್.ಇ ಬೇಟ್ಸ್., ಡೇವಿಡ್ ಲ್ಯಾಂಗ್ಲೀನ್ ಮತ್ತಿತರರು ಅಂದಿನ ಆಂಗ್ಲ ಸಮಾಜದ ವಿಧಿ ವ್ಯವಹಾರಗಳ, ಆಚಾರವಿಚಾರಗಳನ್ನು ಬಹು ಸ್ವಾರಸ್ಯವಾಗಿ ತಮ್ಮ ಕಥೆಗಳ ಮೂಲಕ ಚಿತ್ರಿಸುತ್ತಿದ್ದರು. ಖ್ಯಾತ ಭೌತಶಾಸ್ತ್ರಜ್ಞ ಫ್ರೆಡ್ ಹಾಯ್ಲ್ ಕೂಡಾ ಈ ಪತ್ರಿಕೆಯಲ್ಲಿ ಸೈನ್ಸ್ ಫಿಕ್ಷನ್ ಕತೆಗಳನ್ನು ಬರೆಯುತ್ತಿದ್ದ. ಖ್ಯಾತ ಕಾದಂಬರಿಕಾರ ಅಲಿಸ್ಟರ್ ಮೆಕ್ಲೀನ್, ತನ್ನ ಧಾರಾವಾಹಿಗಳನ್ನು ಪ್ರಾರಂಭಿಸಿದ್ದು ಆರ್ಗೋಸಿಯಲ್ಲೇ. ಅವನು ಬರೆದ "ಐಸ್ ಸ್ಟೇಷನ್ ಜೀಬ್ರಾ" ಎಂಬ ಕತೆ ಇವತ್ತಿಗೂ ಕಣ್ಣಿಗೆ ಕಟ್ಟಿದಂತಿದೆ. ಇಂಗ್ಲೀಷ್ ಪುಸ್ತಕಗಳ ಜೊತೆ ಜೊತೆಯಾಗಿ ಮನೆಯಲ್ಲಿ ಕನ್ನಡ ಪುಸ್ತಕಗಳೂ ಇಟ್ಟಾಡುತ್ತಿದ್ದವು. ಗೊರೂರು, ಶ್ರೀನಿವಾಸ, ಮೂರ್ತಿರಾವ್, ರಾಕು ಇವರೆಲ್ಲರ ಪುಸ್ತಕಗಳನ್ನು ಓದುವ ಸಂಭ್ರಮದಲ್ಲಿ ಮನೆ ಮಕ್ಕಳಾದ ನಮಗೆಲ್ಲಾ ಪಾಠ ಓದುವುದಕ್ಕೆ ಬಿಡುವು ಸಿಕ್ಕುತ್ತಿದುದೇ ಆಶ್ಚರ್ಯ.ಸಂತಸದ ಸಂಗತಿಯೆಂದರೆ ಕೊರವಂಜಿಯಲ್ಲೂ ಸಣ್ಣ ಕತೆಗಳ ಚಲಾವಣೆ ಆರೋಗ್ಯಕರವಾಗಿಯೇ ಇತ್ತೆಂದು ಹೇಳಬಹುದು. ಬೀರಣ್ಣನವರ, "ರಂಗಪ್ಪ ಮತ್ತು ರಾವಣ ಬಾತ್", "ಪುಟ್ಟೂರಾಯನ ಪಥ್ಯ" ನಮ್ಮ ಮನ ರಂಜಿಸಿದರೆ, ಕೇಫರ ಶೌರಿ ಮತ್ತು ಪಾಂಡು, ದಾಶರಥಿಯವರ ದಫೇದಾರ್ ದೇರಣ್ಣನವರ ಕಥಾನಕಗಳು ಇದೇ ನಮೂನೆಯ ಮುದವನ್ನು ಉಕ್ಕಿಸುವುದರಲ್ಲಿ ಯಶಸ್ವಿಯಾಗಿರುತ್ತಿದ್ದವು. ಇದೆಲ್ಲಾ ಯಾಕೆ ಹೇಳುಕ್ಕೆ ಬಂದೆ ಅಂದರೆ, ಅಪರಂಜಿಯ ಸಂಚಿಕೆಗಳಲ್ಲಿಯೂ ಸಹ ಈ ಪರಂಪರೆಯನ್ನು ಮುಂದುವರಿಸುವ ಉದ್ದೇಶದಿಂದ ನಮ್ಮ ಮುಂದಿನ ಡಿಸೆಂಬರ್ ಸಂಚಿಕೆಯನ್ನು "ಸಣ್ಣಕತೆಗಳ ಸಂಭ್ರಮ" ವಾಗಿ ಹೊರತರುವ ಯತ್ನ ನಡೆಸಿದ್ದೇವೆ. ನವೆಂಬರ್ ಹದಿನೈದರ ಒಳಗೆ, ಮಾಗಿಯ ಚಳಿಯಲ್ಲಿ ಶಾಲು ಹೊದ್ದು ಬೆಚ್ಚಗೆ ಕುಳಿತು, ಹುರಿಗಾಳು ಮೆಲ್ಲುತ್ತಾ ಓದುವಂತಹ ಕತೆಯೊಂದನ್ನು ಕಳಿಸಿ.

ಅಪರಂಜಿಯ ಬಳಗದವರಿಗೆಲ್ಲಾ ಒಂದು ಸಿಹಿ ಸುದ್ದಿ. ಮೊನ್ನೆ ಮಧ್ಯಾಹ್ನ ಏನೋ ಓದುತ್ತ ಕುಳಿತಿದ್ದಾಗ, ಒಂದು ಫೋನ್ ಕರೆ ಬಂತು. ಆ ತುದಿಯಲ್ಲಿ ಭಾರತೀಯ ವಿದ್ಯಾಭವನದ ಶ್ರೀಯುತ ಸುರೇಶ್ ಅವರು. "ಡಾ. ಎಚ್.ಕೆ.ರಂಗನಾಥ್ ಅವರ ನೆನಪಿನಲ್ಲಿ ಮೀಸಲಿಟ್ಟಿರುವ ಈ ಸಾಲಿನ ಪಾರಿತೋಷಕವನ್ನು ಅಪರಂಜಿ ಹಾಸ್ಯ ಪತ್ರಿಕೆಗೆ ನೀಡಲಾಗಿದೆ. ದಯವಿಟ್ಟು ನೀವು ಇದನ್ನು ಸ್ವೀಕರಿಸಿರೆಂದು ಕೋರಿಕೆ" ಎಂದರು ಸುರೇಶ್. ನಿಜಕ್ಕೂ ನನಗೆ ಹೃದಯ ತುಂಬಿಬಂತು. ನಾಲ್ಕು ದಶಕಗಳಿಗೂ ಮಿಕ್ಕಿ ಈ ಸಂತಸದ ಪ್ರವೃತ್ತಿಯನ್ನು ರೂಢಿಸಿಕೊಂಡಿರುವ ನಮ್ಮ ಬಳಗದ ಎಲ್ಲರಿಗೂ, ಭಾರತೀಯ ವಿದ್ಯಾಭವನದಂತಹ ಪ್ರತಿಷ್ಠಿತ ಸಂಸ್ಥೆಯೊಂದು ಈ ಬಗೆಯಲ್ಲಿ ನಮ್ಮನ್ನು ಗೌರವಿಸುವುದನ್ನು ಕಂಡು ಕೃತಜ್ಞತಾ ಭಾವ ಉಕ್ಕಿ ಹರಿಯಿತು.

ನವೆಂಬರ್ 29.11.2025 ರಂದು ಶನಿವಾರ ಬೆಳಗ್ಗೆ ಹನ್ನೊಂದು ಘಂಟೆಗೆ ಈ ಪಾರಿತೋಷಕ ವಿತರಣಾ ಕಾರ್ಯಕ್ರಮವನ್ನು ಭಾರತೀಯ ವಿದ್ಯಾಭವನ ಹಮ್ಮಿಕೊಂಡಿದ್ದಾರೆ.

ವಿದ್ಯಾ ಭವನದಲ್ಲಿಯೇ ಈ ಸಮಾರಂಭ ವ್ಯವಸ್ಥಿತವಾಗಿದೆ. ವಿತರಣೆಯ ನಂತರ ಸುಮಾರು ಒಂದು ಘಂಟೆಯ ಕಾಲ ಅಪರಂಜಿಯ ವತಿಯಿಂದ ಹಾಸ್ಯ ಕಾರ್ಯಕ್ರಮ. ನಮ್ಮ ಬಳಗದವರೆಲ್ಲರಿಗೂ ಆದರದ ಆಹ್ವಾನ. ನೀವೂ ಬನ್ನಿ. ನಿಮ್ಮ ಗೆಳೆಯರನ್ನೂ ಕರೆತನ್ನಿ. ನಗೆ ಸಂಸ್ಕೃತಿಯನ್ನು ಸಂಭ್ರಮದಿಂದ ಆಚರಿಸುವ.

**ಭಾರತೀಯ ವಿದ್ಯಾಭವನ**

**ರೇಸ್ ಕೋರ್ಸ್ ರಸ್ತೆ, ಬೆಂಗಳೂರು**

**ಕೊರವಂಜಿ ಅಪರಂಜಿ ಟ್ರಸ್ಟ್ ಪ್ರಕಟಿಸುತ್ತಿರುವ ಹಾಸ್ಯ ಮಾಸ ಪತ್ರಿಕೆ**



**ಅಪರಂಜಿ ಗೆ**

**ಡಾ. ಎಚ್. ಕೆ. ರಂಗನಾಥ್ ಸ್ಮಾರಕ ಪುರಸ್ಕಾರ**

**ಶನಿವಾರ 29.11.2025 ಬೆಳಗ್ಗೆ 11.00 ಗಂಟೆಗೆ**

**ಅಪರಂಜಿಯ ಎಲ್ಲಾ ಅಭಿಮಾನಿಗಳಿಗೂ ಆದರದ ಸ್ವಾಗತ**



**ಅವಿಸ್ಮರಣೀಯ ನಗೆಗಾರರು–4**

# ಆರ್.ಕೆ.ಲಕ್ಷ್ಮಣ್

**✍ ಶಿವಕುಮಾರ್**



ನಲವತ್ತರ ದಶಕದ ಪ್ರಾರಂಭದಲ್ಲಿ, ರಾ.ಶಿ.ಯವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಹಾಸ್ಟೆಲಿಗೆ ಡಾಕ್ಟರಾಗಿದ್ದರು. ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ನಡೆಸುವಾಗ ರಾ.ಶಿ.ಯವರ ಹಾಸ್ಯದ ಚಕಮಕಿ ನಿರರ್ಗಳವಾಗಿ ಹೊರಹೊಮ್ಮುತ್ತಿತ್ತು. ಹಾಸ್ಟೆಲಿನಲ್ಲಿದ್ದ ನಾರಾಯಣ ಮೂರ್ತಿ ಎಂಬ ವಿದ್ಯಾರ್ಥಿ ಇವರ ನಗೆಪ್ರಜ್ಞೆಯನ್ನು ಬಹುವಾಗಿ ಮೆಚ್ಚಿ, "ನಮ್ಮ ತಂದೆ ಕೂಡ ನಿಮ್ಮಂತೆಯೇ ಯಾವಾಗಲೂ ತಮಾಷೆಯಾಗಿ ಮಾತಾಡ್ತಿರ್ತಾರೆ" ಅಂತ ರಾ.ಶಿ.ಯವರಿಗೆ ಹೇಳಿದ. "ಯಾರು ನಿಮ್ಮ ತಂದೆ ? ಎಲ್ಲಿದಾರೆ ?" ಅಂತ ರಾ.ಶಿ. ಕೇಳಿದಾಗ "ಅವರು ಮೈಸೂರಿನಲ್ಲಿ ಕನ್ನಡ ಅಧ್ಯಾಪಕರು. ನಾ. ಕಸ್ತೂರಿ ಅಂತ ಅವರ ಹೆಸರು. ನಾಳೆ ಭಾನುವಾರ ಊರಿಗೆ ಹೋಗ್ತಾ ಇದೀನಿ. ನೀವೂ ನನ್ನೊಂದಿಗೆ ಬಂದರೆ ಅವರನ್ನು ಪರಿಚಯಿಸುವೆ." ಅಂತ ನಾರಾಯಣ ಮೂರ್ತಿ ಉತ್ತರಿಸಿದ. ರಾ.ಶಿ. ಯವರಿಗೆ ಕಸ್ತೂರಿಯವರ ಪರಿಚಯವಾದದ್ದು ಹೀಗೆ. ಭೇಟಿಯಾದ ನಂತರ ಕನ್ನಡದಲ್ಲಿ ನಗೆ ಮಾಸಪತ್ರಿಕೆಯೊಂದನ್ನು ಹೊರತರುವ ಬಗ್ಗೆ ಇಬ್ಬರೂ ಸಮಾಲೋಚನೆ ನಡೆಸಿದರು. ಪತ್ರಿಕೆಗೆ "ಕೊರವಂಜಿ" ಎಂಬ ನಾಮಕರಣ ಮಾಡಿ 1942ರ ಕಾಮನ ಹಬ್ಬದ ದಿನದಂದು ಅದನ್ನು ಬಿಡುಗಡೆ ಮಾಡುವುದೆಂದು ಇಬ್ಬರೂ ನಿರ್ಧರಿಸಿದರು. ಹೊರಪುಟದ ಚಿತ್ರವಿನ್ಯಾಸದ ಬಗ್ಗೆ ಮಾತನಾಡುತ್ತಾ, ಕಸ್ತೂರಿ, "ನನ್ನ ವಿದ್ಯಾರ್ಥಿಯೊಬ್ಬ ತುಂಬಾ ಚೆನ್ನಾಗಿ ಚಿತ್ರ ಬರೀತಾನೆ. ಅವನ ಕೈಲಿ ಕಣಿ ಹೇಳೋ ಕೊರವಂಜಿ ಚಿತ್ರ ಬರೆಸೋಣ" ಎಂದರು. 1942ರ ಮಾರ್ಚ್ ಹದಿನೆಂಟರಂದು, ಯುಗಾದಿ ಹಬ್ಬದ ದಿನ ಕೊರವಂಜಿಯ ಮೊದಲ ಸಂಚಿಕೆ ಬಿಡುಗಡೆಯಾಯಿತು. ರಾ.ಶಿ.ಯವರ ಸಂಪಾದಕತ್ವ, ನಾ.ಕಸ್ತೂರಿಯವರ ಲೇಖನಗಳು ಮತ್ತು ಪ್ರೋತ್ಸಾಹ, ಪ್ರತಿಭಾವಂತ ತರುಣ ಕಲೆಗಾರ ಲಕ್ಷ್ಮಣ್‌ನ ವ್ಯಂಗ್ಯಚಿತ್ರಗಳು ಇವೆಲ್ಲಾ ದೊರಕಿದ್ದ ಕೊರವಂಜಿಗೆ ಅಂದಿನ ಯುದ್ಧದ ದಿನಗಳಲ್ಲಿಯೂ ಒಳ್ಳೆಯ ಭವಿಷ್ಯವಿರುವ ಸೂಚನೆ ಇತ್ತೆಂದು ಹೇಳಬಹುದು.

ಆರ್.ಕೆ.ಲಕ್ಷ್ಮಣ್ ಆಗ ಕಸ್ತೂರಿಯವರ ವಿದ್ಯಾರ್ಥಿ. ಚಿಕ್ಕ ವಯಸ್ಸಿನಿಂದಲೇ ಲಕ್ಷ್ಮಣ್‌ಗೆ ವ್ಯಂಗ್ಯಚಿತ್ರ ರಚನಾ ಕೌಶಲ್ಯ ಒಲಿದು ಬಂದಿತ್ತು. ಇಂತಹ ಪ್ರತಿಭಾವಂತ ಕೊರವಂಜಿಯ ಪ್ರಾರಂಭದ ಹಲವು ವರ್ಷಗಳಲ್ಲಿ, ಈ ಸಂಚಿಕೆಯೊಂದಿಗೆ ಇದ್ದು ಅತ್ಯಮೂಲ್ಯ ವ್ಯಂಗ್ಯ ಚಿತ್ರಗಳನ್ನು ರಚಿಸಿದ್ದು ನಿಜಕ್ಕೂ ಒಳ್ಳೆಯ ಸಂಗತಿ. ಮೊದಲ ಸಂಚಿಕೆ ಹೊರಬಂದನಂತರ ರಾ.ಶಿ.ಯವರು ಲಕ್ಷ್ಮಣ್‌ಗೆ ಮೆಚ್ಚುಗೆಯ ಪತ್ರವೊಂದನ್ನು ಬರೆದರು. ಅದಕ್ಕೆ ಲಕ್ಷ್ಮಣ್ ಅವರ ಉತ್ತರ ಇಂತಿದೆ.

"ಪ್ರಿಯ ಡಾ॥ ಶಿವರಾಮನ್,

ನಿಮ್ಮ ಸೌಜನ್ಯಯುತ ಪತ್ರ ತಲುಪಿದೆ. ನಾನು ಊರಿನಲ್ಲಿ ಇಲ್ಲದ್ದರಿಂದ ಈ ಮುಂಚೆಯೇ ನಿಮ್ಮ ಪತ್ರಕ್ಕೆ ಉತ್ತರ ನೀಡಲು ಸಾಧ್ಯವಾಗದಿದ್ದುದಕ್ಕೆ ಕ್ಷಮೆ ಬೇಡುತ್ತೇನೆ.

ನಾಲ್ಕೈದು ವರ್ಷಗಳ ಹಿಂದೆ ನಮ್ಮ ಅಣ್ಣನೊಡನೆ ಒಮ್ಮೆ ನಾನು ನಿಮ್ಮ ಮನೆಗೆ ಬಂದಿದ್ದೆ. ಹಾಗಾಗಿ ನಿಮ್ಮ ಪತ್ರ ಬಂದಾಗ ಸಂಪೂರ್ಣ ಅಪರಿಚಿತರಿಂದ ಬಂದ ಪತ್ರ ಎಂದೇನೂ ಅನಿಸಲಿಲ್ಲ.

ನನ್ನ ಚಿತ್ರಗಳ ಬಗ್ಗೆ ಮೆಚ್ಚುಗೆ ಸೂಚಿಸಿದ್ದಕ್ಕಾಗಿ ನಿಮಗೆ ನನ್ನ ಧನ್ಯವಾದಗಳು. ಹೌದು, ಲೋ ಮತ್ತು ಜಿ.ಎಚ್.ಡಿ. ಅವರುಗಳ ಮಟ್ಟಕ್ಕೆ ನಾನು ಏರಬೇಕೆಂಬ ಮಹದಾಶೆ ನನ್ನಲ್ಲಿದೆ. ಆದರೆ ಈ ಕನಸು ನನಸಾಗಬೇಕಾದರೆ ನೀವು ಮತ್ತು ನಿಮ್ಮಂತಹವರ ಪ್ರೋತ್ಸಾಹ ನಮಗೆ ಅತ್ಯಗತ್ಯ.

ಪತ್ರಿಯನ್ನು ಉತ್ತಮಪಡಿಸಲು ನನ್ನ ಸಲಹೆ ಕೇಳಿದ್ದೀರ. ಶ್ರೂ ಕಸ್ತೂರಿಯವರ ಮೂಲಕ ನನ್ನ ಸಲಹೆಗಳನ್ನು ತಿಳಿಸುತ್ತೇನೆ.

ನಿಮ್ಮ ಪ್ರೀತಿಯ

ಆರ್.ಕೆ.ಎಲ್."

ಲಕ್ಷ್ಮಣ್ ತಮ್ಮ ಆತ್ಮಕಥೆ, "ಟನೆಲ್ ಆಫ್ ಟೈಮ್" ಪುಸ್ತಕದಲ್ಲಿ ತಮ್ಮ ಕೊರವಂಜಿ ದಿನಗಳನ್ನು ನೆನಪಿಸಿಕೊಂಡಿದ್ದಾರೆ. ಆ ಭಾಗದ ಕನ್ನಡ ಭಾಷಾಂತರವನ್ನು ಇಲ್ಲಿ ನೋಡಿ.

"ಒಂದು ದಿನ ನನ್ನ ಕನ್ನಡ ಮೇಷ್ಟರು, ತಮ್ಮ ಪರಿಚಯದ ಒಬ್ಬ ಕನ್ನಡ ಹಾಸ್ಯ ಸಾಹಿತಿಯನ್ನು ಭೇಟಿ ಮಾಡುವಂತೆ ನನಗೆ ಸೂಚಿಸಿದರು."ಅವರು ನಿನಗೆ ಒಂದು ಒಳ್ಳೆಯ ಅವಕಾಶ ಕಲ್ಪಿಸುತ್ತಾರೆ." ಅಂತಲೂ ಹೇಳಿದರು. ಸ್ವಲ್ಪ ದಿನಗಳಲ್ಲಿಯೇ ನಾನು ಆ ಮಹಾನುಭಾವರನ್ನು ಭೇಟಿಮಾಡಿದೆ. ಅವರಿಗಾಲೇ ನಮ್ಮ ಮನೆಯವರೆಲ್ಲರ ಪರಿಚಯ ಚೆನ್ನಾಗಿತ್ತು. ನನ್ನನ್ನು ನೋಡಿ ಅವರು ಬೆಂಗಳೂರಿನಿಂದ ಹೊಸದಾಗಿ ಪ್ರಾರಂಭವಾಗಿರುವ ಹಾಸ್ಯಮಾಸಪತ್ರಿಕೆಯೊಂದಕ್ಕೆ ವ್ಯಂಗ್ಯ ಚಿತ್ರಗಳನ್ನು ಬರೆಯುವಂತೆ ಸೂಚಿಸಿದರು. ಬೆಂಗಳೂರಿನಲ್ಲಿ ವೈದ್ಯಕೀಯ ಮಾಡುತ್ತಿದ್ದ ಡಾಕ್ಟರೊಬ್ಬರು ಈ ಪತ್ರಿಕೆಯನ್ನು ಪ್ರತಿತಿಂಗಳೂ ಹೊರತರುವ ಸನ್ನಾಹ ನಡೆಸಿದ್ದು, ಅವರಿಗೆ ನನ್ನಿಂದ ಪ್ರತಿ ತಿಂಗಳೂ ಐದಾರು ವ್ಯಂಗ್ಯಚಿತ್ರಗಳ ಅಗತ್ಯವಿದೆ ಅಂತ ತಿಳಿದುಬಂತು. ಇವರಿಬ್ಬರ ಜೊತೆ ನಾನು ಒಬ್ಬ ಪಾಲುದಾರನಾ–ಗಬೇಕೆಂದೂ ಲಾಭದಲ್ಲಿ ನನಗೂ ಸೂಕ್ತ ಪಾಲು ಸಿಗುವುದೆಂದು ಅವರು ನನಗೆ ತಿಳಿಸಿದರು.ಪತ್ರಿಕೆಯ ಹೆಸರು ಕೊರವಂಜಿ ಎಂದಿದ್ದು ಅದರ ಮೊದಲ ಸಂಚಿಕೆಯ ಮುಖ ಪುಟಕ್ಕೆ ನಾನು ಕಣಿ ಹೇಳುವ ಹಳ್ಳಿಯ ತರುಣಿಯೊಬ್ಬಳ ಚಿತ್ರ ಬರೆದಿದ್ದೆ.

ಅದು ಯುದ್ಧ ಕಾಲ. ಮೈಸೂರಿನಲ್ಲಿ ಆಗಾಗ ಬ್ಲಾಕ್ ಔಟ್ ಆಗುತ್ತಿತ್ತು. ಆಹಾರದ ರೇಷನಿಂಗ್, ಎಲ್ಲ ಅಗತ್ಯ ಸರಂಜಾಮುಗಳ ಅಭಾವ, ಇವೆಲ್ಲಾ  ಸಾಮಾನ್ಯ ಜನಗಳಲ್ಲಿ ಪ್ರತಿದಿನದ ಅನುಭವಗಳಾಗಿದ್ದವು. ಇದರಿಂದ ವ್ಯಂಗ್ಯ ಚಿತ್ರ ಬರೆಯಲು ನನಗೆ ಹುಲುಸಾದ ಸಾಮಗ್ರಿ ದೊರಕುತ್ತಿತ್ತು. ಆ ಪತ್ರಿಕೆಯಲ್ಲಿ ನುರಿತ ಬರಹಗಾರರಿಂದ ಅನೇಕ ಉತ್ತಮ ಹಾಸ್ಯ ಲೇಖನಗಳೂ ಇರುತ್ತಿದ್ದವು. ಹಾಗಾಗಿ ಬಹುಬೇಗ ಪತ್ರಿಕೆ ಪ್ರಸಾರ ಬೆಳೆದು ಕೊರವಂಜಿ ಮನೆಮಾತಾಯಿತು. ನನಗೆ ತಿಳಿಯದೆಯೇ ಕೊರವಂಜಿಯ ಖ್ಯಾತಿಯಡನೆ ನನಗೂ ಸಹಾ ಅನೇಕ ಅಭಿಮಾನಿಗಳು ಸಿಗುವಂತಾಯಿತು. ಒಂದು ದಿನ ನಾನು ಸೈಕಲ್‌ನಲ್ಲಿ ಹೋಗುತ್ತಿದ್ದಾಗ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್ ಕೈಗೆ ಸಿಕ್ಕಿಕೊಂಡೆ. ನನ್ನ ಸೈಕಲ್ಲಿನ ಲೈಸೆನ್ಸ್ ಪ್ಲೇಟನ್ನು ನಾನು ನವೀಕರಿಸಿರಲಿಲ್ಲ. ಹಲವು ತಿಂಗಳುಗಳ ಹಿಂದೆಯೇ ಅದರ ಅವಧಿ ಮುಗಿದಿತ್ತು. ನನಗೋ ಝುಂಗಾಬಲವೇ ಉಡುಗಿಹೋಗಿತ್ತು.

ನನಗೆ ಮೈಯಲ್ಲಿ ಸರಿ ಇರಲಿಲ್ಲ, ನಾನು ಊರಿನಲ್ಲಿ ಇರಲಿಲ್ಲ, ಅಂತೆಲ್ಲಾ

ಏನೇನೋ ಸಬೂಬುಗಳನ್ನು ಹೇಳಿದರೂ ಆತ ತನ್ನ ಪಟ್ಟು ಬಿಡಲಿಲ್ಲ. ತಕ್ಷಣವೇ ನಾನು ಲೈಸೆನ್ಸನ್ನು ನವೀಕರಿಸುತ್ತೇನೆಂದು ಹೇಳಿದರೂ ಏನೋ ಪ್ರಯೋಜನವಾಗಲಿಲ್ಲ. ಅವನು ನನ್ನ ಹೆಸರು ವಿಳಾಸ ಎಲ್ಲವನ್ನು ಕೇಳಿದ. ಒಂದು ಕ್ಷಣ ನನಗೆ ತಪ್ಪು ಹೆಸರು ಮತ್ತು ವಿಳಾಸವನ್ನು ಕೊಡುವ ಯೋಚನೆ ಮನದಲ್ಲಿ ಸುಳಿಯಿತು. ಆದರೆ ಧೈರ್ಯ ಬರಲಿಲ್ಲ. ನಿಜ ಹೇಳಿಬಿಟ್ಟೆ. ಅವನು ನನ್ನನ್ನು ಮಾರನೆಯ ದಿನ ಲೈಸೆನ್ಸ್ ಆಫೀಸಿಗೆ ಬರಲು ಹೇಳಿದನಂತರ ನಾನು ಸೈಕಲ್ ಹತ್ತಿ ಹೊರಡುತ್ತಿದ್ದಾಗ, ಆತ "ನೀನು ಕೊರವಂಜಿ ಲಕ್ಷ್ಮಣ್ ಏನು ?" ಅಂತ ಕೇಳಿದ. ನಾನು ಹೌದೆಂದಾಗ ಆತನಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅವನು ನನ್ನ ಕೈಕುಲುಕಿ, ತಾನು ಬರೆದಿದ್ದ ತಪ್ಪಿತಸ್ಥರ ಪಟ್ಟಿಯಿಂದ ನನ್ನ ಹೆಸರನ್ನು ಹೊಡೆದು ಹಾಕಿ ನನ್ನನ್ನು ಮನೆಗೆ ಕಳಿಸಿದ"

ಲಕ್ಷ್ಮಣ್‌ಗೆ ಚಿಕ್ಕಂದಿನಿಂದಲೂ ಚಿತ್ರಕಲೆಯಲ್ಲಿ ಅತೀವ ಆಸಕ್ತಿ ಮತ್ತು ಪ್ರತಿಭೆ ಎರಡೂ ಇದ್ದವು. ಪ್ರಾಥಮಿಕ ಶಾಲೆಯಲ್ಲಿದ್ದಾಗ ಒಮ್ಮೆ ಕ್ಲಾಸ್ ಟೀಚರ್ ಮಕ್ಕಳಿಗೆಲ್ಲಾ ಒಂದು ಎಲೆಯನ್ನು ಬರೆಯುವ ಸವಾಲನ್ನು ಒಡ್ಡಿ ಹೊರಗೆ ಹೋದರು. ಸೈಕಲ್ ಕಚ್ಚೆ, ಬಿಗಿಯಾದ ಕೋಟು ಮತ್ತು ಪೇಟ ಧರಿಸಿದ್ದ ಈ ಮೇಷ್ಟರು ಆಗಾಗ ಹೊರಗೆ ಹೋಗುತ್ತಿದುದಕ್ಕೆ ಕಾರಣ ಅವರ ಬೀಡಿ ಸೇದುವ ಚಟ ಅಂತ ಲಕ್ಷ್ಮಣ್ ಹೇಳುತ್ತಾರೆ. ತಮ್ಮ ಮುಂದಿದ್ದ ಸವಾಲನ್ನು ಇದುರಿಸಲು ಮಕ್ಕಳೆಲ್ಲಾ ಹೆಣಗಾಡಲು ಪ್ರಾರಂಭಿಸಿದರು. ಒಬ್ಬ ವಿದ್ಯಾರ್ಥಿ ಬಾಳೆ ಎಲೆ ಬರೆಯಲು ಪ್ರಾರಂಭಿಸಿ ಅದು ಸ್ಲೇಟಿನ ಅಂಚನ್ನೂ ದಾಟಿಹೋಗುವಂತೆ ತೋರಿತು. ಇನ್ನೊಬ್ಬ ಎಲೆ ಬದಲು ಆನೆ ಬರೆಯುತ್ತೇನೆ. ಅದೇ ನನಗೆ ಬರೋದು ಅಂತ ಹೇಳಿ ಬರೆಯಲು ಶುರುಮಾಡಿದ. ಲಕ್ಷ್ಮಣ್ ತದೇಕ ಚಿತ್ತದಿಂದ ಕ್ಲಾಸಿನ ಕಿಟಕಿಯಾಚೆ ಕಾಣುತ್ತಿದ್ದ ಅರಳೀಮರದ ತೆಳು ರೆಂಬೆಯ ತುದಿಯಲ್ಲಿ ತೂಗಾಡುತ್ತಿದ್ದ ಅರಳೀ ಎಲೆಯನ್ನು ಚಿತ್ರಿಸಲು ಪ್ರಾರಂಭಿಸಿದ. ಸ್ವಲ್ಪ ಸಮಯದ ನಂತರ ಮೇಷ್ಟರು ಕ್ಲಾಸಿನ ಒಳಗೆ ಬಂದದ್ದೂ ಲಕ್ಷ್ಮಣ್ ಗಮನಿಸಲಿಲ್ಲ. ಮೇಷ್ಟರು ಎಲ್ಲರನ್ನೂ ಒಬ್ಬೊಬ್ಬರನ್ನಾಗಿ ಕರೆದು ತಮ್ಮ ಕಲಾಕೃತಿಯನ್ನು ಪ್ರದರ್ಶಿಸಲು ಹೇಳಿದರು. ಲಕ್ಷ್ಮಣ್ ಸರದಿ ಬಂದಾಗ ಮೇಷ್ಟು ಅವನ ಸ್ಲೇಟನ್ನು ದೃಷ್ಟಿಸಿ ನೋಡಿ. "ನೀನೇ ಬರೆದಿದ್ದಾ ಇದು?" ಅಂತ ಪ್ರಶ್ನಿಸಿದರು. ಲಕ್ಷ್ಮಣ್ ಹೆದರಿ ಹಿಂದೆ ಸರಿದ.. ಆಮೇಲೆ ಧೈರ್ಯ ತಂದುಕೊಂಡು, " ನೀವೇ ಬರೆಯಲು ಹೇಳಿದ್ದರಲ್ಲಾ ಸಾರ್. ಕಿಟಕಿಯಾಚೆ ನನಗೆ ಕಂಡದ್ದನ್ನು ಬರೆದೆ...." ಅಂತ ತಡಬಡಿಸುತ್ತಾ ಹೇಳಿದ.. ಮೇಷ್ಟರು ನಸು ನಗುತ್ತಾ, ಅವನ ಸ್ಲೇಟನ್ನು ಎತ್ತಿ ಹಿಡಿದು "ಮಕ್ಕಳೇ ಇಲ್ಲಿ ನೋಡಿ. ಲಕ್ಷ್ಮಣ್ ಎಷ್ಟು ಚೆನ್ನಾಗಿ ಅರಳಿ ಎಲೆಯ ಚಿತ್ರ ರಚಿಸಿದ್ದಾನೆ." ಎಂದು ಹೇಳಿ, ಅನಂತರ ಲಕ್ಷ್ಮಣ್ ಕಡೆಗೆ ತಿರುಗಿ, "ಒಂದು ದಿನ ನೀನು ಶ್ರೇಷ್ಠ ಕಲೆಗಾರನಾಗುವಿ. ಹೀಗೇ ಮುಂದುವರಿಸು" ಅಂತ ಪ್ರೋತ್ಸಾಹಿಸಿದರಂತೆ.

ಮುಂದೆ ಲಕ್ಷ್ಮಣ್ ಮುಂಬಯಿಯಲ್ಲಿನ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಗೆ ವ್ಯಂಗ್ಯ ಚಿತ್ರಕಾರರಾಗಿ ಸೇರಿದರು. ಆಗ ನಡೆದ ಒಂದು ಘಟನೆ.

ಲಕ್ಷ್ಮಣ್‌ಗೆ ಮೊದಲಿನಿಂದಲೂ ಇಂಗ್ಲೀಷ್ ವ್ಯಂಗ್ಯಚಿತ್ರಕಾರರ ಕಲೆಗಾರಿಕೆಯನ್ನು ತುಂಬ ಮೆಚ್ಚಿಕೊಂಡಿದ್ದರು. ಅದರಲ್ಲೂ ಡೇವಿಡ್ ಲೋ ಅವರ ಕಲಾ ನಿಪುಣತೆ ಇವರಿಗೆ ಇಷ್ಟವಾಗಿತ್ತು. ಒಂದು ದಿನ ಲಕ್ಷ್ಮಣ್ ಎಂದಿನಂತೆ ಬೆಳಗ್ಗೆ ಎಂಟೂವರೆಗೆ ಅವರ ಆಫೀಸನ್ನು ಸೇರಿದಾಗ ಅವರಿಗೊಂದು ಆಶ್ಚರ್ಯ ಕಾದಿತ್ತು. ಇವರ ಮೇಜಿನ ಮುಂದೆ ಇದ್ದ ಕುರ್ಚಿಗಳಲ್ಲಿ ಆಂಗ್ಲ ದಂಪತಿಗಳಿಬ್ಬರು ಕುಳಿತಿದ್ದರು. ಮುಂದೆ ನಡೆದ ಸಂಗತಿಗಳನ್ನು ಲಕ್ಷ್ಮಣ್ ಬಾಯಲ್ಲೇ ಕೇಳಿ.

"ಅವರು ಡೇವಿಡ್ ಲೋ ದಂಪತಿಗಳಾಗಿದ್ದರು. ಇವರನ್ನು ಪ್ರತ್ಯಕ್ಷವಾಗಿ ನೋಡಲು ನಾನು ಚಿಕ್ಕಂದಿನಿಂದಲೂ ಬಹು ಉತ್ಸುಕನಾಗಿದ್ದೆ. ಆದರೆ ಇಂಗ್ಲೆಂಡಿನಲ್ಲಿದ್ದ ಅವರೆಲ್ಲಿ, ಬಡಪಾಯಿ ನಾನೆಲ್ಲಿ ಅಂದುಕೊಂಡು ಸುಮ್ಮನಾಗಿದ್ದೆ. ಈಗ ಅವರು ನನ್ನ ಮುಂದೆಯೇ ನನ್ನ ಆಫೀಸಿನಲ್ಲಿ ಕಾಣಿಸಿಕೊಂಡಾಗ ನನಗಾದ ಆಶ್ಚರ್ಯ ಸಂತೋಷ ಹೇಳತೀರದು. ನಾನು ಪ್ರಾರಂಭದ ಗಾಬರಿ ಸಂತೋಷಗಳನ್ನು ನಿಯಂತ್ರಣಕ್ಕೆ ತಂದುಕೊಂಡು ಅವರ ಕುಶಲ ವಿಚಾರಿಸಿದೆ. ಅವರುಗಳು ಹಾಂಗ್‌ಕಾಂಗ್‌ಗೆ ತಮ್ಮ ಪುತ್ರಿಯರನ್ನು ನೋಡಲು ಯಾತ್ರೆ ಹೊರಟಿದ್ದರಂತೆ. ಅವರ ಹಡಗು ಮುಂಬೈನಲ್ಲಿ ಸ್ವಲ್ಪ ಕಾಲ ತಂಗುವುದಿತ್ತಂತೆ. ಸ್ವಲ್ಪ ಕಾಲಾಡಿಸೋಣವೆಂದು ಬಲಾರ್ಡ್ ಪಿಯರಿನಲ್ಲಿ ಇಳಿದಾಗ ಹತ್ತಿದಲ್ಲಿದ್ದ ಟೈಮ್ಸ್ ಆಫ್ ಇಂಡಿಯಾ ಆಫೀಸು ಕಣ್ಣಿಗೆ ಬಿದ್ದು, ನನ್ನ ನೆನಪಾಗಿ, ನಾನು ಇದ್ದರೆ ನೋಡೋಣ ಅಂತ ಒಂದು ಛಾನ್ಸ್ ತೆಗೆದುಕೊಂಡರಂತೆ.

ನಾನು ಲೋ ದಂಪತಿಗಳನ್ನು ಒಂದು ಟ್ಯಾಕ್ಸಿಯಲ್ಲಿ ಕುಳ್ಳಿರಿಸಿಕೊಂಡು ಮುಂಬೈ ತೋರಿಸಲು ಕರೆದುಕೊಂಡು ಹೋದೆ. ಊರೆಲ್ಲಾ ನೋಡಿದ ಮೇಲೆ ನಾವು ಮಲಬಾರ್ ಹಿಲ್ ಜಾಗವನ್ನು ಸೇರಿದೆವು. ಆ ಎತ್ತರದಿಂದ ಮರೀನ್ ಡ್ರೈವ್ , ಚೌಪಾಟಿ, ಅರೇಬಿಯನ್ ಸಮುದ್ರ, ಎಲ್ಲವೂ ಬಹು ಮನೋಹರವಾಗಿ ಕಾಣುತ್ತಿದ್ದವು. ನಾವು ನಿಂತ ಜಾಗದಲ್ಲಿ , ಸುವಾಸನಾಯುಕ್ತ ಹೂವುಗಳು, ಹಕ್ಕಿಗಳ ಚಿಲಿಪಿಲಿ, ಇವುಗಳೆಲ್ಲಾ ತುಂಬಾ ಅಪ್ಯಾಯಮಾನವಾಗಿತ್ತು ನಾನು ಹೆಮ್ಮೆಯಿಂದ ಲೋ ದಂಪತಿಗಳನ್ನು ಕುರಿತು, "ಮಿಸ್ಟರ್ ಲೋ, ಸಾಮಾನ್ಯವಾಗಿ ಪರದೇಶದ ಪ್ರವಾಸಿಗರು ಇಂಡಿಯಾಗೆ ಬಂದಾಗ ನಮ್ಮ ಈ ನಾಡು ಸಾಧುಗಳ, ಹಾವಾಡಿಗರ ಹುಲಿಗಳ ದೇಶ ಅಂತ ಭಾವಿಸಿರುತ್ತಾರೆ. ಇಂದು ನೀವು ವಿಭಿನ್ನವಾದ ಭಾರತದ ನೆನಪುಗಳನ್ನು ತಮ್ಮೊಂದಿಗೆ ಒಯ್ಯುವಿರೆಂದು ಭಾವಿಸುವೆ." ಎನ್ನುತ್ತಿದ್ದಾಗಲೇ, ನನಗೆ ಎಲ್ಲಿಂದಲೋ ಪುಂಗಿಯ ನಾದ ಕೇಳಿಸಿತು. ಅದು ಹೆಚ್ಚುತ್ತ ಬಂದಂತೆ ಹತ್ತಿರದ ಮರದ ಬದಿಯಿಂದ ಹಾವಾಡಿಗನೊಬ್ಬ ಪುಂಗಿ ಊದುತ್ತಾ ಬಂದ. ಲೋ ದಂಪತಿಗಳು ಅವನನ್ನು ನೋಡಿಯೂ ನೋಡದ ಹಾಗೆ ನಿಂತಿದ್ದರು. ನಾನೇ ಜೋರಾಗಿ ನಗುತ್ತಾ, "ಬನ್ನಿ, ಇನ್ನು ಸಾಧು, ಹುಲಿಗಳು ಬರುವ ಮುನ್ನ ಇಲ್ಲಿಂದ ದೂರ ಸಾಗೋಣ "ಎಂದೆ "

ಕೊರವಂಜಿಗೆ ಲಕ್ಷ್ಮಣ್ ರಚಿಸಿದ ವ್ಯಂಗ್ಯಚಿತ್ರಗಳ ಮೂಲ ಪ್ರತಿಗಳನ್ನು ರಾ.ಶಿ.ಯವರು ಜೋಪಾನಮಾಡಿದ್ದರು. ಅವರ ಕಾಲವಾದ ನಂತರ ಅವೆಲ್ಲಾ ನನಗೆ ಬಳುವಳಿಯಾಗಿ ಬಂದವು. ಈ ಮೂಲಪ್ರತಿಗಳನ್ನು ಮತ್ತು ಅವುಗಳೊಂದಿಗೆ ಲಕ್ಷ್ಮಣ್‌ರ ಇತರ ವ್ಯಂಗ್ಯಚಿತ್ರಗಳ ಪ್ರತಿಗಳನ್ನು ಸೇರಿಸಿ ಕಾರ್ಟೂನಿಸ್ಟ್ಸ್ ಅಸೋಸಿಯೇಷನ್ ಅಫ್ ಇಂಡಿಯಾ ಅವರು ಕೊರವಂಜಿ ಅಪರಂಜಿ ಟ್ರಸ್ಟ್‌ನ ಸಲಹಕಾರದಿಂದ ಹಿಂದೊಮ್ಮೆ ಒಂದು ಪ್ರದರ್ಶನವನ್ನು ಏರ್ಪಡಿಸಿದ್ದರು.

ವ್ಯಂಗ್ಯ ಚಿತ್ರಗಳ ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಲು ಆರ್.ಕೆ.ಲಕ್ಷ್ಮಣ್ ರ ಸೊಸೆ ಶ್ರೀಮತಿ ಉಷಾ ಲಕ್ಷ್ಮಣ್ ದೂರದ ಪುಣೆಯಿಂದ ಇದಕ್ಕಾಗಿಯೇ ಬಂದದ್ದು ನಿಜಕ್ಕೂ ಮಹತ್ವದ ಸಂಗತಿ. ಅವರೊಂದಿಗೆ ಅವರ ಬಂಧುಮಿತ್ರರೂ ಅಲ್ಲಿ ಸೇರಿದ್ದರು. ಕಾರ್ಟೂನಿಸ್ಟ್ಸ್ ಅಸೋಸಿಯೆಷನ್ನಿನ ಅಧ್ಯಕ್ಷರಾದ ನರೇಂದ್ರ ಅವರು ಬೇಲೂರು ಮತ್ತು ನನ್ನನ್ನು ಮುಖ್ಯ ಅತಿಥಿಗಳಾಗಿ ಬಂದು ನಾಲ್ಕು ಮಾತುಗಳನ್ನಾಡಬೇಕೆಂದು ವಿನಂತಿಸಿಕೊಂಡಿದ್ದರು. ನಮ್ಮೊಂದಿಗೆ ನಮ್ಮ ಟ್ರಸ್ಟಿನ ಸದಸ್ಯರಾದ ಆನಂದ ಮತ್ತು ಸಿ.ಆರ್.ಸತ್ಯ ಇವರುಗಳೂ ಇದ್ದದ್ದು ಚೆನ್ನಾಗಿತ್ತು.

ಜ್ಯೋತಿಯನ್ನು ಬೆಳಗುವುದರ ಮೂಲಕ ಉಷಾ ಅವರು ಪ್ರದರ್ಶನದ ಉದ್ಘಾಟನೆಯನ್ನು ವಿಧಿವತ್ತಾಗಿ ಮಾಡಿದರು.

ಪ್ರದರ್ಶನದಲ್ಲಿ ವೀಕ್ಷಣೆಗಾಗಿ ಇಟ್ಟಿದ್ದ ವ್ಯಂಗ್ಯಚಿತ್ರಗಳಲ್ಲಿ ಹದಿನಾಲ್ಕು ಚಿತ್ರಗಳ ಮೂಲಪ್ರತಿಗಳೇ ಇದ್ದದ್ದು ಒಂದು ವೈಶಿಷ್ಯವೆಂದೇ ಹೇಳಬಹುದು. ಮಿಕ್ಕ ನಲವತ್ತು ವ್ಯಂಗ್ಯಚಿತ್ರಗಳು ನಾನು ಸ್ಕ್ಯಾನ್ ಮಾಡಿ ಮುದ್ರಿಸಿದ್ದವು. ಲಕ್ಷ್ಮಣ್ ಚಿತ್ರಗಳೆಂದರೆ ಕೇಳಬೇಕೆ. ಒಂದೊಂದೂ ಅತಿ ಕುಶಲತೆಯಿಂದ ರಚಿಸಿದ ಕೃತಿಗಳು. ಕಣ್ಣು, ಕಿವಿ, ಮೂಗು ಬಾಯಿಗಳನ್ನು ಕೆಲವೇ ಸ್ವಿಗಲ್‌ಗಳಿಂದ ರಚಿಸಿ ಮಾನವ ಸಹಜ ಭಾವನೆಗಳಾದ ಕೋಪ, ನಾಚಿಕೆ, ಆಶ್ಚರ್ಯ ಸಂತಸ ಇವುಗಳನ್ನು ಲಕ್ಷ್ಮಣ್ ಮೂಡಿಸಿರುವ ರೀತಿ ಬೆರಗುಗೊಳಿಸುವಂತಹದು.

ನರೇಂದ್ರರ ಪ್ರಾಸ್ತಾವಿಕ ಭಾಷಣದ ನಂತರ ನನ್ನ ಸರದಿ. ರಾ.ಶಿ., ನಾ.ಕಸ್ತೂರಿ ಇವರುಗಳು ಲಕ್ಷ್ಮಣ್‌ನನ್ನು ಸಂಪರ್ಕಿಸಿದ ಕ್ಷಣದಿಂದ ಹಿಡಿದು ಆತ ಕೊರವಂಜಿಯ ಒಂದು ಅವಿಭಾಜ್ಯ ಅಂಗವೇ ಆಗಿಹೋದದ್ದನ್ನೆಲ್ಲಾ ನನ್ನ ನೆನಪಿನ ಬುತ್ತಿಯಿಂದ ಹೊರತೆಗೆದು ಹಂಚಿಕೊಂಡೆ. ಬೇಲೂರರು ಲಕ್ಷ್ಮಣ್ ರವರ ಕೊರವಂಜಿಯೇತರ ಹಾಸ್ಯ ಚಟಾಕಿಗಳನ್ನು ಕೇಳುಗರಿಗೆ ಉಣಬಡಿಸಿದರು. ಶ್ರೀಮತಿ ಉಷಾರವರು ತಮ್ಮ ಮಾವನವರ ಬಗ್ಗೆ ಅತ್ಯಂತ ಆಪ್ತವಾಗಿ ಮಾತನಾಡಿದರು. "ಲಕ್ಷ್ಮಣ್ ರವರು ಕರ್ನಾಟಕ ಮತ್ತು ಕನ್ನಡ ಭಾಷೆಯನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಅವರ ಚಿತ್ರಗಳು ಮನುಷ್ಯನ ಭಾವನೆಗಳಿಗೆ ಬೆಲೆಯನ್ನು ಕೊಡುತ್ತಿದ್ದವು. ಇವರನ್ನು ಯಾರಾದರೂ ನನ್ನನ್ನು ಕುರಿತು,' ಇವರು ನಿಮ್ಮ ಸೋಸೇನಾ?' ಎಂದು ಕೇಳಿದರೆ, ಅವರು, ತಕ್ಷಣ, 'ಇಲ್ಲ, ಈಕೆ ನನ್ನ ಮಗಳು. ನನ್ನ ಮಗನ ಹೆಂಡತಿ' ಎಂದುಬಿಡುತ್ತಿದ್ದರು." ಎಂದೆಲ್ಲಾ ಶ್ರೀಮತಿ ಉಷಾ ಲಕ್ಷ್ಮಣ್ ಅವರು ನೆನಪಿಸಿಕೊಂಡರು. ಮಹಾರಾಷ್ಟ್ರದ ಜೆ.ಜೆ. ಕಲಾಶಾಲೆಯ ಆವರಣದಲ್ಲಿ ಲಕ್ಷ್ಮಣ್ ಅವರ ನೆನಪಿನಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಲು ಮುಂದಾಗಿದ್ದು ಅವರನ್ನು ಮುಂದಿನ ಪೀಳಿಗೆಗೆ ಜೀವಂತವಾಗಿರಿಸುವ ನಿಟ್ಟಿನಲ್ಲಿ ಇದೊಂದು ಸ್ವಾಗತಾರ್ಹ ಬೆಳವಣಿಗೆ ಎಂದು ಉಷಾ ಅವರು ಸಂತಸಪಟ್ಟರು.

1973ರಲ್ಲಿ ಭಾರತ ಸರ್ಕಾರದಿಂದ ಲಕ್ಷ್ಮಣ್‌ಗೆ ಪದ್ಮಭೂಷಣ್ ಮತ್ತು 2005ರಲ್ಲಿ ಪದ್ಮವಿಭೂಷಣ್ ಪ್ರಶಸ್ತಿಗಳು ಲಭಿಸಿದವು. 1984ರಲ್ಲಿ ರಮೋನ್ ಮ್ಯಾಗ್ಸೇಸೇ ಸಂಸ್ಥೆ ಅವರಿಗೆ ಸಂವಹನ ಕಲೆಗಳಲ್ಲಿ ಸೃಜನಶೀಲತೆ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಸಿ.ಎನ್.ಎನ್. ಐ ಬಿ ಎನ್ 18 ಟಿವಿ ಛಾನೆಲ್ಲಿನವರು ಲಕ್ಷ್ಮಣ್‌ಗೆ ಜನವರಿ 2008ರಲ್ಲಿ ಲೈಫ್‌ಟೈಮ್ ಅಚೀವ್‌ಮೆಂಟ್ ಅವಾರ್ಡ್ ನೀಡಿ ಸನ್ಮಾನಿಸಿದರು. ತೊಂಭತ್ತನಾಲ್ಕು ವರ್ಷಗಳ ಸಾರ್ಥಕ ಜೀವನವನ್ನು ನಡೆಸಿ ಲಕ್ಷ್ಮಣ್ 2005ರಲ್ಲಿ ವಿಧಿವಶರಾದರು.

ಈಗ ಪುಣೆಯಲ್ಲಿ ಆರ್.ಕೆ.ಲಕ್ಷ್ಮಣ್ ಮ್ಯೂಸಿಯಂ ಸ್ಥಾಪಿತವಾಗಿದೆ. ಗೂಗಲ್ ನಲ್ಲಿ ಅದರ ಸಮಸ್ತ ವಿವರಗಳೂ ದೊರಕುತ್ತವೆ. ಪುಣೆಗೆ ತೆರಳುವ ಅವಕಾಶವಿದ್ದಲ್ಲಿ ಅಗತ್ಯವಾಗಿ ಈ ಮ್ಯೂಸಿಯಂ ಅನ್ನು ಭೇಟಿಮಾಡಿ. ಲಕ್ಷ್ಮಣ್ ಅವರ ಪ್ರತಿಭೆಯ ಜೀವಂತ ಅನುಭವ ನಿಮ್ಮದಾದೀತು. ■

**ನಮ್ಮ ಜೀವನದಲ್ಲಿ ಎಲ್ಲ ದಿನಗಳಿಗಿಂತ ಅತ್ಯಂತ ವ್ಯರ್ಥವಾದ ದಿನ ಎಂದರೆ ನಾವು ನಗದಿರುವ ದಿನ.**

**–ಚಾರ್ಲಿ ಚಾಪ್ಲಿನ್**

# ಆರ್.ಕೆ. ಲಕ್ಷ್ಮಣ್‌ರ ರಾಜಕೀಯ ವ್ಯಂಗ್ಯಚಿತ್ರಗಳು





ಈಗಲೂ ನೀನೊಂದು ಕೈ ಕೊಟ್ರೆ ಎತ್ತೋಕ್ಕಾಗತ್ತೆ ನಂಗೆ




ಬುಲ್‌ಡಾಗಿನ ಬಡಾಯಿಗೆಲ್ಲಾ ಬತ್ತಿ ಹಚ್ಚಿಟ್ಟ ಆಟ್ಟ

# ಆರ್.ಕೆ. ಲಕ್ಷ್ಮಣ್‌ರ ರಾಜಕೀಯ ವ್ಯಂಗ್ಯಚಿತ್ರಗಳು



ವೈಸ್‌ರಾಯಿಗೆ ಜಿನ್ನಾ ಕೊಟ್ಟ ಸಹಕಾರದ ಕೈ



ಸಾಮ್ರಾಜ್ಯ ಸಿಂಹಕ್ಕೆ ಬೊಚ್ಚು ಬಾಯಂತೆ

# ಮೂರು ಮಿನಿ, ಹನಿ ಕಥೆಗಳು

ಎಸ್.ಎನ್. ಪುರಾಣಿಕ್

### ಧೂರ್ತ ಸನ್ಯಾಸಿ, ಕಿಲಾಡಿ ಸೇಟು

ಆಗರ್ಬ್ ಶ್ರೀಮಂತ ಮನೆಯ ಮುಂದಿನ ಕಟ್ಟೆಯ ಮೇಲೆ ಕುಳಿತ್ತಿದ್ದ. ಒಬ್ಬ ಧೂರ್ತ ಸಾಧು ಬಂದು, "ಯಜಮಾನರೇ ನಿನ್ನೆ ಕನಸಿನಲ್ಲಿ ನೀವು ನಿಮ್ಮ ಆಸ್ತಿ, ಬಂಗಾರ, ಬೆಳ್ಳಿ, ನಗದು, ಮನೆ ತೋಟ ಮತ್ತು ಯಾವತ್ತೂ ಎಲ್ಲ ಆಸ್ತಿಯನ್ನು ನನಗೇ ದಾನ ಮಾಡಿದ್ದೀರಿ, ಆದರೆ ದಾನದ ಜೊತೆಗೆ ದಕ್ಷಿಣೆ ಕೂಡುವದನ್ನು ಮರೆತಿದ್ದೀರಿ. ದಯವಿಟ್ಟು ಈಗ ಕೊಟ್ಟರೆ ದಾನದ ಪ್ರಕ್ರಿಯೆ ಸಂಪೂರ್ಣ ಆಗುತ್ತದೆ, ಮತ್ತು ನಿಮಗೆ ದಾನ ಕೊಟ್ಟ ಪುಣ್ಯ ಬರುತ್ತದೆ. ಎಂದನು.

ಕಿಲಾಡಿ ಶ್ರೀಮಂತ ಸೇಟು "ಕನಸಿನಲ್ಲಿ ಎಲ್ಲವನ್ನೂ ದಾನ ಮಾಡಿರಬಹುದು. ದಕ್ಷಿಣೆಯನ್ನೂ ನಾಳೆ ಕನಸಿನಲ್ಲಿ ಬಂದು ಸ್ವೀಕರಿಸಬೇಕು. ಬಹು ಆನಂದಿಂದ ಕೊಡುತ್ತೇನೆ". ಎಂದು ಹೇಳಿದ. ಸಾಧು ಸೇರು ಆದರೆ ಸೇಟು, ಸವ್ವಾಸೇರು. ಬಂದ ದಾರಿಗೆ ಸುಂಕವಿಲ್ಲ ಎಂದುಕೊಂಡು ತಿರುಗಿ ಹೋದ.

### ಯಜಮಾನರದೇ ವೇದ ವಾಕ್ಯ



ದೊಡ್ಡ ಮನೆ ಯುಜಮಾನರದು ರುಬಾಬು ದೌಲತ್ತು ಏನೂ ಕಮ್ಮಿ ಇರಲಿಲ್ಲ. ಮನೆತುಂಬ ಮಕ್ಕಳು, ಮೊಮ್ಮಕ್ಕಳು, ಆಳು ಕಾಳು ಮತ್ತು ಗುಮಾಸ್ತರು ಇದ್ದರು. ಎಲ್ಲರ ಮೇಲೆ ಹರಿಹಾಯುವದೇ ತಮ್ಮ ಕೆಲಸ ಎಂದು ತಿಳಿದಿದ್ದರು.

ಒಂದು ದಿನ ಮನೆ ಒಳಗೆ ಬರುವಾಗ ದಾರಿಯಲ್ಲಿ ಇಟ್ಟ ಕಾಜಿನ ಲೋಟ ಎಡವಿದರು. ಲೋಟ ಚೂರು ಚೂರಾಯಿತು. ಯಜಮಾನರು "ಯಾರು ಓಡಾಡು ದಾರಿಯಲ್ಲಿ ಗ್ಲಾಸು ಇಟ್ಟಿದ್ದರು ? ಸ್ವಲ್ಪ ಜ್ಞಾನ ಇರಬೇಕು. ದಾರಿಯಲ್ಲಿ ಗ್ಲಾಸು ಇಟ್ಟರೆ ಒಡೆಯದೇ ಹಾಗೇ ಇರುತ್ತದೆಯೇ ? ಎಂದು ಕೂಗಾಡಿದರು.

ಮರುದಿನ 6ವರುಷದ ಮೊಮ್ಮಗ ಮನೆಯೊಳಗೆ ಬರುವಾಗ ದಾರಿಯಲ್ಲಿ ಇಟ್ಟ ಗ್ಲಾಸ ಎಡವಿದನು. ಅದು ಚೂರು ಚೂರಾಯಿತು. ಅಲ್ಲಿಯೇ ಪೇಪರ್ ಓದುತ್ತಿದ್ದ ಯಜಮಾನರು "ಏನು, ಕಣ್ಣು ನೆತ್ತಿಯಮೇಲೆ ಇದೆಯಾ? ದಾರಿಯಲ್ಲಿ ಓಡಾಡುವಾಗ ಎಲ್ಲಿ ಏನು ಇದೆ ನೋಡಿಕೊಂಡು ನಿಧಾನವಾಗಿ ಓಡಾಡಬೇಕು. ಸುಮ್ಮನೆ ದುಡ್ಡು ಹಾಳು." ಎಂದರು.

### ಜ್ಯೋತಿಷ್ಯ ಸಲಹೆ

ಪ್ರಸಿದ್ಧ ಜ್ಯೋತೀಷ್ಯ ಮಾರ್ತಾಂಡ ಪಂಡಿತ್ ನಿಖಿರಾನಂದ ಸ್ವಾಮೀ ತಮ್ಮ ಊರಿಗೆ ಬಂದಿದ್ದಾರೆ ಎಂಬ ಸುದ್ದಿ ಇಡೀ ಊರಲ್ಲಿ, ಅದೂ ಚಿಕ್ಕ ಹಳ್ಳಿಯಲ್ಲಿ ಬಂದದ್ದು ಬಹಳ ಚರ್ಚೆಯ ವಿಷಯ ಆಯಿತು ಅದೇ ದಿನ ಪಕ್ಕದ ಮನೆ ಕಮಲಮ್ಮ

ಯಜಮಾನರನ್ನು ಕಾಡಿ, ಬೇಡಿ, ಒಪ್ಪಿಸಿ ವಯಸ್ಸಾದ ಅತ್ತೆಯನ್ನು ವೃದ್ಧಾಶ್ರಮಕ್ಕೆ ಸೇರಿಸಿದ್ದರು ಆದರೂ ತಾನು ಮಾಡಿದ್ದು ಸರಿಯೋ ಅಥವಾ ತಪ್ಪೋ ಎಂಬ ಪಾಪ ಪ್ರಜ್ಞೆ ಕಾಡುತ್ತಿತ್ತು.

ಅದಕ್ಕೇ ಕಮಲಮ್ಮತಾನೂ, ತನ್ನ ಭವಿಷ್ಯವನ್ನು ಪಂಡಿತರ ಹತ್ತಿರ ಹೋಗಿ ತಿಳಿದುಕೊಂಡು ಬರಲು ನಿರ್ಧರಿಸಿದಳು. 501 ರೂಪಾಯಿ, ವಿಳ್ಯದಎಲೆ ಮತ್ತು ಹಣ್ಣುಗಳನ್ನು ಪಂಡಿತರ ಎದುರಿಗೆ ಇಟ್ಟು ತನ್ನ ಪ್ರಶ್ನೆ "ಪಂಡಿತರೇ, ನಾನು ಎಷ್ಟು ವರುಷ ಬದುಕುತ್ತೇನೆ, ನಂತರ ಯಾವ ಸ್ಥಳದಲ್ಲಿ ಮತ್ತು ಯಾವ ಪರಿಸ್ಥಿತಿಯಲ್ಲಿ ಸಾಯುತ್ತೇನೆ" ಎಂದು ಕೇಳಿದಳು.

ನಿಖರಾನಂದ ಪಂಡಿತರು ಜಾತಕ ನೋಡಿದರು, ಮುಖವನ್ನು ದಿಟ್ಟಿಸಿ ನೋಡಿದರು, ಬಿಳಿಹಾಳೆಯಲ್ಲಿ ಕರಿ ಸಂಖ್ಯೆ ಬರೆದು ಕೂಡಿಸಿ, ಕಳೆದು, ಗುಣಿಸಿ ಮತ್ತು ಕೊನೆಗೆ ಬೆರಳುಗಳ ಮೇಲೆ ಲೆಕ್ಕಾಚಾರ ಮಾಡಿ ಗಂಭೀರವಾದ ಧ್ವನಿಯಲ್ಲಿ "ಅಮ್ಮ, ನಿಮ್ಮ ಜಾತಕ ಅದ್ಭುತ ಮತ್ತು ಅಪೂರ್ವವಾದದ್ದು. ಸ್ಪಷ್ಟವಾಗಿ ಹೇಳಬೇಕೆಂದರೆ, ನಿಮ್ಮ ಅತ್ತೆಯ ವಯಸ್ಸಿನಷ್ಟೇ ಬದುಕುತ್ತೀರಿ. ಅವರು ಸಾಯುವ ಸ್ಥಳದಲ್ಲಿಯೇ ಮತ್ತು ಅದೇ ಪರಿಸ್ಥಿತಿಯಲ್ಲಿ ಸಾಯುತ್ತೀರಿ." ಎಂದು ಹೇಳಿದರು.

ಕಮಲಮ್ಮ ಚಿಂತಾಕ್ರಾಂತರಾದರು, ತಲೆ ಕೆಟ್ಟವರಂತೆ ಮನೆಗೆ ಓಡಿದರು. ಆ ದಿನವೇ ವೃದ್ಧಾಶ್ರಮಕ್ಕೆ ಹೋಗಿ ಅತ್ತೆಯನ್ನು ಮನೆಗೆ ಕರೆದುಕೊಂಡು ಬಂದರು ಮತ್ತು ಚನ್ನಾಗಿ ಆರೈಕೆ ಮಾಡಹತ್ತಿದರು. ■

## ಜಯಶೀಲ

**– ಮಂಗಳಾ ಎಂ. ನಾಡಿಗ್**

ಪ್ರಾಥಮಿಕ ಶಾಲೆ ಮುಗಿಸಿ ಪ್ರೌಢ ಶಾಲೆಗೆ ಸೇರಿದ ಪ್ರಾರಂಭದ ದಿನಗಳು. ಬೇರೆ ಬೇರೆ ಊರುಗಳಿಂದ, ಶಾಲೆಗಳಿಂದ ಅನೇಕರು ಹೊಸದಾಗಿ ಅಲ್ಲಿ ಸೇರಿದ್ದರು. ಎಲ್ಲರಿಗೂ ಬೇರೆ ಮಕ್ಕಳನ್ನು ಮಾತನಾಡಿಸುವ ಕುತೂಹಲ. ಎಲ್ಲರಿಗೂ ಅವರ ಬಗ್ಗೆ ತಿಳಿದುಕೊಳ್ಳುವ ಆಸೆ. ಇಷ್ಟವಾದವರನ್ನು ಜೊತೆಗೆ ಕೂರಿಸಿಕೊಳ್ಳುವ ಬಯಕೆ. ಪ್ರತಿದಿನ ಹಾಜರಿ ಹಾಕುವಾಗ ಜಯಶೀಲ ಎಂಬ ಹೆಸರಿಗೆ ಉತ್ತರವೇ ಇಲ್ಲ. ವಾರ ಕಳೆದರೂ ಯಾರೂ ಬರಲಿಲ್ಲ. ಎಲ್ಲರೂ ತಮ್ಮ ತಮ್ಮ ಜಾಗವೆಂದು ಮಾಡಿಕೊಂಡ ಮೇಲೆ ಜಯಶೀಲ ಬಂದರೆ ನಮ್ಮ ಬೆಂಚಿನಲ್ಲಿ ಕುಳಿತುಕೊಳ್ಳಲಿ ಎಂದು ಪ್ರತಿದಿನ ಹುಡುಗಿಯರೆಲ್ಲ ಮಾತನಾಡಿಕೊಳ್ಳುತ್ತಿದ್ದರು. ದಿನಕ್ಕೊಬ್ಬರು ಹೊಸಬರಂತೆ ಅನೇಕ ದಿನಗಳವರೆಗೆ ಬಂದು ಸೇರುತ್ತಲೇ ಇದ್ದರು. ಅಂದು ಹಾಜರಿ ಹಾಕಿದಾಗ ಜಯಶೀಲಾ ಎಂಬ ಹೆಸರಿಗೆ ಹುಡುಗನೊಬ್ಬ ಬಂದಿದ್ದೇನೆ ಸಾರ್ ಎಂದನು. ಆಗ ಹುಡುಗಿಯರೆಲ್ಲಾ ಅಲ್ಲಲ್ಲೇ ಗುಸುಗುಸು ಪಿಸುಪಿಸು. ಇನ್ನು ಕೆಲವರು ನಗು ತಡೆಯಲಾರದೇ ತಲೆ ತಗ್ಗಿಸಿಕೊಂಡೇ ಶಿಕ್ಷಕರಿಗೆ ತಿಳಿಯದಂತೆ ನಗುತ್ತಿದ್ದರು. ಕೆಲವರಂತೂ ತಮ್ಮ ಬೆಂಚಿನಲ್ಲಿ ಸರಿದುಕೊಂಡು ಆರಾಮವಾಗಿ ಕುಳಿತರು. ಜಯಶೀಲ ಎಂದರೆ ಹುಡುಗಿ ಎಂದುಕೊಂಡು ಅವರೆಲ್ಲ ಇಷ್ಟು ದಿನ ಜಾಗವಿಟ್ಟುಕೊಂಡು ಕಾದಿದ್ದೇ ಬಂತು.

# ಜೀವನದ ಹಾಸ್ಯಮಯ ವೈಫಲ್ಯಗಳು: ಮರ್ಫಿಯ ನಿಯಮದ ಆಟ



ಎಸ್ ರಘುನಂದನ್, ಮೈಸೂರು

ಎಲ್ಲರಿಗೂ ನಮಸ್ಕಾರ. ನಮ್ಮೆಲ್ಲರ ಜೀವನದಲ್ಲಿ ಕೆಲವು ಘಟನೆಗಳು ನಮ್ಮನ್ನು ಕಾಡುತ್ತಿರುತ್ತವೆ. ನಾವು ಒಂದು ಕೆಲಸ ಮಾಡೋಕೆ ಹೋದಾಗ, ಅದು ತಪ್ಪಾಗಿ ನಡೆಯುವುದು ಸರ್ವೇ ಸಾಮಾನ್ಯ. ಈಗ ಕಾರನ್ನು ತೊಳೆಯಲು ತೆಗೆದುಕೊಂಡು ಹೋದ ದಿನವೇ, ಮನೆಗೆ ವಾಪಸಾಗುವಾಗ ಮಳೆ ಬರುತ್ತದೆ. ಆ ಮಳೆಯಿಂದ ಕೊಚ್ಚೆ ಸಿಡಿದು ಆಗ ತಾನೇ ಪಳ ಪಳ ಮಿನುಗುತ್ತಿದ್ದ ವಾಹನ ಯಾವ ಸ್ಥಿತಿಗೆ ಬಂತು ಅನ್ನೋದು ಸಾಮಾನ್ಯವಾಗಿ ಎಲ್ಲರಿಗೂ ಆಗಿರುವ ಅನುಭವವೇ ಅಲ್ಲವೇ. ಇದಕ್ಕೆ ಒಂದು ವಿಚಿತ್ರ ಹೆಸರು ಇದೆ, ಅದನ್ನೇ 'ಮರ್ಫಿಯ ನಿಯಮ' ಅಂತ ಕರೆಯುತ್ತಾರೆ. ಸರಳವಾಗಿ ಹೇಳೋದಾದರೆ "ಯಾವುದು ಕೆಟ್ಟದಾಗಿ ಹೋಗಬಹುದೋ, ಅದು ಕೆಟ್ಟದಾಗಿಯೇ ಹೋಗುತ್ತದೆ!"

ಇದಕ್ಕೆ ಕೆಲವು ಉದಾಹರಣೆಗಳನ್ನು ನೋಡೋಣ. ನಿಮ್ಮ ಆಫೀಸ್‌ಗೆ ತಡವಾಗಿ ಹೋಗುತ್ತಿದ್ದೀರಾ ಅಂದುಕೊಳ್ಳಿ. ಆ ದಿನ ನೀವು ಹೊರಡುವಾಗ ಮಾತ್ರವೇ ಟ್ರಾಫಿಕ್ ಜಾಮ್ ಆಗುತ್ತದೆ. ನಿಮ್ಮ ಫೋನಿನ ಬ್ಯಾಟರಿ 1% ಇದ್ದಾಗ ಮಾತ್ರ ನಿಮಗೆ ಮುಖ್ಯವಾದ ಫೋನ್ ಕಾಲ್ ಬರುತ್ತದೆ. ಆ ಸಮಯದಲ್ಲಿ ನಿಮ್ಮ ಫೋನ್ ಸ್ವಿಚ್ ಆಫ್ ಆಗುತ್ತೆ. ನಿಮ್ಮ ಮನೆಯ ಕೀಲಿ ಕೈ ಎಲ್ಲಿದೆ ಅಂತ ಹುಡುಕಿದಾಗ ಅದು ಸಿಗೋದಿಲ್ಲ. ಒಂದು ತಾಸು ಹುಡುಕಿದ ನಂತರ, ನಿಮ್ಮ ಕೀಲಿ ಕೈ ನೀವು ಇಟ್ಟ ಸ್ಥಳದಲ್ಲಿಯೇ ಇರುತ್ತದೆ. ನೀವು ಅದನ್ನು ಹುಡುಕಿದಾಗ ನಿಮ್ಮ ಕಣ್ಣಿಗೆ ಕಾಣಲಿಲ್ಲ ಅಷ್ಟೇ.

ಇನ್ನೊಂದು ತಮಾಷೆಯ ಉದಾಹರಣೆ, ನಾವು ಯಾವುದಾದರೂ ಮುಖ್ಯ ಸಮಾರಂಭಕ್ಕೆ ಹೋಗಬೇಕಿರುತ್ತೆ, ಆಗಲೇ ವಿಪರೀತ ತಲೆ ನೋವು ಬರುತ್ತೆ. ಅದು ಎಷ್ಟು ಪ್ರಯತ್ನ ಪಟ್ಟರೂ ಹೋಗೋದಿಲ್ಲ, ಬರಿ ಮುಲಾಮು ಖರ್ಚು ಮಾಡಿದ್ದಷ್ಟೇ ಬಂತು ಅನ್ನಿಸುತ್ತೆ. ಆದರೆ ಒಮ್ಮೆ ನೀವು ಇವತ್ತು ಎಲ್ಲೂ ಹೋಗೋದು ಬೇಡಪ್ಪ ಅಂದು ಕೊಂಡ್ರೆ ಅಥವಾ ಸಮಾರಂಭದ ಸಮಯ ಮೀರಿದ್ದರೆ, ತಲೆ ನೋವು ಮಾಯಾ.

ಒಮ್ಮೆ ಹೀಗಾಯಿತು; ನಮ್ಮ ವೆಂಕಿ ಕೆಲಸ ಮಾಡುವಲ್ಲಿ ಸಂಬಳ ಕಮ್ಮಿ ಎಂದು ಹೊಸ ಕಂಪನಿ ಸೇರಿದರೆ, ಅಲ್ಲೂ ಕೂಡ ಹಳೆಯ ಕಂಪನಿಯ ಸಂಬಳ ಪದ್ಧತಿಯೇ ಬರಬೇಕೆ, ಇನ್ನೂ ಹೊಟ್ಟೆ ಉರಿಸುವ ಹಾಗೆ ಹಳೆಯ ಕಂಪನಿಯಲ್ಲಿ ಸಂಬಳ ಜಾಸ್ತಿ ಮಾಡಿದ್ದಾರೆ ಅನ್ನೋ ಸುದ್ದಿ ಬೇರೆ. ಒಮ್ಮೆ ಬಹಳ ಕಷ್ಟ ಪಟ್ಟು ಮಾಡಿಸಿದ ಯಾವುದೋ ಡಾಕ್ಯುಮೆಂಟು ಹೊಸ ನಿಯಮದ ಪ್ರಕಾರ ಬೇಕಾಗಿಲ್ಲ ಅನ್ನುವ ಸುದ್ದಿ ಬಂದಾಗ ಹೇಗಾಗಬೇಡ ಹೇಳಿ. ಈ ಮರ್ಫಿಯ ನಿಯಮ ನಮಗೆ ಬೆಂಬಿಡದ ಬೇತಾಳನ ಹಾಗೆ ಅನ್ನಿಸೋಲ್ಲವೇ. ಏನೋಪ್ಪ ನಾನಂತೂ ನನಗೆ ತೋಚಿದ ಹಾಗೆ ಬರೆದಿದ್ದೀನಿ, ಇದನ್ನು ಓದಿದವರು ಯಾರಿದು ತರಲೆ ಅಂದುಕೊಂಡು ಬಯ್ದುಕೊಂಡರೆ, ಅದನ್ನು ಮರ್ಫಿಯ ನಿಯಮದ ಭಾಗ ಅಂದುಕೊಳ್ಳಲೇ. ನೀವೇ ಹೇಳಿ. ■

# ದೇವರಿಗೆ ಬೇಜಾರು.......

✍ಎಚ್. ಗೋಪಾಲಕೃಷ್ಣ

ಮನೆ ಹತ್ತಿರವೇ ದೇವಸ್ಥಾನ ಅದೂ ತಿರುಪತಿ ದೇವರದ್ದು. ಬೆಳಿಗ್ಗೆ ಸಂಜೆ ರಾತ್ರಿ ಪೂಜೆ. ಪೂಜೆಯ ಮಂತ್ರಗಳು ಸದಾ ಕಿವಿ ಮೇಲೆ. ಜತೆಗೆ ವರ್ಷದಲ್ಲಿ ಕೆಲವು ತಿಂಗಳು ಮಧ್ಯಾಹ್ನದ ಹೊತ್ತು ಸೀನಿಯರ್ ಸಿಟಿಜನ್ಸ್ ಸೇರಿ ನಡೆಸುವ ಪುರಾಣ ಪುಣ್ಯ ಕತೆಗಳ ಪ್ರವಚನ. ಎಲ್ಲವೂ ತಮಿಳಿನಲ್ಲಿ.

ತಮಿಳು ದೇವರು, ತಮಿಳು ಗುರುಗಳು, ತಮಿಳು ವಿಶೇಷ ದಿನಗಳು ತಮಿಳು ಕ್ಯಾಲೆಂಡರ್, ಗೋದಾ ಪೂಜೆ, ಆಳ್ವಾರ್ ಹುಟ್ಟಿದ ಹಬ್ಬ.....ಇವುಗಳ ಅರಿವು ಹೆಚ್ಚಿಸಿದ್ದು ಈ ದೇವಸ್ಥಾನ. ಒಟ್ಟಿಗೆ ಒಂದು ನೂರು ಜನ ಕೂತು ಮೈಕ್ ನಲ್ಲಿ ಒಂದೇ ಧ್ವನಿಯಲ್ಲಿ ಅದೇನೋ ಗೊಣ ಗೋಣ ಹಾಡಬೇಕಾದರೆ ಮೊನೊಟೋನಸ್ ಧ್ವನಿ ಕೇಳಿ ಮೊದಮೊದಲು ಯಾರಿಗೆ ಏನಾಯ್ತೋ ಅಂತ ಗಾಬರಿ ಬಿದ್ದು ಅಲ್ಲಿಗೆ ಓಡುತ್ತಾ ಇದ್ದೆ. ಎಪ್ಪತ್ತು ಎಂಬತ್ತರ ವಯಸ್ಸಿನ ಗಂಡಸರು ಹೆಂಗಸರು ಕೂತು ಕೈಲಿದಪ್ಪನೆ ಬೈಂಡ್ ಮಾಡಿದ ಒಂದೇ ತರಹದ ಪುಸ್ತಕ ಹಿಡಿದು ಒಂದೇ ತರಹದ ಗೊಗ್ಗರ ಧ್ವನಿಯಲ್ಲಿ ಎದುರಿನ ಮೈಕ್‌ಗೆ ಧ್ವನಿ ದಾನ ಮಾಡುತ್ತಿದ್ದದ್ದು ನೋಡಿ ಸದ್ಯ ಯಾರಿಗೂ ಏನೂ ಆಗಿಲ್ಲ, ದೇವರು ಎಲ್ಲರನ್ನೂ ಸರಿಯಾಗಿ ಇಟ್ಟಿದೆ, ಪ್ರಪಂಚ ಸರಿಯಾಗಿ ಸುಖವಾಗಿದೆ ಎಂದು ಮನಸು ಹಗುರ ಮಾಡಿಕೊಂಡು ರೂಮು ಸೇರಿ ಹಾಯ್ ಅಂತ ಮಂಚದ ಮೇಲೆ ಮೈ ಚೆಲ್ಲುತ್ತಿದ್ದೆ.

ಒಂದು ಸಂಜೆ ದೇವಸ್ಥಾನದ ಮುಂದೆ ಈ ಪ್ರವಚನದ ಸಮಯದಲ್ಲಿ ಹಾಯ್ದು ಹೋಗಬೇಕಿತ್ತು. ನಾವು ವಾಕಿಂಗಿಸುವ ಪಾರ್ಕ್‌ನ ಒಂದು ಬಾಗಿಲು ದೇವಸ್ಥಾನದ ಪಕ್ಕ ಇರುವುದು. ಹಾಗೇ ಕಣ್ಣು ಅತ್ತ ಹಾಯಿತು. ರೇಷ್ಮೆ ಸೀರೆ ಉಟ್ಟು ತುರುಬು ಕಟ್ಟಿದ, ಬೆಳ್ಳಿ, ಚಿನ್ನದ ಫ್ರೇಮಿನ ಕನ್ನಡಕ ಧರಿಸಿದ ಕಚ್ಚೆ ಸೀರೆ ಉಟ್ಟ ಎಪ್ಪತ್ತು ಪ್ಲಸ್ ವಯಸ್ಸಿನ ಹೆಂಗಸರು ಬಲ ಭಾಗದಲ್ಲಿ ಏಳೆಂಟು ಸಾಲಿನಲ್ಲಿ ಕೂತಿದ್ದಾರೆ. ಕೆಲವರು ಎಣ್ಣೆ ನೀರು ಹಾಕಿಕೊಂಡು ಶುಚಿರ್ಭೂತರಾಗಿದ್ದಾರೆ. ಕೆಲವರು ಆಗತಾನೇ ಬ್ಯೂಟಿ ಪಾರ್ಲರ್ ನಿಂದ ಬಂದಹಾಗಿದ್ದಾರೆ. ಪ್ರತಿಯೊಬ್ಬರ ಕೈಲೂ ಅರೆ ತೆರೆದ ದಪ್ಪನೆ ಬೈಂಡ್ ಮಾಡಿದ ಒಂದೇ ರೀತಿಯ ಪುಸ್ತಕ. ಇಷ್ಟೂ ಜನರ ಮುಂದೆ ಮೊದಲ ಸಾಲಿನಲ್ಲಿ ಒಂದು ಮೈಕು. ಅವರ ಎದುರು ಇವರಿಗೆ ಮುಖ ಮಾಡಿ ಸಾಲಿನಲ್ಲಿ ಕೂತ ಸೆವೆಂಟಿ ಪ್ಲಸ್‌ನ ಗಂಡಸರು, ಅವರೂ ಐದಾರು ಸಾಲು.ಮೇಲುಕೋಟೆ ಕಚ್ಚೆ ಪಂಚೆ ಅಥವಾ ದಟ್ಟಿ ಉಟ್ಟಿದ್ದಾರೆ. ಮೇಲೆ ಅಂಚಿರುವ ಉತ್ತರೀಯ ಹೊದ್ದಿದ್ದಾರೆ, ಬೆಳ್ಳಿ, ಚಿನ್ನದ ಫ್ರೇಮಿನ ಕನ್ನಡಕ ಧರಿಸಿದ್ದಾರೆ. ಹಣೆ ತುಂಬಾ ವೆಂಕಟೇಶ್ವರ ದೇವರ ನಾಮದ ನಕಲು ಇದೆ. ಅವರೆದುರು ಸಹ ಮೊದಲನೇ ಸಾಲಿನಲ್ಲಿ ಒಂದು ಮೈಕು. ಹೆಂಗಸರು ಗಂಡಸರು ಒಂದೇ ಏಕ ತಾನದಲ್ಲಿ ಅದೇನೋ ಗುಯ್ ಗುಡುತ್ತಾ ಇದ್ದಾರೆ. ಅಸ್ಪಷ್ಟವಾದ ಗೊಗ್ಗರು ಧ್ವನಿ ಮೈಕಿನಲ್ಲಿ ಕೇಳಿಸುತ್ತಿದೆ. ಎಪ್ಪತ್ತು ಪ್ಲಸ್ ವಯಸ್ಸಿನವರು ಕೋರಸ್‌ನಲ್ಲಿ ಹಾಡಿದರೆ ಹೆಂಗಿರುತ್ತೆ ಎಂದು ತಿಳಿಯಲು ಅಲ್ಲಿಗೆ ಹೋಗಲೇಬೇಕು

ಮೊದಲಿನಿಂದಲೂ ಪುರಾಣ ಪ್ರವಚನಕ್ಕೆ ಹೋಗಿ ಅಭ್ಯಾಸವೇ ಇಲ್ಲದ ನನಗೆ ಪಾಪ ವಯಸ್ಸಾದ ಇಷ್ಟು ಜನ ಅಜ್ಜ ಅಜ್ಜಿ ಯಂದಿರು ಮನೇಲಿ ಇರುವ ಮೊಮ್ಮಕ್ಕಳನ್ನು ಆಡಿಸುವುದು ಬಿಟ್ಟು ಅದೂ ಇಲ್ಲ ಅಂದರೆ ಮಧ್ಯಾಹ್ನ ಆರಾಮವಾಗಿ ಮಂಚದ ಮೇಲೆ ಹಾಯ್ ಅಂತ ಒರಗಿ ಒಂದು ನಿದ್ದೆ ತೆಗೆಯುವುದು ಬಿಟ್ಟು ಇಲ್ಲಿ ಎಲ್ಲರೂ ಪರಮಾತ್ಮನನ್ನು ಬೇಗ ಕರೆದುಕೊ ಎಂದು ಗೋಗರೆಯುತ್ತಾ ಇದ್ದಾರೆ ಅನಿಸಿ ಬಿಡ ಬೇಕೇ...?

ಇವರಿಬ್ಬರ ಸಾಲುಗಳ ನಡುವೆ ಇಬ್ಬರು ಅಕ್ಕ ಪಕ್ಕ ಹಾದು ಹೋಗಬಹುದಾದಷ್ಟು ಪ್ಯಾಸೇಜ್. ಇದರ ಮೂಲಕ ನೇರ ಗರ್ಭ ಗುಡಿಗೆ ಪ್ರವೇಶ. ಗರ್ಭ ಗುಡಿಗೆ ಅಂಟಿದ ಹಾಗೆ ಬಾಗಿಲು ಒರಗಿ ದೇವಸ್ಥಾನದ ಪೂಜಾರರು, (ಅವರಿಗೆ ವಾಧ್ಯಾರ್ಯು ಎಂದೂ ಸಹ ಕರೆಯುತ್ತಾರೆ ಇವರು ಇಲ್ಲಿ ಪ್ರಾರ್ಥನಾ ನಿರತರು) ಕೂಗುತ್ತಾರೆ, ನಿಂತಿದ್ದರು. ಅವರ ಹಣೆಯ ಮೇಲೆ ಮೂರು ನಾಮ ತುಂಬಾ ಢಾಳಾಗಿ ಹಾಕಿದ್ದರು, ಕಿವಿಗೆ ಹತ್ತ ಕಡಕ, ಕಚ್ಚೆ ಹಾಕಿದ ಮೇಲುಕೋಟೆ ಪಂಚೆ ಮತ್ತು ಎದ್ದು ಕಾಣುತ್ತಿದ್ದ ಒಂಬತ್ತು ಎಳೆ ಜನಿವಾರ. ಈಚೆಗೆ ಸುಮಾರು ಆಸ್ತಿಕರು ಒಂಬತ್ತು ಎಳೆಯ ಜನಿವಾರವನ್ನು. ಹಾಕುತ್ತಾರಂತೆ, ಅದು ಯಾಕೆ ಹಾಕುತ್ತಾರೆ ಎನ್ನುವುದಕ್ಕೆ ನಮ್ಮ ಮಠದ ಆಚಾರ್ಯ ವಿವರಣೆ ನೀಡಿದ್ದರೂ, ಅದು ನನಗೆ ಮರೆತಿದೆ. ಊಟದ ಸಮಯದಲ್ಲಿ ಅವರು ವಿವರಣೆ ನೀಡುತ್ತಾ ಇದ್ದದ್ದು, ನನ್ನ ಗಮನವೆಲ್ಲಾ ಹುಳಿಗೆ ಏನೇನು ತರಕಾರಿ ಹಾಕಿದ್ದಾರೆ, ಗೋರಿ ಕಾಯಿ ಹಾಕಿದ್ದಾರೋ ಇಲ್ಲವೋ ಎನ್ನುವುದರ ಸುತ್ತ ಇತ್ತು. ಹೇಳಿಕೇಳಿ ನಾನೇನೂ ಅಷ್ಟಾವಧಾನ ಮಾಡುವವನಲ್ಲ. ಅದರಿಂದ ನನ್ನ ಗಮನ ಮತ್ತು ಕಾನ್ಸಂಟ್ರೇಷನ್ ಒಂದು ಸಮಯದಲ್ಲಿ ಒಂದು ವಸ್ತುವಿನ ಕಡೆಗೆ ಮಾತ್ರ. ನಾನೂ ಮಠದ ಅಂಗಡಿಯಲ್ಲಿ ಜನಿವಾರ ಕೊಂಡಿದ್ದೆ. ಅದೂ ಒಂಬತ್ತು ಎಳೆದು. ಆರು ಎಳೆ ಮಾಮೂಲಾಗಿ ಮಾರುತ್ತಾ ಇದ್ದದ್ದು. ಇದೇನು ಒಂಬತ್ತು ಎಳೆ ಇದ್ದಹಾಗಿದೆ ಅಂತ ಕೇಳಿದ್ದೆ. ಈಗ ಹಾಗೇ ಸಾರ್ ಬರ್ತಿರೋದು ಅಂತ ಉತ್ತರ ಬಂದಿತ್ತು. ಮಾಮೂಲಾಗಿ ಆರು ಎಳೆ ಇರೋದು ಒಂಬತ್ತಕ್ಕೆ ಪ್ರಮೋಷನ್ ಆದರೆ ಪ್ರೊಡಕ್ಷನ್ ಜಾಸ್ತಿ ಆಗಿದೆ, ಅದರಿಂದ ಸ್ಟಾಕ್ ಕ್ಲಿಯರೆನ್ಸ್ ಆಗ್ತಾ ಇದೆ ಅಂತ ಅಂದುಕೋ ಬಹುದು ತಾನೇ.. ಆರು ಎಳೆ ಅಂದರೆ ಸಿಂಗಲ್ ಹೆಂಡತಿ ಇರೋರಿಗೆ, ಒಂಬತ್ತು ಎಳೆ ಅಂದರೆ ಮೋರ್ ದ್ಯಾನ್ ಒನ್ ಹೆಂಡತಿ ಇರೋರಿಗೆ ಅಂತ ನಮ್ಮಜ್ಜಿ ಒಂದು ನೂರುವರುಷದ ಹಿಂದೆ ಹೇಳಿದ ಅಸ್ಪಷ್ಟ ನೆನಪು.. ತಲೆ ಕೊಡವಿ ಮತ್ತೆ ಗಂಡಸರ ಕಡೆ ದೃಷ್ಟಿ ಹಾಯಿಸಿದೆ. ಪ್ರತಿಯೊಬ್ಬರೂ ಒಂಬತ್ತು ಎಳೆ ಜನಿವಾರ ಧರಿಸಿರಬೇಕೇ..?




ಗುಂಪಿನಲ್ಲಿ ನನಗೆ ಗೊತ್ತಿದ್ದ ಸುಮಾರು ಮುದುಕರು ಒಂದು ಮದುವೆ ಆಗಿ ಅಷ್ಟಕ್ಕೇ ಸುಸ್ತು ಹೊಡೆದಿದ್ದರು. ಪಾರ್ಕಿನಲ್ಲಿ ಹೆಂಡತಿ ಮುಂದೆ ಮುಂದೆ ನಡೆದರೆ ಇವರು ಎರಡು ಮಾರು ಹಿಂದೆ ಜಗತ್ತಿನ ಭಾರವೆಲ್ಲವೂ ಇವರು ಹೊತ್ತ ಹಾಗೆ ಬಾಗಿ ನಡೆಯುತ್ತಿದ್ದರು.ಇವರಿಗೂ ಒಂಬತ್ತು ಎಳೆ ಅಂದರೆ.. ತಲೆಯಲ್ಲಿ ಈ ಘೋರವಾದ ಯುದ್ಧ ನಡೆಯುತ್ತಾ ಇತ್ತಾ...

ನನ್ನನು ನೋಡಿದ ವಾಧ್ಯಾರು ಸಾಮಿ ಗರ್ಭ ಗುಡಿಯಿಂದ ಮುಂದಕ್ಕೆ ಬಂದರು. ಪ್ಯಾಸೇಜ್ ಮೂಲಕ ಹಾದು.

"ಬನ್ನಿ ಸಾರ್ ಒಳಗೆ, ಇನ್ನೇನು ಪ್ರವಚನ ಮುಗೀತಾ ಬಂತು. ಪ್ರಸಾದ ತಗೊಂಡು ಹೋಗಿರಂತೆ....."ಅಂದರು.

ಪ್ರಸಾದ ಅಂದರೆ ನನಗೆ ತುಂಬಾ ಇಷ್ಟದ್ದು. ಪ್ರಸಾದ ಸಿಗುತ್ತೆ ಅಂದರೆ ಮೇಲುಕೋಟೆ, ಹಿಮದ ಗೋಪಾಲಸ್ವಾಮಿ ಬೆಟ್ಟ, ದೇವರಾಯನ ದುರ್ಗ... ಇಲ್ಲಿಗೆಲ್ಲಾ ಹೋಗೋನು. ಇನ್ನು ಮನೆ ಪಕ್ಕದ್ದು ಅಂದರೆ...

"ಆಮೇಲೆ ಬರ್ತೀನಿ ಇವ್ರೇ. ಕಾಲಲ್ಲಿ ಶೂ ಇದೆ. ಬಗ್ಗಿ ಬಿಚ್ಚೋದು ಹಾಕೋದು ಕಷ್ಟ. ಮನೆಗೆ ಹೋಗಿ ಚಪ್ಪಲಿ ಹಾಕ್ಕೊಂಡು ಬಂದೆ...."ಅಂತ ಬಂದೆ. ಸೀದಾ ಪಾರ್ಕ್‌ಗೆ ವಾಕಿಂಗ್ ಹೋದೆ. ಫ್ರೆಂಡ್ಸು ಸಿಕ್ಕಿದರಾ, ಪ್ರಸಾದ ಮರೆತೇ ಹೋಯಿತು. ಮನೆಗೆ ಬಂದೆ. ಉಣ್ಣ ಬೇಕಾದರೆ "ಹೀಗೆ ದೇವಸ್ಥಾನದ ವಾದ್ಯಾರು ಪ್ರಸಾದ ಕೊಡ್ತೀನಿ ಇರಿ ಸಾರ್ ಅಂತ ತುಂಬಾ ಪ್ರೀತಿಯಿಂದ ಹೇಳಿದರು. ಶೂ ಹಾಕ್ಕೊಂಡಿದ್ದೀನಿ, ಆಮೇಲೆ ಬರ್ತೀನಿ ಅಂತ ಬಂದೆ ಪ್ರಸಾದ ಮರ್ತೇ ಹೋಯ್ತು...."ಅಂದೆ.

"ಅದೇ ಎಲ್ಲರೂ ದೊಡ್ಡ ದೊಡ್ಡ ಅಡಿಕೆ ಪಟ್ಟೆ ತಟ್ಟೆ ಹಿಡಕೊಂಡು ದೇವಸ್ಥಾನದಿಂದ ಆಚೆ ಬಂದರು. ಕದಂಬ ಇತ್ತು, ಪುಳಿಯೋಗರೆ, ಪೋಂಗಲ್ಲೂ, ಬಾದುಷಾ ,ಮೈಸೂರು ಪಾಕು, ಲಾಡು.... ಹೀಗೆ ಅದೇನೇನೋ ಕಾಣಿಸ್ತಾ ಇತ್ತು ತಟ್ಟೆ ಲೀ... ನೀವೊಬ್ಬರು ಕರೆದು ಕೊಟ್ಟರೆ ಬೇಡಾಂತ ಬರೋದೇ...."ಅಂತ ಪೂಜೆ ಮಾಡಿದಳು.

ಹೆಂಡತಿ ಮಾಡಿದ ಪೂಜೆಗೆ ಬೇಸರ ಆಗಲಿಲ್ಲ, ಬದಲಿಗೆ ಕದಂಬ, ಪುಳಿಯೋಗರೆ, ಪೋಂಗಲ್ಲೂ, ಹೋಯಿತ್ತಲ್ಲಾ ಅಂತ ನೋವು ಆಗಿದ್ದು. ಮೈಸೂರು ಪಾಕು ಲಾಡು ಬಾದುಷಾ ಅಂದರೆ ಅದು ಹೊರಗಡೆ ಸಿಗುತ್ತೆ. ಕ್ವಾಲಿಟಿ ದೇವಸ್ಥಾನ ಮಟ್ಟ ಬರೋಲ್ಲ, ಆದರೂ ನಿಯರರ್ ಅದಕ್ಕೆ. ದೇವಸ್ಥಾನದವರು ಮಾಡಿಸಿದ್ದು ಅಂದರೆ ತುಂಬಾ ಅಲ್ಟಿಮೇಟ್ ಒಳ್ಳೇ ಟೇಸ್ಟ್‌ದು ಸಿಗುತ್ತೆ. ಆದರೆ ಕದಂಬ, ಪುಳಿಯೋಗರೆ, ಪೋಂಗಲ್ಲೂ.....?

ಕದಂಬ ಅಂದರೆ ಹೇಗಿರುತ್ತೆ ಅಂತ ಹೇಳಿಬಿಡ್ತಿನಿ.. ದಪ್ಪ ದಪ್ಪನೆ ಹೋಳು, ಗಟ್ಟಿ ಬೇಳೆ ಹುಳಿ ಅದಕ್ಕೆ ಸೇರಿಸಿರೋ ಅನ್ನ, ಹಿತ ಮಿತ ರುಚಿ.. ಒಂದು ಹೋಳು ತಿಂದರೆ ಬಾಯಿ ತುಂಬಾ ಅದೇ ತುಂಬಿರುತ್ತೆ. ಇನ್ನು ರುಚಿಯೋ ಅದನ್ನು ವರ್ಣಿಸಲು ಆದಿಶೇಷನಿಗೂ ಆಗದು ಎಂದು ಹೇಳುತ್ತಾರೆ...

"ಒಂದೇ ಒಂದು ಸಲ ನೀನಾಗಿ ನೀನೇ ನನ್ನ ನೋಡಕ್ಕೆ ಬೆಟ್ಟ ಹತ್ತಿ ಬಂದಿದ್ದೀಯಾ...."

"ಇಲ್ಲ ಸಾರ್. ಬೆಟ್ಟ ಹತ್ತಬೇಕು ಅಂತ ಅನಿಸೆ ಇಲ್ಲ ಸಾರ್..."

"ಯಾವುದಾದರೂ ದೇವಸ್ಥಾನಕ್ಕೆ ಯಾವತ್ತಾದರೂ ನೀನಾಗಿ ನೀನೇ ಹೋಗಿದ್ದಿಯಾ.."

"ಇಲ್ಲ ಸಾರ್. ಯಾರಾದರೂ ಕೂಗಿದಾಗ ಅವರ ಜತೆ ಬಲವಂತವಾಗಿ ಹೋಗಿರೋದು.."

"ಯಾವತ್ತಾದರೂ ಅಲ್ಲಿ ಅಂದರೆ ದೇವಸ್ಥಾನದಲ್ಲಿ ನೀನಾಗಿ ನೀನೇ ಪ್ರಸಾದಕ್ಕೆ ಕ್ಯೂ ನಿಂತಿದ್ದಿಯಾ...."

"ಇಲ್ಲ ಸಾರ್. ಪ್ರಸಾದ ಕೊಡ್ತಾರೆ ಬನ್ನಿ ಅಂತ ಹೆಂಡತಿ ದಬ್ಬಿ ಕೊಂಡು ಕರಕೊಂಡು ಹೋಗುತ್ತಾಳೆ, ಅವಳು ಎಳಕೊಂಡು ಹೋದಳು ಅಂತ ನಾನು ಅವಳ ಹಿಂದೆ....."

"ನನ್ನ ನೋಡೋಕ್ಕೆ ಎಷ್ಟು ಸಲ ನೀನಾಗಿ ನೀನೇ ಬಂದಿದ್ದೀಯಾ...."

"ಇಲ್ಲ ಸಾರ್. ಇದುವರೆಗೆ ಯಾರಾದರೂ ಬಲವಂತ ಮಾಡಿ ಎಳಕೊಂಡು

ಹೋದರೆ ಅವರ ಹಿಂದೆ...."

"ಅಲ್ಲ ನಿನಗೆ ಅನುಕೂಲ ಆಗಲಿ ಅಂತ ಮನೆ ಹತ್ತಿರವೇ ಬಂದಿದ್ದೀನಿ. ನಿನಗೆ ಬರೋಕ್ಕೆ ಅದೇನು ದಾಡಿ..?"

"..........,..............."

"ನಿನಗೆ ಅಂತ ವೆರೈಟಿ ವೆರೈಟಿ ಪ್ರಸಾದ ಮಾಡಿಸಿ ಇಟ್ಟರೆ ನಿನಗೇನು ಕೊಬ್ಬು ಬಂದು ಪ್ರಸಾದ ಇಸ್ಕೊಂಡು ತಿನ್ನೋಕೆ..."

"..........,..............."

"ಯಾರಿಗೋಸ್ಕರ ಪ್ರಸಾದ ಮಾಡೋದು...?"

"ತಪ್ಪಾಯ್ತು ಸಾರ್...."

"ಅಲ್ಲವೋ ಮುಠ್ಠಾಳ, ಸಾಯಂಕಾಲ ಅಷ್ಟು ಚೆನ್ನಾಗಿರೋ ಪ್ರಸಾದ ಇತ್ತು. ಬಾರಯ್ಯ ತಿಂದುಕೊಂಡು ಹೋಗು ಅಂತ ಪ್ರೀತಿಯಿಂದ ಕರೆದರೆ ಹಾಗೇ ಪೃಷ್ಠ ತಿರುಗಿಸಿಕೊಂಡು ಹೋಗ್ತಿಯಲ್ಲಾ....?"

"ತಪ್ಪಾಯ್ತು ಸಾರ್...."

"ನಿನಗೆ ಅನುಕೂಲ ಆಗಲಿ, ಬೇರೆ ಭಕ್ತರ ಹಾಗೆ ನೀನು ನನ್ನ ಹುಡುಕಿಕೊಂಡು ಅಲ್ಲೆಲ್ಲಾ ಬರೋಲ್ಲ ಅಂತ ನಿನ್ನ ಮನೆ ಬಾಗಿಲಿಗೆ ಬಂದರೆ ಇಷ್ಟೊಂದಾ ತಿಮಿರು, ಕೊಬ್ಬು ನಿನಗೆ......?"

"ಸಾರಿ ಸಾರ್, ತಪ್ಪಾಯ್ತು ಸಾರ್. ಇನ್ಮೇಲೆ ದಿನಾ ಬರ್ತೀನಿ ಸಾರ್ ಪ್ರಸಾದಕ್ಕೆ....."ಅಂತ ಬೇಡ್ಕೋತಾ ಇದ್ದೆ. ಎದುರಿಗೆ ಗರ್ಭ ಗುಡಿಯಲ್ಲಿ ಮಸಕು ಮಸಕಾಗಿ ಸಂಜೆ ಕಂಡ ದೇವರು ಎದುರು ಬಂದು ನಿಂತಿತ್ತು. ನನ್ನನ್ನು ದುರುಗುಟ್ಟಿ ನೋಡುತ್ತಾ ಇತ್ತು.ಅದಕ್ಕೆ ಕೋಪ ಬಂದ ಹಾಗಿತ್ತು......

"ಎಂಟಾಯ್ತು, ಏಳಬಾರದೇ. ರಿಟೈರ್ ಆಗಿದ್ದೇ ಆಗಿದ್ದು. ಯಾವಾಗಲೂ ನಿದ್ದೇನೆ, ಅದು ಯಾವ ದೇವರ ವರವೋ ಕುಂಭಕರ್ಣ ಆಗಿದ್ದೇ ಅಂತ ಕಾಣುತ್ತೆ ಹಿಂದಿನ ಯಾವುದೋ ಜನ್ಮದಲ್ಲಿ.... ಅಂತ ಹೆಂಡತಿ ನನ್ನ ದೇಹವನ್ನು ಅತ್ತ ಇತ್ತ ಹೊರಳಿಸಿ ಎಬ್ಬಿಸಿದಳು....!

"ದೇವರು ಕನಸಲ್ಲಿ ಬಂದಿತ್ತು ಕಣ್ರೀ. ಪ್ರಸಾದ ಸ್ವೀಕಾರ ಮಾಡಿಲ್ಲ ಅಂತ ತುಂಬಾ ಬೇಜಾರು ಮಾಡಿಕೊಂಡಿತ್ತು ಪಾಪ.... "ಅಂದೆ

"ಹಾಗೇ ಬಿದ್ದಿದ್ದರೆ ಹತ್ತಾಯ್ತು ಮಾರಾಯ ಇನ್ನೂ ಕಾಫಿ ಕುಡಿದಿಲ್ಲವಲ್ಲೋ.... ಅಂತಲೂ ಬೇಜಾರು ಮಾಡಿಕೊಂಡೀತು. ರಗ್ ಮಡಿಸಿಟ್ಟು ಹಾಸಿಗೆ ಸರಿಮಾಡಿ ಬನ್ನಿ...."ಅಂತ ಬಾಸು ಆಚೆ ಹೋಯ್ತಾ?

ಪಾಪ ದೇವರಿಗೆ ಬೇಜಾರು ಮಾಡಬಾರದಿತ್ತು ಅಂತ ನನಗೆ ಚುರ್ ಅಂದಿತು.

ಎಷ್ಟು ಜನರ ಕನಸಲ್ಲಿ ದೇವರು ಬಂದು ತನ್ನ ಬೇಜಾರು ಹೇಳಿಕೊಳ್ಳುತ್ತೆ.. ಅಲ್ವಾ.... ಐ ಆಮ್ ಮೋರ್ ಪ್ರಿವಿಲೇಜ್ಡ್ ಅಂತ ಅನಿಸಿ ಬಿಡ್ತು ಇವರೇ....

■

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಅ

- ✓ ಯಾರಿಗೆ ನಿರೀಕ್ಷೆ ಕಡಿಮೆಯೋ ಅವರಿಗೆ ನಿರಾಶೆಯೂ ಕಡಿಮೆ.
- ✓ ದಿ ಮೊಮೆಂಟ್ ವಿ ವಾಂಟ್ ಟು ಬಿ ಸಂಥಿಂಗ್ ವಿ ಆರ್ ನೊ ಲಾಂಗರ್ ಫ್ರೀ.
- ✓ ಚಿಕ್ಕದಾಗಿ ಏಕೆ ಬರೆಯಲಿಲ್ಲ? ಎಂದು ಕೇಳಿದರೆ ಚಿಕ್ಕದಾಗಿ ಬರೆಯಲು ಪುರುಸೊತ್ತು ಇಲ್ಲವಾದ್ದರಿಂದ ದೊಡ್ಡದಾಗಿ ಬರೆಯಬೇಕಾಯಿತು ಎನ್ನುವುದೆ?
- ✓ ಹಾರ್ಡ್ ವರ್ಕ್ ಬೀಟ್ಸ್ ಟ್ಯಾಲೆಂಟ್ ವೆನ್ ಟ್ಯಾಲೆಂಟ್ ಡಸ್ ನಾಟ್ ವರ್ಕ್.
- ✓ ನದಿ ದಾಟಲು ತೆಪ್ಪ ಬೇಕು. ಸಂಸಾರ ಸಾಗಿಸಲು ತೆಪ್ಪಗಿರಬೇಕು.
- ✓ ಯು ಡೋಂಟ್ ರೈಟ್ ಬಿಕಾಸ್ ಯು ಹ್ಯಾವ್ ಸಂಥಿಂಗ್ ಟು ಸೆ. ಯು ರೈಟ್ ಬಿಕಾಸ್ ಸಂಥಿಂಗ್ ವಿಥಿನ್ ಯು ರೆಫ್ಯೂಸಸ್ ಟು ಸ್ಟೆ ಸೈಲೆಂಟ್ ಎನಿ ಲಾಂಗರ್.
- ✓ ಮಾಡುವದನ್ನೇ ಇನ್ನಷ್ಟು ಚೆನ್ನಾಗಿ ಮಾಡುವುದೂ ಒಂದು ಸವಾಲು.
- ✓ ದೇರ್ ಈಸ್ ನೊ I ಇನ್ Team.
- ✓ ಬದುಕು ಎಂದರೆ ನಿಮ್ಮ ಎದುರಿಗೆ ಪ್ರಾಮಾಣಿಕರಾಗಿ ಕಾಣುವವರ ಬಗ್ಗೆ ಅಲ್ಲ. ಬದುಕೆಂದರೆ ನಿಮ್ಮ ಹಿಂದೆ ಪ್ರಾಮಾಣಿಕರಾಗಿರುವವರ ಕುರಿತದ್ದು.
- ✓ ಎ ಹಾಸ್ಪಿಟಲ್ ಈಸ್ ಎ ಪಾರ್ಕಡ್ ಟ್ಯಾಕ್ಸಿ ವಿತ್ ಮೀಟರ್ ರನ್ನಿಂಗ್.
- ✓ ಮರಳಿನ ಮೇಲೆ ಮರಳು ಎಂದು ಬರೆಯಬಹುದು. ಆದರೆ ನೀರಿನ ಮೇಲೆ ನೀರು ಎಂದು ಬರೆಯಲು ಸಾಧ್ಯವೆ? ಹಾಗೆಯೇ ಆಸೆಗಳು ಕೆಲವು ಸಾಧ್ಯ. ಕೆಲವು ಅಸಾಧ್ಯ.
- ✓ ಎವೆರಿ ಮ್ಯಾನ್ ಡೈಸ್ ಬಟ್ ನಾಟ್ ಎವೆರಿ ಮ್ಯಾನ್ ಲಿವ್ಸ್.
- ✓ ಅತಿ ದೊಡ್ಡ ರಿಸ್ಕ್ ಎಂದರೆ ರಿಸ್ಕ್ ತೆಗೆದುಕೊಳ್ಳದಿರುವುದು.
- ✓ ಬೇರೆಯವರು ಮಲಗಿದ್ದಾಗ ನೀವು ಕೆಲಸ ಮಾಡಿ. ಬೇರೆಯವರು ಖರ್ಚು ಮಾಡುವಾಗ ನೀವು ಕೂಡಿಡಿ. ಬೇರೆಯವರು ಕನಸು ಕಾಣುವಂತೆ ನೀವು ಬದುಕಿ,
- ✓ ಡಾನ್ಸ್: ವರ್ಟಿಕಲ್ ಎಕ್ಸ್‌ಪ್ರಶನ್ ಆಫ್ ಎ ಹಾರಿಜ಼ಾಂಟಲ್ ಡಿಸೈರ್.
- ✓ ನೆನಪಿರಲಿ: ಯಾರು ಬೆಣ್ಣೆ ಹಚ್ಚುತ್ತಾರೊ ಅವರ ಕೈಯಲ್ಲಿ ಚಾಕು ಇರುತ್ತದೆ. ■


ಕರುನಾಡಿನಲ್ಲಿ
ತೋಚಿದ್ದು - ಗೀಚಿದ್ದು :
ರಾಂಕಿ ಬೆಳ್ಳೂರು
ನಮ್ಮ ಕನಸು ನನಸಾಗಲಿ ಕರುನಾಡಿನಲ್ಲಿ
ವನಸಿರಿಯು ಬೆಳೆಯಲಿ ಕರುನಾಡಿನಲ್ಲಿ
ಪ್ರಗತಿಪಥ ಬೆಳಗಲಿ ಕರುನಾಡಿನಲ್ಲಿ


ಹಾಸ್ಯ ಕಲೆಯ
ಆರಾಧಿಸೋಣ
ಕರುನಾಡಿನಲ್ಲಿ
ಕಾಯಕ
ಮಾಡೋಣ
ಕರುನಾಡಿನಲ್ಲಿ

# ಜೇಬು

ಸೌಮ್ಯ ಮಿತ್ರ

ಮಧ್ಯಾಹ್ನದ ಸಮಯ. ಮಾವಿನಕಾಯಿಯನ್ನು ಖಾರದ ಪುಡಿ ಮತ್ತು ಉಪ್ಪಿನ ಮಿಶ್ರಣದಲ್ಲಿ ಅದ್ದಿ ಸವಿಯುತ್ತಾ, ಪುಸ್ತಕ ಓದುತ್ತಾ ಮಲಗಿದ್ದೆ. ಅಮ್ಮ ಕೆಳಗಿನಿಂದ, 'ಅಣ್ಣನ ಜೇಬಿನಲ್ಲಿರುವ ಪರ್ಸ್ ತೊಗೊಂಡು ಬಾ' ಅಂತ ಕೂಗಿದರು. ತಕ್ಷಣ ಹೊರ ನಡೆದು ಲೈಬ್ರರಿಯಲ್ಲಿದ್ದ ಗೂಟಕ್ಕೆ ತಗುಲಿಹಾಕಿದ್ದ ಪ್ಯಾಂಟಿನ ಜೇಬಿಗೆ ಕೈ ಹಾಕಿದೆ. ಪರ್ಸ್ ಸಿಕ್ಕಿತು, ಓಡಿ ಹೋಗಿ ಅದನ್ನು ಅಮ್ಮನ ಕೈಗಿತ್ತೆ. ಅಮ್ಮ, 'ಖಾರದ ಪುಡಿಯ ತಟ್ಟೆಯನ್ನು ತೊಳೆದಿಡು, ಮಂಚದ ಕೆಳಗಿಡಬೇಡ. ಕೆಲಸದವಳು ವಾರ್ನ್ ಮಾಡಿದ್ದಾಳೆ,' ಅಕ್ಕ ಆ ಖಾರದ ಪುಡಿಯ ತಟ್ಟೆಯನ್ನು ಮಂಚದ ಕೆಳಗೆ ಇಡುತ್ತಾಳೆ. ಅದು ಪೊರಕೆಗೋ, ಒರೆಸುವ ಬಟ್ಟೆಗೋ ಸಿಕ್ಕಿ, ಪುಡಿ ರೂಮಿನ ತುಂಬ ಹರಡುತ್ತದೆ. ನನ್ನ ಕೆಲಸ ಹೆಚ್ಚಾಗುತ್ತದೆ. ಈ ಅಕ್ಕನಿಗೆ ರಜ ಇದ್ದರೆ ನನಗೆ ಡಬಲ್ ಕೆಲಸ. ಇನ್ನೊಮ್ಮೆ ಹೀಗಾದರೆ ನಾನು ನಿಮ್ಮ ಮನೆಗೆ ಕೆಲಸಕ್ಕೆ ಬರುವುದಿಲ್ಲ' ಅಂತ. ಹಾಗೇನಾದರೂ ಆದರೆ ಮನೆ ಕೆಲಸ ನೀನೇ ಮಾಡಬೇಕಾಗುತ್ತದೆ. ಜೋಪಾನ' ಅಂದರು.

'ಛೆ, ಬೇಸಿಗೆಯಲ್ಲಿ ಆರಾಮಾಗಿ ಮಾವಿನಕಾಯಿ ತಿನ್ನುವುದಕ್ಕೂ ಕತ್ತರಿ ಬಿತ್ತಲ್ಲ' ಎಂದು ಪೇಚಾಡುತ್ತಾ ರೂಮಿಗೆ ಹಿಂದಿರುಗಿ ಮತ್ತೆ ಪುಸ್ತಕವನ್ನು ಕೈಗೆತ್ತಿಕೊಂಡೆ. ಉಹೂಂ ಎಷ್ಟು ಪ್ರಯತ್ನಿಸಿದರೂ ಓದಲಾಗುತ್ತಿಲ್ಲ. ಪುಸ್ತಕ ಪಕ್ಕಕ್ಕಿಟ್ಟು, ಮಾವಿನಕಾಯಿ ಮೆಲ್ಲುತ್ತಾ ಯೋಚಿಸತೊಡಗಿದೆ, 'ಇಷ್ಟೆಲ್ಲಾ ಆಗಿದ್ದು ಆ ಪರ್ಸ್ ತೆಗೆದುಕೊಂಡು ಹೋಗಿದ್ದರಿಂದ. ನನ್ನ ಪಾಡಿಗೆ ನಾನು ಆರಾಮಾಗಿದ್ದೆ. ಛೆ, ಮೂಡ್ ಎಲ್ಲ ಹಾಳಾಗಿಹೋಯಿತು. ಇಷ್ಟಕ್ಕೂ ಅಮ್ಮನಿಗೆ ಆ ಪರ್ಸ್ ಅಷ್ಟು ಅರ್ಜೆಂಟ್ ಆಗಿ ಏಕೆ ಬೇಕಿತ್ತು? ಮದುವೆ ಆಗುತ್ತಿದ್ದ ಹಾಗೆ, ಗಂಡಸರ ಜುಟ್ಟು ಅರ್ಥಾತ್ ಜೇಬು, (ಈಗಿನ ಕಾಲದಲ್ಲಿ ಹೆಂಗಸರಿಗೇ ಜುಟ್ಟಿರುವುದಿಲ್ಲ, ಬಾಬ್ ಕಟ್ ಮಾಡಿಸಿಕೊಂಡು ಓಡಾಡುತ್ತಾರೆ, ಇನ್ನು ಗಂಡಸರಿಗೆ ಜುಟ್ಟು ಎಲ್ಲಿಂದ ಬರಬೇಕು?!) ಹೆಂಡತಿಯ ಸುಪರ್ದಿಗೆ ಸೇರುತ್ತದೆ. ಆ ಜೇಬಿನಲ್ಲಿರುವುದೆಲ್ಲ ತಮ್ಮ ಸ್ವಂತದ್ದು ಎಂದು ಹೆಂಡತಿ ಭಾವಿಸುತ್ತಾಳೆ. ಈಗ ನಮ್ಮಮ್ಮ ಪರ್ಸ್ ತರಿಸಿಕೊಂಡರಲ್ಲ, ಅದರೊಳಗಿನಿಂದ ಏನನ್ನು ತೆಗೆದುಕೊಂಡೆ ಎಂದು ಅಣ್ಣನಿಗೆ ಹೇಳುತ್ತಾರೆಯೇ? ಎಲ್ಲ ಮನೆಗಳಲ್ಲೂ ಆಗುವುದು ಇದೇ ತಾನೇ?! ಅಕಸ್ಮಾತ್ ತನ್ನ ಜೇಬು ಅಥವಾ ಪರ್ಸು ಹೆಂಡತಿಯ ಕೈ ಸೇರಿತು ಎನ್ನುವುದು ಗಂಡನಿಗೆ ತಿಳಿಯಿತು ಅಂದುಕೊಳ್ಳೋಣ, ಆ ಬಡಪಾಯಿ ಗಂಡ ಏನು ಮಾಡಬಲ್ಲ? ಅಬ್ಬಬ್ಬ ಎಂದರೆ ಹೂಂಗುಟ್ಟಿ, ತನ್ನ ಬ್ಯಾಚೆಲರ್ ಡೇಸ್ ಅನ್ನು ಮೆಲುಕು ಹಾಕುತ್ತಾ, 'ಜಾನೆ ಕಹಾ ಗಯೇ ವೋ ದಿನ್' ಅಂತ ಹಳೆಯ ಹಿಂದಿ ಹಾಡನ್ನು ಮೆಲ್ಲಗೆ ಯಾರಿಗೂ ಕೇಳದಂತೆ ಗುನುಗುಟ್ಟಬಹುದು ಅಷ್ಟೆ.

ನನ್ನ ಮನಸ್ಸು ಈ ವಿಷಯದ ಬಗ್ಗೆ ಮತ್ತಷ್ಟು ಆಲೋಚಿಸತೊಡಗಿತು. ಅಲ್ಲ, ಹಿಂದಿನ ದಿನಗಳಲ್ಲೂ ಹೀಗೇ ಇತ್ತೇ? ಅಂದಿನ ಕಾಲದಲ್ಲಿ ಗಂಡಸರು ಪಂಚೆ ಶಲ್ಯ ಉಡುತ್ತಿದ್ದರು ಎಂದು ಕೇಳಿದ್ದೇನೆ. ಆಗಿನ ಹೆಂಗಸರು ಏನು ಮಾಡುತ್ತಿದ್ದರು? ಗಂಡನಿಗೆ ಜೇಬೇ ಇಲ್ಲದಿದ್ದರೆ, ಗಂಡನ ಮೇಲೆ ಹಿಡಿತ ಹೇಗೆ ಸಾಧ್ಯ? ಆಗಿನ ಗಂಡಸರು ಜುಟ್ಟು ಬಿಟ್ಟಿರುತ್ತಿದ್ದರು ನಿಜ, ಆದರೆ ಜೇಬಿನಲ್ಲಿಡುವ ವಸ್ತುಗಳನ್ನು ಜುಟ್ಟಿನಲ್ಲಿಡಲು ಸಾಧ್ಯವೇ? ಜುಟ್ಟಿನಲ್ಲಿ ಹಣದ ಗಂಟು ಇಲ್ಲದಿದ್ದ ಮೇಲೆ, 'ಅವನ ಜುಟ್ಟು ಅವನ ಹೆಂಡತಿಯ ಕೈಯಲ್ಲಿದೆ' ಎಂಬ ಮಾತಿಗೆ ಅರ್ಥವೇ ಇಲ್ಲವಲ್ಲ. ಪಾಪ, ಆ ಹೆಂಡತಿಗೆ ಗಂಡನ ಜುಟ್ಟು ಹಿಡಿದರೆ ಸಿಗುವುದಾದರೂ ಏನು? ಸ್ವಲ್ಪ ಹೂವು? ಅದು ಅವಳ ಜಡೆಯಲ್ಲೇ

ಇರುತ್ತಿತ್ತಲ್ಲ. ಅಬ್ಬಬ್ಬ ಎಂದರೆ ಕೂದಲಿಗೆ ಹಚ್ಚಿದ್ದ ಎಣ್ಣೆ ಕೈಗೆ ಮೆತ್ತಿಕೊಳ್ಳಬಹುದು. ಛೆ, ಛೆ, ಅದರಿಂದ ಏನು ಪ್ರಯೋಜನ? ಕೈ ಜಿಗುಟಾಗಬಹುದು ಅಷ್ಟೇ...' ಹೀಗೆ ಸಾಗಿತ್ತು ನನ್ನ ಯೋಚನಾ ಲಹರಿ. ತಕ್ಷಣ ಹೊಳೆಯಿತು, 'ಆಹಾ...ನಮ್ಮ ಗಂಡಸರೇನು ಪೆದ್ದರೇ? ಅದಕ್ಕಾಗಿಯೇ ಅವರು ಬಹುಶಃ ಹೊರ ಹೋಗುವಾಗ ಪೇಟ ಕಟ್ಟಿಕೊಳ್ಳುತ್ತಿದ್ದದ್ದು... ಪೇಟಕ್ಕೆ ಅಷ್ಟೊಂದು ಲೇಯರ್ಸ್ ಏಕಿರುತ್ತಿತ್ತು ಎಂದು ನನಗೆ ಈಗ ಅರ್ಥವಾಯಿತು. ಬಹುಶಃ ಮುಂದಿನ ದಿನಗಳಲ್ಲಿ, ಗಂಡಸರು ತಮ್ಮ ಹಣಕಾಸನ್ನು ಜೋಪಾನವಾಗಿ-ಟ್ಟುಕೊಳ್ಳಲು ಟೋಪಿ ಧರಿಸುತ್ತಿದ್ದರೋ ಏನೋ! ದಿನಗಳು ಉರುಳಿದಂತೆ ಏನನ್ನೂ ಇಡಲಾಗದ ಶಲ್ಯಕ್ಕಿಂತ ಜೇಬಿರುವ ಜುಬ್ಬ ಅನುಕೂಲ ಎನಿಸಿರಬಹುದು. ಅಲ್ಲ, ಇಷ್ಟೆಲ್ಲ ಕಷ್ಟ ಪಡಬೇಕಾಗಿತ್ತೇ? ಒಂದು ಸೂಟ್ ಕೇಸಿನಲ್ಲಿ ಭದ್ರವಾಗಿ ಇಡಬಾರದಿತ್ತೇ ಎನಿಸುವುದು ಸಹಜ. ನಾನು ನಮ್ಮ ಅಜ್ಜನ ಮನೆಯಲ್ಲಿದ್ದ ಹಳೆಯ, ದೊಡ್ಡ ಗಾತ್ರದ ಪೆಠಾರಿಯನ್ನು ನೋಡಿದ್ದೆ. ಬಹುಶಃ ಅದರಲ್ಲಿ ಅಗತ್ಯ ಕಾಗದ ಪತ್ರಗಳನ್ನು, ದಾಖಲೆಗಳನ್ನು, ಬೆಳ್ಳಿ ಬಂಗಾರವನ್ನು ಇಡುತ್ತಿದ್ದರೇನೋ! ಆದರೆ, ಹೆಂಡತಿಗೆ ಕಾಣದ ಹಾಗೆ ದುಡ್ಡು ಇಡುವುದು ಹೇಗೆ? ಹಿಂದಿನ ಕಾಲದಲ್ಲಿ ಭೂಮಿಯೊಳಗೆ ಹಣಕಾಸನ್ನು ಇಟ್ಟಿರುತ್ತಿದ್ದರು ಎಂದು ಕೇಳಿದ್ದೇನೆ. ಬಹುಶಃ ಇದೇ ಕಾರಣಕ್ಕೆ ಗಂಡಸರು ಭೂಮಿ ಅಗೆದು ಹಂಡೆಯೊಳಗೆ, ಕೊಳದಪ್ಪಲೆಯೊಳಗೆ ಹಣ ಇಟ್ಟು ಅವನ್ನು ಭೂಮಿಯೊಳಗೆ ಇಡುತ್ತಿದ್ದರೋ ಏನೋ!



ಹಾಗಾದರೆ, ಹೆಂಗಸರು ಏನು ಮಾಡುತ್ತಿದ್ದರು? ಹಾ, ಸಾಸಿವೆ ಡಬ್ಬಿಯೊಳಗಿನ ದುಡ್ಡು ಅಂತ ಕೇಳಿದ್ದೀವಲ್ಲ. ಗಂಡನಿಗೆ ತಿಳಿಯದಂತೆ ಜೇಬಿನಿಂದ ತೆಗೆದ ದುಡ್ಡನ್ನು ಅವನಿಗೆ ಸಿಗದಂತೆ ಜೋಪಾನವಾಗಿ ಸಾಸಿವೆ ಡಬ್ಬಿಯಲ್ಲೋ, ಮೆಣಸಿನಕಾಯಿಯ ಡಬ್ಬಿಯಲ್ಲೋ ಇಡುವ ಪರಿಪಾಠ ಶುರುವಾಗಿದ್ದು ಹೀಗೆ ಅನಿಸುತ್ತದೆ. ಮನೆಯ ಯಜಮಾನ ಗಂಡನಾದರೆ, ಅಡುಗೆ ಮನೆಯ ಯಜಮಾನಿ ಹೆಂಡತಿ. ಗಂಡ ಅಡುಗೆ ಮನೆಯ ಸಾಸಿವೆಯ ಡಬ್ಬಿಗೆ ಕೈಹಾಕಲು ಸಾಧ್ಯವೇ? ಅಬ್ಬಬ್ಬಾ...ಇದರೊಳಗೆ ಒಂದು ಸೈಂಟಿಫಿಕ್ ಥಿಯರಿಯೇ ಅಡಗಿರುವಂತಿದೆ. ಅದಕ್ಕೆ ಮತ್ತೆ, ನಮ್ಮ ಪೂರ್ವಜರು ಬುದ್ಧಿವಂತರು ಎನ್ನುವುದು.

ಹೀಗೆ ನನ್ನ ಯೋಚನಾ ಲಹರಿ ಶತಾಬ್ದಿಯ ವೇಗದಲ್ಲಿ ಸಾಗಿತ್ತು. ಅಣ್ಣ ಆಗಾಗ, 'ನಮ್ಮ ನಾಡಿನ ಹೆಮ್ಮೆಯ ಕವಿ ಶ್ರೀ ಜಿ.ಪಿ.ರಾಜರತ್ನಂ ಅವರು ಯಾವಾಗಲೂ ಬಿಳಿ ಬಣ್ಣದ ಪೈಜಾಮ ಜುಬ್ಬ ತೊಡುತ್ತಿದ್ದರು. ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಒಂದು ಹೊರೆ ಪುಸ್ತಕಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಕನ್ನಡದ ಶ್ರೇಷ್ಠ ಪುಸ್ತಕಗಳನ್ನು ಮಾರುತ್ತಿದ್ದರು. ಅದರಿಂದ ಬಂದ ಹಣವನ್ನು ಒಂದು ಜೇಬಿನಲ್ಲಿ, ತಮ್ಮ ಸ್ವಂತ ಹಣವನ್ನು ಮತ್ತೊಂದು ಜೇಬಿನಲ್ಲಿಡುತ್ತಿದ್ದರು. ಯಾವ ಕಾರಣಕ್ಕೂ ಆ ಹಣವನ್ನು ಬೆರೆಸುತ್ತಿರಲಿಲ್ಲ. ಪುಸ್ತಕದಿಂದ ಬಂದ ಹಣವನ್ನು ಮತ್ತಷ್ಟು ಪುಸ್ತಕಗಳನ್ನು ಖರೀದಿಸಲು

ಬಳಸುತ್ತಿದ್ದರು' ಅಂತ ಹೇಳುವುದನ್ನು ಕೇಳಿದ್ದೇನೆ. ನನ್ನ ಮನಸ್ಸು, 'ಅಬ್ಬಾ! ಅವರ ಜೇಬು ಇನ್ನೆಷ್ಟು ದೊಡ್ಡದಾಗಿತ್ತೋ ಏನೋ' ಎಂದಿತು. ಜೊತೆಗೇ ಅಣ್ಣ ಯಾವಾಗಲೂ ಹೇಳುವ ಮತ್ತೊಂದು ವಿಷಯ ನೆನಪಿಗೆ ಬಂತು. ಒಮ್ಮೆ ಕನ್ನಡ ನಾಡಿನಲ್ಲಿ ಅಜರಾಮರರಾದ ದಿ.ವೆಂಕಣ್ಣಯ್ಯನವರು ನಡೆದು ಬರುತ್ತಿದ್ದರಂತೆ. ದಾರಿಯಲ್ಲಿ ಅವರ ಪರಿಚಯದ ವ್ಯಕ್ತಿಯೊಬ್ಬ ಎದುರಾದನಂತೆ. ಕೈಮುಗಿದು, 'ಸ್ವಾಮಿ, ನನ್ನ ಮಗಳ ಮದುವೆ ಗೊತ್ತಾಗಿದೆ. ಏನಾದರೂ ಸಹಾಯ ಮಾಡಲು ಸಾಧ್ಯವೇ' ಎಂದನಂತೆ. ವೆಂಕಣ್ಣಯ್ಯನವರು ತಕ್ಷಣ, 'ಬಹಳ ಒಳ್ಳೆಯ ದಿನ ನನಗೆ ಸಿಕ್ಕಿದಿರಿ, ಇವತ್ತು ನನ್ನ ಹತ್ತಿರ ಸ್ವಲ್ಪ ಹಣ ಇದೆ, ನಾಳೆ ಕೇಳಿದ್ದರೆ ನನ್ನ ಹತ್ತಿರ ದುಡ್ಡು ಇರುತ್ತಿತ್ತೋ ಇಲ್ಲವೋ' ಎಂದು ಹೇಳಿ, ತಮ್ಮ ಜೇಬಿಗೆ ಕೈ ಹಾಕಿ, ಒಂದು ಕೈಚೀಲ ತೆಗೆದು, ಅದನ್ನು ಆ ವ್ಯಕ್ತಿಗೆ ನೀಡಿ, ಹರಸಿ ಮುಂದೆ ನಡೆದರಂತೆ. ವಿಷಯ ಏನೆಂದರೆ, ವೆಂಕಣ್ಣಯ್ಯನವರು ಅಂದು ನಿವೃತ್ತರಾಗಿದ್ದರಂತೆ. ತಮ್ಮ ಮುಂದಿನ ಜೀವನಕ್ಕೆಂದು ಅವರಿಗೆ ನೀಡಲಾಗಿದ್ದ ಇಡೀ ಮೊತ್ತವನ್ನು ಅವರು ಆ ವ್ಯಕ್ತಿಗೆ ನೀಡಿದ್ದರಂತೆ. ಎಂತಹ ಮಹಾನುಭಾವರು! ಅವರು ತುಂಬ ಎತ್ತರವಿದ್ದರಂತೆ. ವಿ.ಸೀ. ಅವರು ತಮ್ಮ ಮನೆಯ ಬಾಗಿಲನ್ನು ವೆಂಕಣ್ಣಯ್ಯನವರಿಗೆ ಅನುಕೂಲವಾಗುವಂತೆ ಎತ್ತರಿಸಿದ್ದರಂತೆ. ಟಿ.ಪಿ. ಕೈಲಾಸಂ ಅವರು ವೆಂಕಣ್ಣಯ್ಯನವರನ್ನು ಕಂಡ ತಕ್ಷಣ, 'ಸ್ವಲ್ಪ ನೋಡಿ ಹೇಳಿ...ಸ್ವರ್ಗದಲ್ಲಿ ನನ್ನ ತಂದೆ ತಾಯಿ ಆರಾಮಾಗಿದ್ದಾರೆ ತಾನೆ' ಎಂದು ಹಾಸ್ಯ ಮಾಡುತ್ತಿದ್ದರಂತೆ. ಅಂದರೆ, ಎಲ್ಲ ರೀತಿಯಲ್ಲೂ ಎತ್ತರದ ವ್ಯಕ್ತಿತ್ವ ಹೊಂದಿದ್ದ ಈ ಮಹನೀಯರ ಜೇಬು ಕೂಡ ಅವರ ವ್ಯಕ್ತಿತ್ವದ ಪ್ರತಿಬಿಂಬವೇ ಆಗಿತ್ತು ಎಂದು ನಾವು ಅರ್ಥೈಸಬಹುದು ಅಲ್ಲವೇ?

ಯೋಚನೆಗಳು ಮತ್ತಷ್ಟು ವೇಗವಾಗಿ ಬರತೊಡಗಿದವು. ಇಂದಿನ ಕಾಲದಲ್ಲಿ ಜೇಬಿನಲ್ಲಿ ಪರ್ಸ್ ಇರುತ್ತದೆ. ಗಂಡಸರಷ್ಟೇ ಅಲ್ಲ, ಹೆಂಗಸರೂ ಕೂಡ ಜೇಬಿರುವ ಕುರ್ತಾಗಳನ್ನು, ಪ್ಯಾಂಟ್‌ಗಳನ್ನು ತೊಡುತ್ತಾರೆ. ಅವುಗಳಲ್ಲಿ ಜೇಬುಗಳಷ್ಟೇ ಅಲ್ಲ, ಸೀಕ್ರೆಟ್ ಪಾಕೆಟ್, ಅಂದರೆ ಕಳ್ಳ ಜೇಬುಗಳೂ ಇರುತ್ತವೆ.

ಗಂಡಸರ ಪರ್ಸ್ ಇರುವಂತೆ ಹೆಂಗಸರ ಪರ್ಸ್, ಹೆಗಲಿಗೇರಿಸಿಕೊಂಡು ಓಡಾಡುವ ವ್ಯಾನಿಟಿ ಬ್ಯಾಗ್, ಅಂದರೆ ಜಂಬದ ಚೀಲಗಳು ಇರುತ್ತವೆ.

ಇಲ್ಲಿಯ ವರೆಗೂ ಜೇಬಿನ, ಪರ್ಸಿನ ಚರ್ಚೆ ಆಯಿತು. ಈಗ ಜೇಬಿನ, ಪರ್ಸಿನ ಒಳಗೆ ಇರುವ ವಸ್ತುಗಳ ಬಗ್ಗೆ ಯೋಚಿಸೋಣ. ಗಂಡಸರಾದರೆ, ಪರ್ಸ್ ಅಥವಾ ಜೇಬಿನೊಳಗೆ ಕೆಲವು ನೋಟ್‌ಗಳು(ಹಣ), ಕೆಲವು ನಾಣ್ಯಗಳು, ಆತ್ಮೀಯರ ಫೋಟೋ, ಕರವಸ್ತ್ರ, ಬಾಚಣಿಗೆ, ಡ್ರೈವಿಂಗ್ ಲೈಸೆನ್ಸ್, ಸಿಗರೇಟ್ ಸೇದುವವರಾದರೆ ಸಿಗರೇಟ್, ಮೌತ್ ಫ್ರೆಶ್‌ನರ್, ಕೀಗಳು ಇರಬಹುದು. ಹೆಂಗಸರಾದರೇ? ಅಂತ ಕೇಳುತ್ತೀರಾ? ಜೋಪಾನ, ನನ್ನ ಲಿಸ್ಟ್ ನೋಡಿ ನೀವು ತಲೆ ತಿರುಗಿ ಬೀಳಬಹುದು. ಹೆಂಗಸರ ಪರ್ಸ್ ಒಳಗೆ ಒಂದು ಸಾಮ್ರಾಜ್ಯವೇ ಇರುತ್ತದೆ. ಮೇಲಿನ ವಸ್ತುಗಳ ಜೊತೆಗೆ, ಕನ್ನಡಿ ಇರುವ ಕಾಂಪ್ಯಾಕ್ಟ್ ಡಬ್ಬಿ, ಲಿಪ್‌ಸ್ಟಿಕ್, ಕಣ್ಣಿನ ಕಾಡಿಗೆ (ಕಾಜಲ್), ಪರ್ಫ್ಯೂಮ್, ಬಿಂದಿ ಪ್ಯಾಕೆಟ್, ಟಿಷ್ಯೂ ಪೇಪರ್, ಚಾಕೊಲೇಟ್, ಮಾತ್ರೆಗಳು, ಪೆಪ್ಪರ್ ಸ್ಪ್ರೇ(ಕಿಡಿಗೇಡಿಗಳು ತೊಂದರೆ ಕೊಟ್ಟರೆ ಬೇಕಾಗುವ ವಸ್ತು), ನೋಟ್‌ಪುಸ್ತಕ, ಪೆನ್, ಓದಲು ಪುಸ್ತಕ ಇತ್ಯಾದಿ...ನನ್ನ ಗೆಳತಿ ಒಬ್ಬಳು ಫೋಲ್ಡಬಲ್ ಕತ್ತರಿ ಮತ್ತು ಫೋಲ್ಡಬಲ್ ಚಾಕು ವನ್ನು ಇಟ್ಟುಕೊಂಡಿರುವುದನ್ನು ಕಂಡು ಹೌಹಾರಿದ ಅವಳ ಬಾಸ್, ಇದೇಕೆ ಎಂದು ಕೇಳಿದಾಗ ಅವಳು ಅವನಿಗೆ ಕೊಟ್ಟ ಉತ್ತರ, 'ದಾರಿಯಲ್ಲಿ ಒಮ್ಮೊಮ್ಮೆ ಹಣ್ಣು ತೆಗೆದುಕೊಂಡಾಗ ಚಾಕು ಉಪಯೋಗ ಆಗುತ್ತದೆ, ಮಲ್ಲಿಗೆ ಹೂವು ಕೊಂಡಾಗ ಕತ್ತರಿ ಬೇಕಾಗುತ್ತದೆ.' ಚಿಕ್ಕ

ಮಗು ಇರುವ ತಾಯಿಯ ಪರ್ಸ್ ಅನ್ನು ತೆಗೆದು ನೋಡಿದರೆ, ಅದರಲ್ಲಿರುವ ವಸ್ತುಗಳನ್ನು ಪಟ್ಟಿಮಾಡಲು ಒಂದು ತಿಂಗಳು ಬೇಕಾಗಬಹುದು! ಇದು ಉತ್ಪ್ರೇಕ್ಷೆ ಅಲ್ಲ, ವಾಸ್ತವ!

ಕಾಲ ಬದಲಾಗುತ್ತಿದೆ. ಮುಖ್ಯವಾಗಿ ಹಣವನ್ನಿಡಲು ಬಳಸಲಾಗುತ್ತಿದ್ದ ಜೇಬು ಅಥವಾ ಪರ್ಸ್‌ನ ಉಪಯೋಗ ಕೂಡ ಬದಲಾಗಿದೆ. ಇಂದಿನ ತಂತ್ರಜ್ಞಾನ, ನಾವು ಹಣವನ್ನು ಬಳಸುವ ರೀತಿಯನ್ನೇ ಬದಲಿಸಿದೆ. ಕ್ರೆಡಿಟ್ ಕಾರ್ಡ್ ಒಂದನ್ನು ಇಟ್ಟುಕೊಂಡರೆ ಸಾಕು ಎಲ್ಲಿ ಬೇಕಾದರೂ ಓಡಾಡಬಹುದು. ಅದನ್ನು ಮನೆಯಲ್ಲೇ ಮರೆತು ಬಂದರೆ? ಯೋಚನೆಯಿಲ್ಲ, ಒಂದು ಮೊಬೈಲ್ ಇದ್ದರೆ ಸಾಕು, ಜಿಪೇ, ಫೋನ್ ಪೇ ಮುಂತಾದವುಗಳ ಸಹಾಯದಿಂದ ಬೇಕಾದ್ದನ್ನು ಕೊಳ್ಳಬಹುದು.

ಹೀಗೆ ಯೋಚಿಸುತ್ತಿದ್ದಾಗ ನಮ್ಮ ಮನೆಯ ಕೆಲಸದಾಕೆ ರೂಮನ್ನು ಗುಡಿಸಿ, ಸಾರಿಸಲು ಮೇಲೆ ಬಂದಳು. ಅಮ್ಮ ನೀಡಿದ್ದ ಎಚ್ಚರಿಕೆ ಮಾತು ನೆನಪಾಗಿ ಖಾರದ ಪುಡಿ ಖಾಲಿ ಮಾಡಿ ತಟ್ಟೆ ತೊಳೆದಿಟ್ಟು ಕೆಳಗೆ ಹೋದೆ. ಕೆಲಸದಾಕೆಯ ಮಾಸಿದ ಬಟ್ಟೆ, ಬಿಸಿಲಿನಿಂದ ಬಾಡಿಹೋಗಿದ್ದ ಮುಖ ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಮಾಡಿದವು. ಅಮ್ಮ ಮಜ್ಜಿಗೆ ಮಾಡುತ್ತಿದ್ದರು. ನಾನು ಒಳಗೆ ಹೋದದ್ದನ್ನು ಕಂಡು, 'ಇದು ನಿನಗಲ್ಲ, ಪಾಪ ಯಾಕೋ ಅವಳು ಸುಸ್ತಾಗಿದ್ದಾಳೆ. ಊಟ ಮಾಡು ಅಂದರೆ ಬೇಡ ಅಂದಳು. ಬಿಸಿಲು ಕಾಲ, ಅವಳಿಗೆ ಕೊಟ್ಟು ಬಾ' ಎಂದರು.

ಆ ಮಜ್ಜಿಗೆಯ ಲೋಟವನ್ನು ಕೈಯಲ್ಲಿ ಹಿಡಿದು ಮೆಟ್ಟಿಲು ಹತ್ತಿ ಮೇಲೆ ಹೋಗುವಾಗ ನನಗೆ, ಹಿಂದಿನವರ ಜೇಬು, ಪರ್ಸ್‌ನಂತೆ ಅವರ ಮನಸ್ಸುಗಳೂ ದೊಡ್ಡದಾಗಿರುತ್ತಿದ್ದವು. ಇಂದಿನ ತಂತ್ರಜ್ಞಾನದ ಸವಲತ್ತನ್ನು ಅನುಭವಿಸುತ್ತಾ ಬೀಗುವ ನಮ್ಮಂಥವರು ಸೀಕ್ರೆಟ್ ಪಾಕೆಟ್ ಮತ್ತು ಸೀಕ್ರೆಟ್ ಲಾಕರ್ ಒಳಗೆ ದುಡ್ಡನ್ನು ಹುದುಗಿಸಿಡುವುದನ್ನಷ್ಟೇ ಕಲಿತಿದ್ದೇವೆಯೇ? ಈ ಹಣ, ತಂತ್ರಜ್ಞಾನದ ಆರ್ಭಟ ನಮ್ಮ ಮಾನವೀಯತೆಯನ್ನು ಕಡಿಮೆ ಮಾಡುತ್ತಿದೆಯೇ? ಎನಿಸಿತು.

ಮಜ್ಜಿಗೆಯನ್ನು ತೆಗೆದುಕೊಳ್ಳುತ್ತಾ ಆಕೆ, 'ಪರವಾಗಿಲ್ಲವೇ, ಸ್ವಲ್ಪ ಬುದ್ಧಿ ಬಂದಿರುವ ಹಾಗಿದೆ, ಮಂಚದ ಕೆಳಗಿನ ಖಾರದ ಪುಡಿಯ ಪ್ಲೇಟ್ ಕಾಣುತ್ತಿಲ್ಲವಲ್ಲ' ಎಂದು ರೇಗಿಸಿದಾಗ ನಾನು, ಕೋಪಗೊಂಡವಳಂತೆ ನಟಿಸಿ, ಒಂದು ಲೋಟ ಮಜ್ಜಿಗೆಯನ್ನು ಅಮ್ಮನಿಂದ ಪಡೆಯಲು ಅಡಿಗೆಮನೆಯತ್ತ ನಡೆದೆ. ■

## ಇಲ್ಲಪ್ಪಾಇಲ್ಲಾ...

**– ವಿ. ವಿಜಯೇಂದ್ರ ರಾವ್**

ಗುಂಡ ಒಂದು ದೊಡ್ಡ ವಸತಿ ಸಮುಚ್ಚಯದ ಮುಂದೆ, ಒಂದು ಮಹಡಿ ಮನೆ ಕಟ್ಟಿ, ಆ ಮನೆಗೆ "ಇಲ್ಲಾ ಬದುಕಿದ್ದೀವಿ..! " ಅಂತ ಹೆಸರಿಟ್ಟಿದ್ದನು. ಗೃಹಪ್ರವೇಶಕ್ಕೆ ಬಂದವರೆಲ್ಲಾ, ಇದೇನೋ ಹೀಗೆ ಹೆಸರಿಟ್ಟಿದ್ದೀಯಾ ? ಎಂದು ಕೇಳಿದಾಗ, ನನಗೆ ಬೆಂಗಳೂರಿನ ಹಲವು ಕಡೆ "ಸತ್ವಾ" ಅನ್ನೋ ಬೃಹತ್ ವಸತಿ ಸಮುಚ್ಚಯ ನೋಡಿದಾಗಲೆಲ್ಲಾ, ಇದೇನು ಸತ್ವಾ, ಸತ್ವಾ ಅಂತ ಕೇಳ್ತಾರಲ್ಲ ಅಂತ ಬೇಜಾರಾಗಿ ಅದರ ಎದುರೇ ಮನೆಕಟ್ಟಿ ಈ ಹೆಸರಿಟ್ಟೆ ಎಂದಾಗ, ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟುಕೊಂಡು ಆಶ್ಚರ್ಯ ವ್ಯಕ್ತಪಡಿಸಿದರು. !

# ಸಮಯ ತಿರುಗಿಸಿದ ಕ್ಷಣ



ರಾಜೇಶ್ವರಿ. ಹುಲ್ಲೇನಹಳ್ಳಿ

ನಾನಾಗ ಕೆಲಸಕ್ಕೆ ಸೇರಿದ ಹೊಸತು. ನಾನು ಕೆಲಸ ಮಾಡುತ್ತಿದ್ದ ಕಛೇರಿ ಕಟ್ಟಡದಲ್ಲಿ ನಾವಿಬ್ಬರೇ ಹೆಣ್ಣು ಮಕ್ಕಳಿದ್ದೆವು ಒಂದು M.D. P.A ಮಂಜುಳ ಮತ್ತೆ ನಾನು. ಮಂಜುಳ ಮೇಲಂತಿಸ್ತಿನಲ್ಲಿದ್ದರೆ ನಾನು ಕೆಳ ಅಂತಸ್ತಿನ D.C.S ವಿಭಾಗದಲ್ಲಿದ್ದೆ. ಇಡೀ ಕಛೇರಿ ಆಡಳಿತ ಕಟ್ಟಡದಲ್ಲಿ ಇಬ್ಬರೇ ಮಹಿಳಾ ಸಹೋದ್ಯೋಗಿಗಳು ಇದ್ದುದರಿಂದ ಕೆಲಸ ಮುಗಿಸಿ ಬಿಡುವಾದರೆ ಒಮ್ಮೆ ಅವಳು ಕೆಳಗಿನ ನಮ್ಮ ವಿಭಾಗಕ್ಕೆ ಬರುವುದು ಮತ್ತೆ ಹಲವು ಬಾರಿ M.D. ಸರ್ ಇಲ್ಲದಾಗ ನಾನು ಅವರ ವಿಭಾಗಕ್ಕೆ ಹೋಗಿ ಅಂದಿನ ಪತ್ರಿಕೆಯ ಸುದ್ಧಿ, ಉಡುಗೆ ತೊಡುಗೆ, ಆಗಷ್ಟೇ ಹೊಸದಾಗಿ ಬಂದ T.V.ಯಲ್ಲಿ ಬರುತ್ತಿದ್ದ ಹಿಂದಿ ಸೀರಿಯಲ್ಗಳ ಕುರಿತು ತುಸು ವಿಚಾರ ವಿನಿಮಯ ಮಾಡುವುದು ರೂಢಿಯಲ್ಲಿತ್ತು. ಹಾಗೇ ಒಂದು ದಿನ ಮಧ್ಯಾಹ್ನ ಸುಮಾರು ಹನ್ನೆರಡು ಮೂವತ್ತರ ಸಮಯದಲ್ಲಿ ಮೇಲಂತಸ್ತಿನಲ್ಲಿದ್ದ ನನ್ನ ಸಹೋದ್ಯೋಗಿ ಗೆಳತಿ ಮಂಜುಳಾದೊಂದಿಗೆ ಮಾತನಾಡಲೆಂದು ಮೆಟ್ಟಿಲನ್ನೇರಿ ನಾನು ಹೋಗುವುದಕ್ಕೂ ನಮ್ಮ .M.D ಸರ್ ಎದುರಾಗುವುದಕ್ಕೂ ಸರಿ ಹೋಯ್ತು.! ಅವರಿರುವುದರ ಅರಿವಿರಲಿಲ್ಲ ನನಗೆ. ಅವರು ಇಲ್ಲವೆಂದು ಭಾವಿಸಿ ನಾನು ಮೇಲೆ ಹೋಗಿದ್ದೆ. ಗಾಭರಿಯಿಂದ ನಮಸ್ತೆ ಸರ್ ಎಂದೆ. "ಹಾ ನಮಸ್ತೆ ಏನಮ್ಮಾ ಇಲ್ಲಿ" ಅಂದರು "ಕೂಡಲೇ ನಾನು ಸರ್ ಕ್ಯಾಂಟೀನಿಗೆ ಊಟಕ್ಕೆ ಹೋಗಲು ಮಂಜುಳಾಳನ್ನು ಕರೆಯಲು ಬಂದೆ".ಎಂದೆ ತಕ್ಷಣ ಅವರು "ಓಹ್ ಆಗಲೇ ಒಂದು ಗಂಟೆನಾ? ಊಟದ ಸಮಯ ಆಗೋಯ್ತಾ? ಎಂದು ತಮ್ಮ ಬಲಗೈಗೆ ಕಟ್ಟದ್ದ ವಾಚ್ ಕಡೆಗೊಮ್ಮೆ ನೋಡಿ ಓಹ್ ನನ್ನ ಗಡಿಯಾರ ಅರ್ಧ ಗಂಟೆ ಹಿಂದೆ ತೋರಿಸುತ್ತಿದೆಯಲ್ಲಾ" ಎಂದು ತಕ್ಷಣ ತಮ್ಮ ವಾಚನ್ನು ತಿರುಗಿಸಿ ಒಂದು ಗಂಟೆಗೆ ಇಟ್ಟು ಕೊಂಡರು. ಆ ಸಮಯದಲ್ಲಿ ಅಲ್ಲಿ ಹೋಗಿ ಅವರು ಎದುರು ಸಿಕ್ಕಿ ಹಾಗೆ ಕೇಳಿದ್ದಕ್ಕೆ ಊಟದ ಸಮಯ ಎಂದೆನೇ ಹೊರತು ನಾನು ಖಂಡಿತಾ ಸಮಯ ಒಂದು ಗಂಟೆಯಾಗಿದೆ ಎಂದು ಹೇಳಲಿಲ್ಲ!. ಅವರು ಕೈ ಗಡಿಯಾರ ತಿರುಗಿಸಿ ಮುಂದಕ್ಕೆ ಇಟ್ಟುಕೊಂಡಾಗ ನನಗೋ ಒಳಗೊಳಗೇ ಬಂದ ನಗುವನ್ನು ತಡೆಯಲಾಗಲಿಲ್ಲ. ಅವರು ಕೆಳಗಿಳಿದು ಹೋದೊಡನೆ ಮಂಜುಳಾ ಬಳಿ ಹೋಗಿ ನಡೆದ ಘಟನೆಯನ್ನು ಹೇಳಿ ನಕ್ಕಿದ್ದೇ ನಕ್ಕಿದ್ದು. ಹಾಗೇ ಈ ಘಟನೆಯನ್ನು ಉಳಿದ ಸಹೋದ್ಯೋಗಿಗಳಿಗೂ ಹೇಳಿ ನಕ್ಕದ್ದಾಯ್ತು. ಹಾಗೂ ಕೆಲವು ಸಹೋದ್ಯೋಗಿಗಳು ನನ್ನನ್ನು ಹಲವೊಮ್ಮೆ "ಆಹಾ ಎಂ.ಡಿ ಸರ್. ಟೈಮ್ ತಿರುಗಿಸಿಕೊಂಡಂತಲ್ಲಾ ಗೊತ್ತಾ?" ಎಂದು ರೇಗಿಸುತ್ತಿದ್ದರು. ಅವರು ಮಾತಿನಲ್ಲಿ ಒರಟು ಆದರೆ ಸಹೃದಯಿ. ಇತ್ತೀಚೆಗೆ ಕೆಲವು ವರುಷಗಳ ಹಿಂದೆ ಅವರು ಗತಿಸಿದಾಗ ಅವರ ಸಂತಾಪ ಸಭೆಯಲ್ಲಿ ಅವರ ಕುರಿತು ಮಾತನಾಡುವಾಗ ಅವರ ಒರಟು ಮಾತಿನ ಹಿಂದಿದ್ದ ಒಳ್ಳೆಯ ಹೃದಯವಂತಿಕೆಯನ್ನು ಕೂಡ ಸ್ಮರಿಸಿದ್ದೆ.

ಮಾತಿನಲ್ಲಿ ಮಾತ್ರ ಒರಟುತನವಿದ್ದರೂ ತಮ್ಮ ಕೈಕೆಳಗಿನ ಉದ್ಯೋಗಿಗಳಿಗೆ ಒರಟಾಗಿ ಮಾತನಾಡಿದರೂ ಲಿಖಿತವಾಗಿ ಯಾರಿಗೂ ಒಂದು ನೋಟೀಸ್ ಕೂಡ ಕೊಡುವಂತಹ ಕೆಡುಕು ಮಾಡುತ್ತಿರಲಿಲ್ಲ ಅಂತಹ ಸಹೃದಯಿಗಳು ಅವರಾಗಿದ್ದರು. ■

# ಬೂಸ್ಟ್

ಗೌತಮ

“ರತ್ನಮ್ಮ, ನಮ್ಮನೆ ಅಡುಗೆ ಮಾಡೋಳು, ನಿಜವಾಗಲೂ ರತ್ನಾನೇ ಕಣಯ್ಯ. ಆ ಮಾತನ್ನ ನಾನೇನಾದರೂ ಜೋರಾಗಿ ಹೇಳಿದರೆ ಪದ್ದಿ ರುದ್ರಿಯಾಗಿಬಿಡ್ತಾಳೆ. 'ಹೌದು ಹೌದು. ಅವಳು ರತ್ನ, ಪಚ್ಚೆ, ಗೋಮೇಧಿಕ ಎಲ್ಲ. ನಾವೆಲ್ಲ ಮಣ್ಣ ಹೆಂಟೆಗಳು. ಎಲ್ಲಿ ಹೋಗತ್ತೆ ಗಂಡಸರ ಬುದ್ಧಿ? ನಾ.. ಬುದ್ಧಿ. ಬೇಡ ಬಿಡಿ' ಅಂತ ಸಿಡಿದೇಳ್ತಾಳೆ. ಹಾಗಾಗಿ ಆದಷ್ಟೂ ರತ್ನಮ್ಮನ್ನ ಹೊಗಳೋಕೆ ಹೋಗಲ್ಲ. ಏನೋ ನೀನು ಹಳೇ ಸ್ನೇಹಿತ, ಅಪರೂಪಕ್ಕೆ ಬಂದಿದ್ದೀಯಾ ಅಂತ ನಿನ್ನ ಮುಂದೆ ನನ್ನ ಮನಸ್ಸಿನಲ್ಲಿರೋದನ್ನ ತೋಡಿಕೊಳ್ತಾ ಇದ್ದೀನಿ ಅಷ್ಟೆ. ಅದೂ ಅಲ್ಲದೆ, ಇವತ್ತು ಪದ್ದಿ ಗಣಪತಿ ದೇವಸ್ಥಾನಕ್ಕೆ ಹೋಗಿದ್ದಾಳೆ. ಇವತ್ತು ಸಂಕಷ್ಟಹರ ಚತುರ್ಥಿ ಮಂಗಳವಾರ ಬಂದಿದೆ ನೋಡು. ಅಲ್ಲಿ ನಿಂಬೆ ಹಣ್ಣಲ್ಲಿ ದೀಪ ಹಚ್ಚಿ ಪೂಜೆ ಮಾಡ್ತಾಳೆ. ಲೇಟಾಗತ್ತೆ ಬರೋದು. ಅದಕ್ಕೇ ನಾನು ನಿನ್ನ ಹತ್ತಿರ ಸಾವಕಾಶವಾಗಿ ಮಾತಾಡ್ತಾ ಇರತೋದು. ನೋಡು ಪದ್ನಾಭೀ, ರತ್ನಮ್ಮ ನಮ್ಮನೇಲಿ ನಾಲಕ್ಕೈದು ತಿಂಗಳಿಂದ ಅಡುಗೆ ಕೆಲಸ ಮಾಡ್ತಾ ಇದ್ದಾಳೆ. ಅವಳ ಕೈಯ್ಯಿ ಬಾಯಿ ಪರಿಶುದ್ಧ. ತೊಗರಿ ಕಾಳಿನ ಡಬ್ಬದಲ್ಲೋ, ಗಸಗಸೆ ಡಬ್ಬದಲ್ಲೋ ಐನೂರು ರುಪಾಯಿ ನೋಟು ಸಿಕ್ಕಿದರೂ 'ಅಕ್ಕ ಗಸಗಸೆ ಡಬ್ಬದಲ್ಲಿ ಇತ್ತು' ಅಂತ ನಮ್ಮಾಕೇಗೆ ತಂದುಕೊಟ್ಟುಬಿಡ್ತಾಳೆ. 'ಅಕ್ಕ' ಅಂದ ತಕ್ಷಣ ಇವಳಿಗೆ ಮೈಯ್ಯೆಲ್ಲ ಉರಿದುಹೋಗತ್ತೆ. ಒಂದು ಸಲ 'ಇವಳ್ಯಾವ ತಂಗೀರೀ ನನಗೆ?' ಅಂತ ನನ್ನ ಮೇಲೇ ರೇಗಿದ್ದಳು. ಅವರ ಮನೆಯ ವಿಷಯಾನ ನಮ್ಮನೇಲಿ, ನಮ್ಮನೆ ವಿಷಯಾನ ಅವರ ಮನೇಲಿ ಹೇಳೋ ದರಿದ್ರ ಚಟ ಅಂತೂ ಅವಳಿಗೆ ಇಲ್ಲವೇ ಇಲ್ಲ. ತಾನಾಯ್ತು, ತನ್ನ ಅಡುಗೆ ಕೆಲಸವಾಯ್ತು. ಕೆಲಸ ಅಂತೂ... ಅಯ್ಯೋ, ಅದನ್ನ ಹೇಳೋಕೆ ನನಗೆ ಪದಗಳೇ ಇಲ್ಲ ಬಿಡು, ಮುಖ್ಯವಾಗಿ ಅಡುಗೆ ಹೇಗೆ ಮಾಡ್ತಾಳೆ ಅನ್ನೋದನ್ನೇ ಹೇಳ್ಲಿಲ್ಲ ನೋಡು. ಪದ್ನಾಭೀ, ನಿಜ ಹೇಳಿದರೂ ನಂಬ್ತೀಯ ಸುಳ್ಳು ಹೇಳಿದರೂ ನಂಬ್ತೀಯಾ. ಪೊಂಗಲ್ ಮಾಡ್ತಾಳೇ, ಆ ತಿರುಪತಿ ದೇವರ ಪ್ರಸಾದಕ್ಕಿಂತಲೂ ಚೆನ್ನಾಗಿರತ್ತೆ ಕಣಯ್ಯ” ಅಂದೆ.

“ಹೌದಾ?” ಅನ್ನುತ್ತ ಪದ್ನಾಭೀ ತನ್ನ ಮೊಂಡು ಮೂಗಿನ ಮೇಲೆ ಕೈ ಇಟ್ಟುಕೊಂಡ.

“ನೋಡು, ಇನ್ನೊಂದು ಸಂತೋಷದ ವಿಷಯ ಹೇಳಬೇಕು ನಿನಗೆ. ರತ್ನಮ್ಮ ಬಂದ ಮೇಲೆ ಒಬ್ಬರಲ್ಲ ಒಬ್ಬರು ಹೆಚ್ಚೂ ಕಡಿಮೆ ಪ್ರತಿ ದಿನ ಬರ್ತಾರೆ ನೋಡಯ್ಯ. ನನ್ನ ಜೊತೆ ಕಾಲ ಕಳೆಯೋಕೆ ಸ್ನೇಹಿತರು ಯಾವಾಗಲೂ ಬರ್ತಾರೆ ಅಂದರೆ ಅದಕ್ಕಿಂತಲೂ ಬೇರೆ ಭಾಗ್ಯ ಯಾವುದಿದೆ ಹೇಳಯ್ಯ. ಯಾಕಿರಬಹುದು ಹೇಳು ನೋಡೋಣ”

”ನೀನೇ ಹೇಳು. ನಂಗೆ ಗೊತ್ತಾಗಲಿಲ್ಲ”

“ನಾನು ಹೇಳಿದ ಹೊರತು ನಿನಗೆ ತಾನೇ ಹೇಗೆ ಗೊತ್ತಾಗತ್ತೆ ಪಾಪ”

ಅಷ್ಟು ಹೊತ್ತಿಗೆ ರತ್ನಮ್ಮ ಅಡುಗೆ ಮನೆಯಿಂದ ಹಾಲಿಗೆ ಬಂದು ಬಾಗಿಲಲ್ಲೇ ನಿಂತು “ಅವರಿಗೆ ಕುಡಿಯೋಕೆ ಏನು ಕೊಡಲಿ?”

“ನೋಡಯ್ಯಾ ಈಕೇನೆ ರತ್ನಮ್ಮ. ನಮ್ಮನೆ ಕುಕ್ಕು” ಅಂದೆ. ರತ್ನಮ್ಮನ ಜೊತೆ ಪದ್ನಾಭಿಯೂ ನಕ್ಕ.

ನಾನು ಪದ್ನಾಭಿಯ ಕಡೆ ನೋಡಿದೆ, 'ರತ್ನಮ್ಮನ ಪ್ರಶ್ನೆಗೆ ಉತ್ತರ ಏನು' ಅಂತ ಕೇಳೋ ಥರ.

ರತ್ನಮ್ಮನೇ "ಕಾಫೀ?ನೋ, ಟೀನೋ, ಬಾದಾಮಿ ಹಾಲೋ, ಬೂಸ್ಟೋ" ಕೇಳಿದಳು.

"ಯಾವುದಾದರೂ ಕೊಡಿ ಪರವಾಗಿಲ್ಲ" ಅಂದ.

"ನೋಡೀ, ಅಪರೂಪಕ್ಕೆ ಬಂದಿದ್ದೀರಿ. ಬೂಸ್ಟ್ ಮಾಡಿಕೊಡ್ತೀನಿ. ಕುಡಿದು ನೋಡಿ ಹೇಗಿರತ್ತೆ ಅಂತ" ಅಂದವಳೇ ಅವನ ಉತ್ತರಕ್ಕೂ ಕಾಯದೆ ಹಿಂತಿರುಗಿದಳು. ಎರಡೇ ನಿಮಿಷಗಳಲ್ಲಿ ಎರಡು ದೊಡ್ಡ ಲೋಟಗಳೊಂದಿಗೆ ವಾಪಾಸು ಬಂದಳು.




ಹಬೆಯಾಡುತ್ತಿದ್ದ ಬೂಸ್ಟ್ ತುಟಿಗಿಟ್ಟು ಒಂದು ಗುಟುಕು ಹೀರಿದ ಪದ್ನಾಭಿ "ವಾವ್" ಅಂದ.

ಅವನು ಹಾಗನ್ನೋದನ್ನೇ ಕಾಯ್ತಿದ್ದವನ ಹಾಗೆ "ನೋಡಿದ್ಯಾ ಹ್ಯಾಗಿದೇ?" ಅಂದೆ.

ಕುಡಿದು ಲೋಟವನ್ನ ಕೆಳಗಿಡುತ್ತಿದ್ದ ಹಾಗೇ "ತಿಂಡಿ ಟೈಮಿಗೆ ಬಂದವರಿಗೆ ತಿಂಡಿ, ಊಟದ ಟೈಮಿಗೆ ಬಂದವರಿಗೆ ಊಟ, ರುಚಿರುಚಿಯಾಗಿ ಮಾಡಿ ಬಡಿಸ್ತಾಳೆ ಕಣಯ್ಯ. ಬಂದವರಿಗೆ ಇಂತದ್ದೇ ಇಷ್ಟ ಅಂತ ಅದು ಹ್ಯಾಗೋ ಕಂಡುಹಿಡಕೊಂಡುಬಿಡ್ತಾಳೆ"

ಮೂಕನಾಗಿಬಿಟ್ಟ ಪದ್ನಾಭಿ.

"ಇಗಲಾದರೂ ಗೊತ್ತಾಯ್ತಾ ಆ ಪಾಟಿ ಸ್ನೇಹಿತರು ಯಾಕೆ ನನ್ನನ್ನ ನೋಡೋಕೆ ಬರ್ತಾರೆ ಅಂತಾ?"

"ಅಷ್ಟೂ ಗೊತ್ತಾಗದಿದ್ದರೆ ಹೇಗಯ್ಯ? ಇನ್ನು ಮೇಲೆ ನಾನೂ ಕೂಡ ಆ ಸ್ನೇಹಿತರ ಬಳಗದಲ್ಲಿದೀನಿ ಅನ್ಕೋ" ಅಂದ.

'ವೆರಿ ಗೂಡ್. ವೆಲ್ಕಮ್'

"ಹೌದೂ, ಅಡುಗೆಯವರನ್ನ ಯಾಕೆ ಇಟ್ಟುಕೊಂಡಿದ್ದೀಯಾ?"

"ಹೇಳೋದೇ ಮರೆತಿದ್ದೆ ನೋಡು. ಪದ್ದೀಗೆ ಈಗೊಂದಾರೇಳು ತಿಂಗಳಿಂದ ಮಂಡಿನೋವು ಜಾಸ್ತಿಯಾಗಿಬಿಟ್ಟಿದೆ. ಎದ್ದರೆ ಕೋರೋಕಾಗಲ್ಲ, ಕೂತರೆ ಏಳೋಕಾಗಲ್ಲ. ಐದು ನಿಮಿಷ ಎದ್ದು ನಾಲ್ಕು ಹೆಜ್ಜೆ ಹಾಕಿದರೆ, ಎರಡು ಗಂಟೆ ಮಲಗಿರ್ತಾಳೆ ಪಾಪ. ಚಕ್ಕಂಬಕ್ಕಲ ಹಾಕಿ ಕೂರೋಕಾಗಲ್ಲ, ಮಹಡಿ ಹತ್ತೋಕಾಗಲ್ಲ, ಹೀಗೇ ಪಾಪ ಒದ್ದಾಡ್ತಾ ಇದ್ದಳು. ಸುಮಾರು ಕಡೆ ತೋರಿಸಿದ್ದಾಯಿತು. ಏನೂ ಪ್ರಯೋಜನವಾಗಲಿಲ್ಲ. ನೀ ರೀಪ್ಲೇಸ್ಮೆಂಟ್ ಆಪರೇಷನ್ ಮಾಡಿಸಬೇಕು ಅಂತಂದರು. ಅದಕ್ಕೆ ಮಾಡಿಸಬೇಕೋ ಬೇಡವೋ ಅಂತ ಹಿಂದೂ ಮುಂದೂ ನೋಡ್ತಾ ಇದ್ದೀವಿ"

"ಮತ್ತೆ ಮನೇಲೂ ಓಡಾಡೋಕಾಗಲ್ವಾ?"

"ಅದೇ ಹೇಳಿದೆನಲ್ಲಾ, ನಾಲ್ಕು ಹೆಜ್ಜೆ ಹಾಕಿದರೆ ಎರಡು ಗಂಟೆ ರೆಸ್ಟು, ಹ್ಯಾಗೋ ನಡೀತಾಳೆ. ಎಷ್ಟು ಬೇಕೋ ಅಷ್ಟು, ಅಷ್ಟೆ"

"ಮತ್ತೆ ದೇವಸ್ಥಾನಕ್ಕೆ ಹೋಗಿದ್ದಾರೆ ಅಂದೇ?"

"ಆಟೋಲಿ ಹೋಗ್ತಾಳೆ, ಆಟೋಲಿ ಬರ್ತಾಳೆ"

ಹೊರಗೆ ಆಟೋ ಶಬ್ದ ಕೇಳಿಸಿತು. ನನ್ನಲ್ಲಿ ಸಂಚಲನ. "ಈ ವಿಷಯ ಇಲ್ಲಿಗೇ ಕಟ್. ಅವಳೆದುರಿಗೆ ಈ ಬಗ್ಗೆ ಯಾವ ಪ್ರಶ್ನೇನೂ ಕೇಳಬೇಡ" ಅಂತ ಪಿಸುಗುಟ್ಟಿದೆ.

ಎಡಗಡೇಗೆ ಮುವ್ವತ್ತು ಡಿಗ್ರಿ, ಬಲಗಡೇಗೆ ಐವತ್ತು ಡಿಗ್ರಿ ವಾಲುತ್ತಾ ಒಳಗೆ ಬರ್ತಿದ್ದ ಹಾಗೇ ಪದ್ನಾಭಿ "ಪದ್ದಕ್ಕಾ ಚೆನ್ನಾಗಿದ್ದೀರಾ?" ಕೇಳಿದ.

"ಈ ಮಂಡಿ ಇರೋವರೆಗೂ ಚೆನ್ನು ಅನ್ನೋದು ಎಲ್ಲ ಬರತ್ತೆ. ನೀವು ಚೆನ್ನಾಗಿದ್ದೀರಾ?"

"ಹೂಂ" ಅಂದ.

"ರೀ" ಕರೆದಳು. ಎದ್ದು ಅವಳನ್ನು ಸಮೀಪಿಸಿದ ನನ್ನ ಕೈಗೆ ಒಂದು ಚೀಟಿ ಕೊಡುತ್ತಾ "ದಿನಸಿ ಲಿಸ್ಟ್ ಹಾಕಿದ್ದೀನಿ. ಎಲ್ಲ ತಂದುಬಿಡಿ" ಅಂತಂದು ಅತ್ತ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡರೆ, ಇತ್ತ ರತ್ನಮ್ಮ ನನ್ನ ಮುಂದೆ ಬಂದು ನಿಂತಳು.

ಮೆಲ್ಲುಸಿರಲ್ಲಿ "ಒಂದು ಬೂಸ್ಟ್ ಬಾಟಲು ತನ್ನಿ. ದೊಡ್ಡೇ ತೊಗೊಂಬನ್ನಿ" ಅಂತಂದು ಮತ್ತೆ "ಚೀಟೀಲಿ ಅದನ್ನ ಬರೀಬೇಡಿ" ಅಂತ ಎಚ್ಚರಿಸಿದಳು. ನನಗೆ ಆಶ್ಚರ್ಯದ ಮೇಲೆ ಆಶ್ಚರ್ಯ.

"ರತ್ನಮ್ಮಾ, ಹೋದ ವಾರ ತಾನೇ ಅಮ್ಮಾವ್ರೋರಿಗೆ ಗೊತ್ತಾಗದ ಹಾಗೆ ಒಂದು ದೊಡ್ಡ ಬಾಟಲು ತಂದುಕೊಟ್ಟೆನಲ್ಲಾ, ಇಷ್ಟು ಬೇಗ ಮುಗಿದುಹೋಯ್ತಾ?"

"ನಿಮ್ಮ ಸ್ನೇಹಿತರೇನೂ ಕಮ್ಮಿ ಬರ್ತಾರಾ? ಎಲ್ಲರಿಗೂ ಬೂಸ್ಟೇ ಅಲ್ಲವಾ ನಾನು ಮಾಡಿಕೊಡೋದೂ? ಕುಡಿದೋರು ಬೂಸ್ಟ್ ಈಸ್ ಮೈ ಸೀಕ್ರೆಟ್ ಅವರ್ ಎನರ್ಜಿ ಅಂತ ಖುಷ್ಯಾಗಿ ಹೋಗ್ತಾರಲ್ಲಾ. ಬೇಡ ಅಂದರೆ ಬಿಡೀ, ಕಾಫೀನೇ ಕಾಯಿಸಿ ಕೊಡ್ತೀನಿ" ಅಂತ ನನ್ನನ್ನ ಓರಗಣ್ಣಿನಿಂದ ಒಂಥರಾ ನೋಡಿದಳು. ತಲೆ ಆಡಿಸುತ್ತಾ "ಪದ್ನಾಭಿ ನಡಿಯೋ" ಅವನನ್ನ ಹೊರಡಿಸಿಕೊಂಡು ಹೊಸಿಲು ದಾಟಿದೆ.

ಬಾಗಿಲು ದಾಟಿ ರಸ್ತೇಲಿ ಹೆಜ್ಜೆ ಹಾಕ್ತಿದ್ದ ಹಾಗೇ ಒಂದೊಂದಾಗಿ ಹೊಳೀತಾ ಹೋಯಿತು. ಆಗಾಗ ಸಕ್ಕರೆ ಪೊಂಗಲ್ಲು, ಗಸಗಸೆ ಪಾಯಸಗಳಿಂದಾಗಿ, ಪ್ರತಿ ತಿಂಗಳ ದಿನಸಿ ಪಟ್ಟಿಯಲ್ಲಿ ದ್ರಾಕ್ಷಿ ಗೋಡಂಬಿಗಳು ಸೇರಿಕೊಳ್ತಾ ಇರೋದೂ, ನಮ್ಮ ಮನೆಗೆ ಬಂದಾಗ ನಯೋ ನಾರಾಯಣ ಅಂತಿದ್ದ ರತ್ನಮ್ಮ ಈಗ ಬೂಸ್ಟ್ ಈಸ್ ಮೈ ಸೀಕ್ರೆಟ್ ಅಫ್ ಎನರ್ಜಿ ಅನ್ನೋದನ್ನ ಸಾಬೀತುಪಡಿಸೋ ಹಾಗೆ ಮೈ ಕೈ ತುಂಬಿಕೊಂಡಿರೋದು, ಅವೆಲ್ಲ ಖರ್ಚಾಗ್ತಾ ಇವೆ ಅನ್ನೋದಕ್ಕೆ ಪುರಾವೆಯಾಗಿ ಮಾಡುವ ಅತಿಥಿ ಸತ್ಕಾರ ಎಲ್ಲ ಅರ್ಥವಾಗ್ತಾ ಹೋಯಿತು... ■

# ಬೃಹತ್ ಬೆಂಗಳೂರು ಪ್ರಾಧಿಕಾರ (ಬೃ.ಬೆ.ಪ್ರಾ)

ಇ.ಆರ್. ರಾಮಚಂದ್ರನ್

ಪ್ರಾಣಿಗಳು ಧರ್ಮಾಂಭುಧಿ ಕೆರೆಯ ಬದಿಯಲ್ಲಿ ತುರ್ತು ಸಭೆ ಸೇರಿದ್ದವು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಮ್ಪಿ) ಹೋಗಿ ಅದು ಗ್ರೇಟರ್ ಬೆಂಗಳೂರು ಅಥಾರಿಟಿಯಾಗಿ ಪರಿವರ್ತನೆಯಾಗಿದೆ. ಈ ಹೆಸರು ಇಂಗ್ಲಿಷ್ನಲ್ಲಿ ಇಟ್ಟಿದ್ದನ್ನು ತಾತ್ಕಾಲಿಕವಾಗಿ ಕನ್ನಡದಲ್ಲೂ ಬಳಿಸಲಾಗಿದೆ. 'ಕನ್ನಡ ಅಭಿಮಾನಿಗಳು, 'ಹಾಯ ಬೇಡಿ, ಒದೆಯ ಬೇಡಿ'. ಕನ್ನಡದಲ್ಲಿ ಹೆಸರು ಮುಂದೆ ಬರುತ್ತೆ. 'ಕನ್ನಡ ಸಾಹಿತ್ಯ ಪರಿಷತ್' ನಲ್ಲಿ ಇದರ ಬಗ್ಗೆ ಕೆಲಸ ನಡಿತಾ ಇದೆ.. ಇದಕ್ಕೆ ಮುಂಚೆ ಅಲ್ಲಿ ಕೆಲವು ಹೊಡೆದಾಡುವ ಸಂಗತಿಗಳಿವೆ. ಅದನ್ನು ಮುಗಿಸಿ ಇದಕ್ಕೆ ಬರುತ್ತಾರೆ. ತಾಳ್ಮೆ ವಹಿಸಿ.

ಇದೀಗ ಬಂದ ಸುದ್ದಿ. ಕನ್ನಡದಲ್ಲಿ 'ಬೃಹತ್ ಬೆಂಗಳೂರು ಪ್ರಾಧಿಕಾರ' (ಬಿಬಿಪ್ರಾ) ಎಂಬ ಹೆಸರನ್ನು ಇಡಲಾಗಿದೆ.

****

'ಗ್ರೇಟರ್ ಅನಿಮಲ್ ಫೋರಮ್ ಅಫ್ ಬೆಂಗಳುರು' ನ (ಗಿ ಅ ಎಫ್ ಎಫ್ ಬಿ) ಅಧ್ಯಕ್ಷೆ ಸೊಳ್ಳೆತಾಯಮ್ಮ ಸಭೆಯನ್ನು ಶುರು ಮಾಡಿತು.

'ನನ್ನ ಕೂಗಿಗೆ ಓಗೊಟ್ಟು ಬಂದು ಎಲ್ಲರೂ ಕೈ ಜೋಡಿಸುವಿರಿ ಎಂದು ನಾನು ಕನಸಿನಲ್ಲೂ ನೆನೆಸಿರಲಿಲ್ಲ. ಬಹಳ ಥ್ಯಾಂಕ್ಸ್. ನಿಮ್ಮನ್ನೆಲ್ಲಾ ತುಂಬಿ ತುಳುಕುವ ಕೊಚ್ಚೆ ಕೊಳಚೆಯಲ್ಲಿ ಬರಮಾಡಿಕೊಳ್ಳಬೇಕೆಂದಿದ್ದೆ. ಆದರೆ ಮೂರು ದಿನದಿಂದ ಮಳೇನೇ ಬಂದಿಲ್ಲ. ಕರ್ಪೊರೇಷನ್ ಒಂದರಿಂದ ಐದು ಪಟ್ಟು ಜಾಸ್ತಿಯಗಿದೆ ಎಂದರೆ ನನಗೇ ನಂಬುವುದಕ್ಕೆ ಸಾಧ್ಯವಾಗಿಲ್ಲ. ಮುಂದಿನ ಸರ್ತಿ ನಮಗೆ ಬಂದ ಈ ಕೊಡುಗೆಯನ್ನು ವಿಜೃಂಭಣೆಯಿಂದ ಅಚರಿಸೋಣ. ಇದು ನನ್ನ ಆಶ್ವಾಸನೆ.

ಐವತ್ತರ ದಶಕದಲ್ಲಿ ಜಯನಗರ ಬಡಾವಣೆ ಶುರುವಾದಾಗ ನನ್ನ ಅಜ್ಜಿ ಅಲಸೂರ್ ಲೇಕ್ನಲ್ಲಿ ಕಾರ್ಪೊರೇಷನ್ ಆಯೋಜಿಸಿದ ಡಿನ್ನರ್ ಪಾರ್ಟಿಗೆ ಸೊಳ್ಳೆ ಬಾಂಧವರನ್ನು' ಆಂಕಲ್ ಮತ್ತು ಲೆಗ್ ಪಾರ್ಟಿಗೆ' ಆಹ್ವಾನ ಮಾಡಿದ್ದಳಂತೆ! ಎಲ್ಲರ ಕಾಲನ್ನು ಮನಃ ಪೂರ್ತಿಯಾಗಿ ಕಚ್ಚಿ ಕೊನೆಗೆ ಆ ಪಾರ್ಟಿ ಡ್ಯಾನ್ಸ್ ಪಾರ್ಟಿಯಾಗಿ ಮುಕ್ತಾಯ–ಗೊಂಡಿತಂತೇ.!'

ಕಾರ್ಯದರ್ಶಿ ಹಂದಿಕೃಷ್ಣಪ್ಪ ಮೈಕ್ ಕೈಗೆ ತೆಗೆದುಕೊಂಡರು.

'ನಮ್ಮ ಆಧ್ಯಕ್ಷೆಯರು ಹೇಳಿದ ಹಾಗೆ, ನಮಗೆ ಶುಕ್ರ ದೆಶೆ ಹೊಡೆದಿದೆ ಎಂದು ಹೇಳಬಹುದು. ಇಷ್ಟು ವರ್ಷ ಒಂದೇ ಪಾಲಿಕೆಯಲ್ಲಿ ಕಷ್ಟವೋ ಸುಖವೋ ಹೇಗೋ ಮ್ಯಾನೇಜ್ ಮಾಡ್ತಿದ್ವಿ. ಎಷ್ಟೋ ದಿವಸಗಳು ನಮ್ಮ ಸೊಳ್ಳೆಗಳು ಉಪವಾಸ ಮಲಗಿವೆ. ಯಾಕೆ, ನಮ್ಮ ಹಂದಿ ಭಾಂದವರು ಊಟಕ್ಕಿಲ್ಲದೆ ಕರ್ಪೊರೇಷನ್ ತೊಟ್ಟಿಗಳಿಗೆ ಹೋಗಿ ಅಲ್ಲೂ ಊಟ ಸಿಗದೆ ಅದರ ಮೇಲೆ ಹೊಡೆದ ಫ್ಲಿಟ್ ವಾಸನೆಯಿಂದ ಮೂರ್ಛೆಯಾಗಿದ್ದನ್ನು ಕೇಳಿದ್ದೇನೆ, ಸ್ವತಃ ನೋಡಿದ್ದೇನೆ. ಆ ದುರ್ದಿನಗಳನ್ನು ಮರೆತುಬಿಡೋಣ, ನಮಗೆ ಸುಗ್ಗಿ ಬಂದಿದೆ. ಐದರಷ್ಟು ಕಸ, ಕಲ್ಮಶ, ಕೊಚ್ಚೆಗಳು ನಿರಂತರವಾಗಿ ಸಿಗುತ್ತೆ. ಮಳೆಗಾಲದಲ್ಲಿ ಗುಂಡಿಗಳಿಂದ ಇವೆಲ್ಲಾ ಇನ್ನೂ ಯಥೇಚ್ಛವಾಗಿ ಸಿಗುತ್ತೆ.'

ಟ್ರೆಷರರ್ ಕಾಗೆ ಕೋದಂಡು ಮದ್ಯೆ ಮಾತನಾಡಿ, 'ಹಾಗೇ ಕರ್ಪೊರೇಷನ್‌ಗಳ

ಮಧ್ಯೆ ಕಾಂಪಿಟಿಷನ್ ಇರುತ್ತೆ. 'ನಾ ಮುಂದು, ತಾ ಮುಂದು' ಎಂದು ನನ್ನ ಕಸ ಹೆಚ್ಚು, ನನ್ನದು ಜಾಸ್ತಿಗುಂಡಿಗಳು, ನನ್ನ ತೊಟ್ಟಿಗಳು ತುಂಬಿ ತುಳುಕಾಡುತ್ತೆ ಎಂಬುವ ಪೈಪೋಟಿ ಇದ್ದೇ ಇರುತ್ತೆ. ಅವುಗಳಿಗೆ ಬಹುಮಾನವೂ ಇರುತ್ತೆ. ನಾವು ನಮಗೆ ಬೇಕಾದವರನ್ನ, ಬೇರೆ ಬೇರೆ ಊರಿನಿಂದ ಬಂಧು ಬಳಗದವರನ್ನ ಮೇಜುವಾನಿಗೆ ಕರೆಯಬಹುದು. ಆದರೆ ನಮ್ಮ ಹುಷಾರಲ್ಲಿ ನಾವು ಇರೋದು ಒಳ್ಳೇದು. ಅಲ್ಲಲ್ಲಿ ಆರ್ಗಾನಿಕ್ ಔಷಧಿ ಹೊಡೆದು ನಮಗೆ ತಲೆ ಸುತ್ತುವ ಹಾಗೆ ಮಾಡಿರ್ತಾರೆ.. ವಿಷದ ಗುಳಿಗೆಗಳನ್ನ ನಮ್ಮ ಊಟದ ಮಧ್ಯೆ ತೊಟ್ಟಿಗಳಲ್ಲಿ ಇಟ್ಟಿರ್ತಾರೆ, ನೀವು ಪಾರ್ಟಿ ಮಾಡ್ತಿನೀ ಎನ್ನುವ ಸಂಭ್ರಮದಲ್ಲಿ ಅನ್-ಹೈಜಿಯನ್ ಬಗ್ಗೆ ಕೇರ್ ತೊಗೋಬೇಕು! ಹೈಜಿಯನ್ನಿಂದ ಹುಷಾರಾಗಿರಿ!'




ಕತ್ತೆ ಕರೀಮ್ ಖಾನ್ ಅವರು ಹಿರಿಯ ಮೆಂಬರ್. ಅವರ ಮಾತೆಂದರೆ ವೇದವಾಕ್ಯ. ಕಡ್ಡಿ ತುಂಡು ಮಾಡಿದ ಹಾಗೆ ಮಾತು. 'ಮುಂಚೆ ಒಂದೇ ಮೇಯರ್ ಇದ್ರು. ಈಗ ಐದು ಮೇಯರ್ ಇರ್ತಾರೆ. ಅದು ಜ್ಞಾಪಕದಲ್ಲಿ ಇಟ್ಕೊಳ್ಳಿ. ಅವರೆಲ್ಲರನ್ನೂ ಸರಿಯಾಗಿ ಇಟ್ಟುಕೊಳ್ಳಬೇಕು. ಕೆಲವು ವರ್ಷದ ಹಿಂದೆ ಒಂದು ಕೇರಿಯನ್ನೇ ನೆಲಸಮ ಮಾಡಲು ಹೊರಟಿದ್ದರು ಆವಗಿನ ಮೇಯರ್. ಅದಾಗಿದ್ದರೆ ನಾವು ಯಾರೂ ಈಗ ಇಲ್ಲಿ ಇರುತ್ತಿರಲಿಲ್ಲ. ಕಷ್ಟಪಟ್ಟು ಬೇರೆ ಕೇರಿಗಳನ್ನು ನಾವೆಲ್ಲಾ ಸೇರಿ ಅಧ್ವಾನ ಮಾಡಿದಕ್ಕೆ ಇದು ಹಾಗೇ ಇರ್ಲಿ ಅಂತ ಬಿಟ್ಬಿಟ್ರು..ನಾವು ಬದುಕ್ಕೊಂಡ್ವಿ! ಐದೂ ಮೇಯರ್‌ಗಳನ್ನ ಸರಿಯಾಗಿ ನೋಡ್ಕೋಳಿ. ತಾರತಮ್ಯ ಕೂಡದು. ಅದಾದರೆ ನಮ್ಮ ಕುತ್ಗೆಗೆ ಬರುತ್ತೆ. ಜೋಪಾನ. ಹಾಗೆಯೇ ಬೇರೆ ಬೇರೆ ಕಾರ್ಪೊರೆಷನ್ನಲ್ಲಿರುವ ನಮ್ಮ ಸದಸ್ಯರನ್ನೂ ಬೇಧ ಭಾವನೆಗಳಿಲ್ಲದೆ ನೊಡಿಕೊಳ್ಳಬೇಕು.'

ಅಧ್ಯಕ್ಷೆ ತಾಯಮ್ಮ ಒಂದು ಕಾಗದವನ್ನು ತೆಗೆದು ಓದಲು ಶುರು ಮಾಡಿದರು. 'ಇದು ನಮ್ಮ ಚಿರತೆ ಚೆನ್ನಿಗಪ್ಪನವರಿಂದ ಬಂದಿದೆ. 'ಒಳ್ಳೆಯ ದಿನಗಳು ನಮ್ಮೆಲ್ಲರಿಗೂ ಬಂದಿದೆ. ಆದರೆ ನಾವು ಕಾಡಿನವರು ಎಂದು ನಮ್ಮನ್ನು ಮರೆತುಬಿಡಬಾರದು. ನಾವು ಎಷ್ಟೋ ಬಾರಿ ರಾತ್ರಿ ಹಸಿವು ತಾಳಲಾರದೆ, ಊರ ಹೊರಗಿನ ಹೆಬ್ಬಾಳ್ ಅಗ್ರಿಕಲ್ಚರ್ ಕ್ಯಾಂಪಸ್, ಬನ್ನೇರ್ಘಟ್ಟ ಮ್ಯಾನೇಜ್ಮೆಂಟ್ ಕ್ಯಾಂಪಸ್ನಲ್ಲಿ ಭೋಜನಕ್ಕೆ ಇಡೀ ರಾತ್ರಿ ಅಲ್ಲಿನ ಕ್ಯಾಂಟಿನ್ ಹೊರಗಡೆ ಕಾದು ಕುಳಿತಿದ್ದೇವೆ. ಆವರ ರೂಮಿಗೇ ಊಟ ತರಿಸಿಕೊಳ್ಳುವುದರಿಂದ ಯಾರೂ ಬರದೆ ನಮ್ಮ ಊಟಕ್ಕೆ ಧಕ್ಕೆ ಬಂತು. ಹಳ್ಳಿಯಲ್ಲಿರುವ ನಮ್ಮ ದೊಡ್ಡಣ್ಣ ಆನೆಆಂಟೊನಿ ಮತ್ತು ಸಂಗಡಿಗರಿಗೆ ಮಡಕೇರಿಯಲ್ಲಿ ಒಂದು ಪ್ರಾಬ್ಲಮ್ ಬಂದಿದೆ. ಅಲ್ಲಿ ಎಲ್ಲಾ ಕಡೆ ಎಲೆಕ್ಟ್ರಿಕ್ ಬೇಲಿಗಳನ್ನು ಹಾಕಿದ್ದಾರಂತೆ. ಅದಕ್ಕೆ ನಮ್ಮ ಎಲೆಕ್ಟ್ರೀಷಿಯನ್ ಇಲಿಗಳನ್ನು ಕಳಿಸಿ ಬೇಲಿಗಳನ್ನು ಅರ್ಥಿಂಗ್ ಸಮೇತ ಕಡಿಸಿ ಹಾಕಬೇಕು.

ಇದು ನಮ್ಮ ಪ್ರಾಣಕ್ಕೇ ಅಪಾಯ ಎಂದು ಹೆದರಿದ್ದಾರೆ, ಆಂಟೊನಿ'. ಕನ್ನಡಕವನ್ನು ಕೆಳಗಿಳಿಸಿ, ಸೊಳ್ಳೆ ಅಧ್ಯಕ್ಷೆ, 'ಇವತ್ತೇ ನಮ್ಮ ಎಲೆಕ್ಟ್ರೀಷಿಯನ್ ತಂಡ ಅಲ್ಲಿಗೆ ಹೋಗಿ ವೈರ್ಗಳನ್ನು ಕಚ್ಚಿಹಾಕುವ ವ್ಯವಸ್ಥೆ ಮಾಡ್ತೀವಿ. ನಮ್ಮ ಎಲ್ಲಾ ಪ್ರಾಣಿ ಭಾಂದವರಿಗೆ ನಾನು ಹೇಳ ಬಯಸುವುದು ಇಷ್ಟೆ. ಸದಾ ಕಾಲ ಜಾಗರೂಕತೆಯಿಂದ ಇರಿ. ಈಗ ಎಐ ಯುಗ ಬಂದಿದೆ. ಮನುಷ್ಯರು ನಮ್ಮೊಳಗೇ ಜಗಳ ತಂದಿಡಬಹುದು. ಜಾಗ್ರತೆಯಾಗಿರಿ. ಫೋಟೊ, ಅಡ್ವಟೈಸ್ಮೆಂಟಿನಿಂದ ದೂರವಿರಿ. ದಸರ ಆನೆಗಳಿಗೂ ಮೈಸೂರಿಗೆ ಹೋದಾಗ ಇದೇ ಮಾತು ನಾನು ಅಭಿಮನ್ಯುವಿನ ಕಿವಿಯಲ್ಲಿ ಹೇಳಿದ್ದೆ.'

ಫಾರಿನ್– ರಿಟೈರ್ಡ್ ತಲೆ ನೆರೆತಿರೋ ನೊಣದ ಮುಂದೆ ಯಾರೋ ಮೈಕ್ ಹಿಡಿದರು, 'ನಾವೆಲ್ಲಾ ಈ ಸುದಿನಕ್ಕೇ ಕಾದಿದ್ವಿ. ಒಂದು ಕಾರ್ಪೊರೇಷನ್ನಿಂದ ಇನ್ನೊಂದಕ್ಕೆ ನೀವು ಥಂಗ್ ಎಂದು ಹಾರಿಹೋಗಬಹುದು. ಪಾಸ್ಪೋರ್ಟ ವೀಸ ತಂಟೆಯಿರಲ್ಲ. ಯಾವಾಗಲೂ ಜೇಬಿನಲ್ಲಿ ಎಕ್ಸ್ಟ್ರಾ ದುಡ್ಡು ಇಟ್ಕೊಂಡಿರಿ. ಪ್ರತಿಯೊಂದ್ಕೂ ರೇಟ್ ಡಬಲ್, ಟ್ರಿಪಲ್ ಆಗುತ್ತೆ. ರೇಟ್ ವ್ಯತ್ಯಾಸ ಇರುತ್ತೆ. ದುಡ್ಡು ಕೀಳ್ತಾರೆ. 40 ಅಥವ 50% ಎಂದು ಯೋಚಿಸಬೇಡಿ. ಇನ್ನೊಂದು ವಿಷಯ.. ಬಹಳ ಪಾರ್ಟಿ ಮಾಡಬೇಡಿ. ಹೆಚ್ಚು ಕಡಿಮೆಯಾದರೆ ಇಲ್ಲಿ ಜನೌಷದಿ ಸಿಗಲ್ಲ. ನಮ್ಮ ಸರ್ಕಾರದ ಆಸ್ಪತ್ರೆಗೆ ಹೋಗ ಬೇಕಾಗುತ್ತೆ. ಅಲ್ಲಿ ಜಾಸ್ತಿ ಹಣ ಕೀಳಬಹುದು. ಜಾಗ್ರತೆವಹಿಸಿ.'

ಹಂದಿ ಕೃಷ್ಣಪ್ಪ ಮತ್ತೆ ಮೈಕ್ ಹಿಡಿದು ಬಂದರು. 'ಪ್ರತಿ ಕಾರ್ಪೊರೇಷನ್ನಲ್ಲೂ ವಾರ್ಡ್ ಕಮಿಟಿ ಅಂತ ಮಾಡ್ತಾರೆ. ಅದರಲ್ಲಿ ಹೆಸರಾಂತ ನಾಗರೀಕರನ್ನು ಕಮಿಟಿಯ ಸದಸ್ಯರನ್ನಾಗಿ ನೇಮಕ ಮಾಡ್ತಾರಂತೆ. ನಿಮಗೆ ಗೊತ್ತಿರುವ ನಾಗರೀಕರು ಯಾರಾದರೂ ಇದ್ದರೆ ಅವರನ್ನು ಕಮಿಟಿಯಲ್ಲಿ ಸೇರಿಸಲು ಪ್ರಯತ್ನ ಮಾಡಿ. ನಮ್ಮವರು ಒಂದಿಬ್ಬರು ಅದರಲ್ಲಿ ಇದ್ದರೆ ನಮಗೆ ಸಹಾಯಕ್ಕಾಗಿ ಇರ್ತಾರೆ.

ನನ್ನ ಜೊತೆ ಒಟ್ಟಿಗೆ ಕೂಗಿ.. 'ಜೈ ಬೃಹತ್ ಬೆಂಗಳೂರು ಪ್ರಾಧಿಕಾರಕ್ಕೆ', ಜೈ ಬಿಬಿಪ್ರಾ' ಗೆ; ಜೈ ಜೈ.'

'ಜೈ ಜೈ.' ■

## ಬಿಡ್ರಿ ಸ್ಪೆಷಲ್ ಹಾಕೋಣ...!

**–ವಿ.ವಿಜಯೇಂದ್ರ ರಾವ್**

ಒಂದು ಪ್ರತಿಷ್ಠಿತ ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗಾಗಿ ಗುಂಡನು ಕೌಂಟರಿನಲ್ಲಿ ಹಣ ಕಟ್ಟುವಾಗ ಗೊತ್ತಿಲದೆ, ಹೆಚ್ಚುವರಿಯಾಗಿ ಹತ್ತು ಸಾವಿರ ಜಾಸ್ತಿ ಕಟ್ಟುಬಿಟ್ಟಿದ್ದನು. ಕೌಂಟರಿನವರು ಅದನ್ನು ಇನ್ನು ಏನೂ ಮಾಡಕ್ಕಾಗಲ್ಲ. ನೀವು ಬೇಕಿದ್ರೆ ಡಾಕ್ಟರಿಗೆ ಹೇಳಿ ಎಂದರು. ಅದನ್ನು ಬಂದು ಡಾಕ್ಟರಿಗೆ ತಿಳಿಸಿದಾಗ, ಅವರು – ಮಿ.ಗುಂಡೂರಾವ್, ನೀವೇನೂ ಯೋಚಿಸಬೇಡಿ. ಆಪರೇಷನ್ ಆದಮೇಲೆ, ನಿಮಗೆ ಸಾಧಾರಣ ಹೊಲಿಗೆ ಬದಲು, ಎಂಬ್ರಾಯಡರಿ ಹೊಲಿಗೆ ಹಾಕ್ತೀನಿ, ತಲೆ ಕೆಡಿಸ್ಕೊಬೇಡಿ ಎಂದಾಗ, ಗುಂಡನಿಗೆ ತಲೆ ತಿರುಗಿತು...!

# ಹೆಂಡತಿ ಪ್ರಾಣ ಹಿಂಡುತೀ....!

**ಎನ್.ವ್ಹಿ. ರಮೇಶ್**

ಒಂದು ವಾರದಿಂದ, ಪೆಂಡಿಂಗ್ ಸ್ಟಾಕ್ ಹಾಕಿಟ್ಟು, ಸಿಂಕ್‌ನಲ್ಲಿ ಪೇರಿಸಿದ್ದ ಪಾತ್ರೆಗಳ ರಾಶಿ, ಒಂದಾವರ್ತಿ ತೊಳೆಯುವಷ್ಟರಲ್ಲೇ, ನಲ್ಲಿ ನಿಂತುಯೋಯ್ತು. ಅರೆರೆ, ಇನ್ನೂ 2–3 ಪಾತ್ರೆ ತೊಳೀಬೇಕಿತ್ತು. ಪಾತ್ರೆ ಪುಡಿ ಇನ್ನೂ ಉಳಿದಿದೆ. ಮೊನ್ನೆ ಗ್ಯಾಸ್ ಮೇಲಿಟ್ಟು, ಸೀದು ಹೋದ ಸ್ಟೀಲ್ ಪಾತ್ರೆ ಕರ್ರಗೆ ಮಿಂಚುತ್ತಾ, ತೊಳೀ 'ಬಾ' ಅಂತ ಆಹ್ವಾನಿಸ್ತಿದೆ. ಪಾತ್ರೇಲಿ ಉಳಿದು, ನೀರಲ್ಲಿ ನೆನೆದು, ಕೊಳೆತ ಹಾಲಿನ ಕೆನೆ, ಮೊಸರಿನ ಜಿಡ್ಡು, ಮರೆಯಲಾಗದ ವಾಸನೆ ಮನೆ ತುಂಬ. ಇಂಥ ಕೆಲಸಗಳು, ತುದಿ ಕೈಯಲ್ಲಿ ಚಿಟಿಕೆ ಹೊಡಿಯೋ ಅಷ್ಟರಲ್ಲೇ, ಮುಗಿಯುವಂಥವು. ಅಂಥಾದ್ರಲ್ಲಿ ಹೀಗೆ ನಮ್ಮನ್ನ ಕಾಯಿಸ್ತಾ, ಪೇರಿಸಿ ಕೂರಿಸಿದ್ದೀಯಲ್ಲ ಅಂತ, ಪಾತ್ರೆ, ನಳ, ಎಲ್ಲ ಮೂತೀ ತಿವೀತಿವೆ. ಅವಳೊಬ್ಬಳೆ ಕಮ್ಮಿ, ಸ್ವಾಟೇ ತಿವಿಯೋಕೆ!.

ಓದುಗ ಮಿತ್ರರೇ, 'ನಾ ಗಂಡನಾಗಿರೊ ಗಂಡು'. ನಿಮ್ಮಲ್ಲೇನು ನನ್ನ ಸಂಕೋಚ! ಪೂರಾ ಹೇಳೇ ಬಿಡ್ತೀನಿ. "ನಾ ನಿಮ್ಮನ್ನ ಬಿಟ್ಟು ತವರು ಮನೆಗೆ ಹೋಗಿಬಿಟ್ರೆ, ನಿಮ್ಮ ಗತಿ ಅಷ್ಟೇ!" ಅಂತ ಹತ್ತಾರು ಬಾರಿ, ನಗ್ರಾ, ಕೊಂಕಿನಿಂದ ಬಿಂಕದಿಂದ, ತಿವಿದಾಗ, ತಡೀಲಾರದ ಗಂಡಸ್ತನ, ಅಪ್ಪಣೆ ಕೊಡಿಸೇಬಿಡ್ತು, "ಹೋಗೇ! ಏನು ಮಹಾ? ನೀನಿಲ್ಲದಿದ್ರೆ ಆಗೋಲ್ವೇ! ಗ್ಯಾಸಿದೆ, ಕುಕ್ಕರಿದೆ, ಮಿಕ್ಸಿ ಇದೆ, ಆರಾಮವಾಗಿರ್ತೀನಿ ನಾಲ್ಕು ದಿನ, ನಿನ್ನ ಕಾಟ ಇರೋಲ್ಲ. ಎಲ್ಲಕ್ಕೂ ಯಾಕೆ ಹೀಗೆ? ಇಷ್ಟು ಹೊತ್ತ್ಯಾಕೆ? ಯಾವ ಗೆಳೆಯನ ಜೊತೆ ಅಲೆಯೋಕೆ ಹೋಗಿದ್ರಿ? ಏನು ತಂದ್ರಿ? ಇತ್ಯಾದಿ ಪ್ರಶ್ನೆಗಳ ಸುರಿಮಳೆಗೆ ದಿನಾ ಉತ್ತರಿಸೋ ಗೋಜೇ ಇಲ್ಲ......" ಇತ್ಯಾದಿ. "ಈ ಗಂಡಸರೇ ಇಷ್ಟು. ಬೇಕಾದ ಘಳಿಗೇಲಿ ಚಿನ್ನಾ, ರನ್ನಾ ನೀನಿಲ್ಲದೇ ಜೀವನವೇ ಇಲ್ಲಾ......ಅಂತೆಲ್ಲ ಹೇಳ್ತಾ ಈಗ ಹೀಗಂತೀರಾ ಹೂಂ......". ಎರಡೂ ಕಣ್ಣಳೆಲ್ಲ ಗಂಗಾ ಯಮುನಾ ಪ್ರತ್ಯಕ್ಷರಾದರು. "ನಾನು ನಮ್ಮಮ್ಮನ ಮನೆಗೆ ಹೋಗೇ ಬಿಡ್ತೀನಿ......" ಅಂದ್ಳು ಇವಳು.

ಪೂರಾ ರೇಗೇ ಬಿಡ್ತು. "ಹೋಗು, ಹೋಗು ರಾಯಚೂರಿನಿಂದ ಮೈಸೂರಿಗೆ, ಅಲ್ಲಿಂದ ನಂಜನಗೂಡಿಗೆ ನೇರ ಬಸ್ ಇದೆ–ತಗೋ ಬಸ್ ಚಾರ್ಜಿಗೆ" ಅಂತ ನೋಟುಗಳನ್ನ ಎಸೆದೆ. ಇವಳದೇನು, ಮಾಮೂಲು ರಾಗ! ಅಂತ ತಿರುಗಿ ನೋಡದೇ ಓಡಿದೆ.

ಹಲವಾರು ಬಾರಿ ರಿಪೀಟ್ ಆಗಿರೋ ದೃಶ್ಯಗಳು. ಏನು ಮಹಾ! ಸಂಡೇ ಬರೋವಷ್ಟರಲ್ಲಿ ತಾನೇ ಸರಿ ಹೋಗಿರುತ್ತೆ. ಪ್ರೇಮದ Exchangeನಲ್ಲಿ ಎಲ್ಲ Adjustಆಗುತ್ತೆ, ಅನ್ನೋ ನಂಬಿಕೇಲಿ ಹೊರಟೆ. ಕಛೇರಿ ಕೆಲಸದ ಒತ್ತಡದಲ್ಲಿ, ಮನೆ ಕಡೆ ನೆನಪೇ ಇಲ್ಲ. ಸಂಜೆ ಬಂದರೆ ಸ್ವಾಗತಿಸ್ತು ದೊಡ್ಡ ಬೀಗ. ಎದುರು ಮನೆ ಪಾಪು, ಬೀಗದ ಕೈ ಜೊತೆ ಕೊಟ್ಟ ಎರಡು ಸಾಲಿನ ಚೀಟಿಯಿಂದ, ಇವಳು ತವರು ಮನೆಗೆ ಹೋದ್ಲು ಅಂತ ಗೊತ್ತಾಯ್ತು.

ಚುರ್ರೆಂದ ಹೊಟ್ಟೆಗಾಗಿ ಮನೇಲಿದ್ದುದು ಹುಡುಕಿದ್ರೆ, ಭಾರಿ ಬಿಸಿಲಿಂದ ವಾಸನೆ ಬರ್ತಿದ್ದ ಅನ್ನ, ಸರಿಯಾಗಿ ಕುದ್ದಿರದ ಸಾರು, ಹೆಪ್ಪಾಗಿರದ ಹಾಲು! ಬಿಡು ಒಂದಿನ ಏನು ಮಹಾ? ಅಂತ ಹಾಗೇ ಮಲಗಿದೆ.

ಬೆಳಿಗ್ಗೆ 5.30ಗೆ ಎಚ್ಚರ. ಕಾಫಿ ಬೇಕಂತ ಹುಡುಕಿದ್ರೆ, ಹಿಂದಿನ ದಿನ ಕಾಸಿಲ್ಲವಾದ್ದರಿಂದ ಒಡೆದ ಹಾಲು. ಆ ಪಾತ್ರೇನೂ ಸಿಂಕಲ್ಲಿ ಕುಕ್ಕಿದೆ. ಹಾಲಿನವ 8.30 ತನಕ ಬರ್ಲಿಲ್ಲ. ಅಲ್ಲೀ

ತನಕ ಪೆಟ್ರೋಲಿಲ್ವೇ! ಗಾಡಿ ಓಡಲಿಲ್ಲ, ದೂರದ ಹೋಟೆಲ್‌ಗೆ ಹೋಗಿ, ತಿಂಡಿ ಕಾಫಿ ಒಟ್ಟಿಗೇ ಮುಗಿಸಿದೆ. ಮನೇಲಿದ್ರೆ 2 ಡೋಸ್ ಕಾಫಿ, ಆಮೇಲೆ ತಿಂಡಿ, ಮತ್ತೆ ಕಾಫಿ.

ಅಡಿಗೆ ಮಾಡೋಣಾಂದ್ರೆ ಪಾತ್ರೆ ತೊಳೀಬೇಕು, ನೀರು ನಿಂತು ಹೋಗಿದೆ. ಹಾಗೇ ಪಾತ್ರೆ ಪೇರಿಸಿದೆ. 4–6ದಿನ ಹೋಟೆಲ್‌ಗೆ ಓಡಾಡಿ, ನನಗೆ ಬೇಕಾದ್ದು, ಸಿಕ್ಕದೇ, ಅವ ಕೊಟ್ಟಿದ್ದನ್ನೇ ತಿಂದು, ನಾಲಿಗೆ ಸ್ಟ್ರೈಕ್ ಮಾಡ್ತು "ಏ ಇವಳೇ ನೀ ಅದನ್ನೇ ಮಾಡು, ಈಗ ಇದೇ ಬೇಕು" ಅಂತ ನಾ ಪ್ರತಿದಿನ, ಪ್ರತಿ ಹೊತ್ತು ಬೇರೆ ಬೇರೆ ಐಟಮ್ಸ್ ಬೇಕು, ಅಂತ ಅವಳನ್ನ ಗೋಳು ಹುಯ್ದುಕೊಳ್ಳುತ್ತಿದ್ದುದ್ದು, ನೆನಪಾಯ್ತು.

ಕಾಫಿ ಡಿಕಾಕ್ಷನ್ನಿಗೇಂತ, ಕಾಸಿದ ಬಿಸಿ ನೀರು, ಫಿಲ್ಟರಿಗೆ ಹಾಕೋವಾಗ, ಇಕ್ಕಳದ ಹಿಡಿತ ಲೂಸ್ ಆಗಿ, ನೀರು ಕಾಲ ಮೇಲೆ ಚೆಲ್ತು...... "ಅಯ್ಯೋ......" ಅಂದೆ. ಡಿಕಾಕ್ಷನ್ ಇಳಿಯೋದಕ್ಕೆ ನಿಧಾನ ಆದಾಗ, ಜೋರಾಗಿ ಎಳೆದ ರಬಸಕ್ಕೆ, ಮೇಲಿನ ಬಿಸಿ ಡಿಕಾಕ್ಷನ್, ತೊಡೆ ಮೇಲೆ. ಕೆಳಗಿಳಿದಿದ್ದ ಡಿಕಾಕ್ಷನ್ ನೆಲದ ಪಾಲು. ಹಾಲು ಬರೋಲ್ಲ ಅಂತ ತಂದ ಹಾಲಿನ ಪುಡಿ ಗಂಟು ಗಂಟಾಗಿ, ಹಾಲು ಸರಿಯಾಗಿಲ್ಲ. ಸಿಂಕಲ್ಲಿ ಕುಕ್ಕಿದೆ ಸಿಟ್ಟಿನಿಂದ.

ಕುಕ್ಕರಲ್ಲಿ ಏನೇನೋ ಪೇರಿಸಿ, ಗ್ಯಾಸ್ ಮೇಲೆ ಇಟ್ಟೆ. ಅರ್ಧ ಗಂಟೆ ಮೇಲೆ ನೋಡಿದ್ರೇ, ಒಲೇನೇ ಹಚ್ಚಲ್ಲ, ಬೈಕೊಂಡು ಗ್ಯಾಸ್ ಹಚ್ಚಿದೆ. ನೀರಲ್ಲಿ ನೆನೆದಿದ್ದ ಕಡ್ಡಿಪೆಟ್ಟಿಗೆ ಕಡ್ಡಿ ಉರೀಲಿಲ್ಲ. ಎದುರು ಮನೆಯಿಂದ, ಕಡ್ಡಿ ಸಾಲ ತಂದು, ಹಚ್ಚಿದೆ ಮರೆವಿನಲ್ಲಿ. ¾ ಗಂಟೆ ಆದ್ರೂ ಶೀಟಿ ಹೊಡೀಲಿಲ್ಲ ಅಂದ್ಕೊಳ್ಳೋ ಅಷ್ಟರಲ್ಲಿ, ಸುಟ್ಟ ವಾಸನೆ. ತೆಗೆದು ನೋಡಿದ್ರೆ, ಕುಕ್ಕರಲ್ಲಿ, ಕೆಳಗೆ ನೀರೇ ಹಾಕಿಲ್ಲ. ತಳ ಸೀದಿದೆ, ಸಿಟ್ಟಿನಿಂದ ಕೈ ಎತ್ತಿದರೆ, ಅಲ್ಲೆಲ್ಲೋ ಮೇಲೆ, ಮೊಳೆಗೆ ನೇತು ಹಾಕಿದ್ದ ಮೊರ, ಟೀ ಸೋಸುವ ಪಾತ್ರೆ, ಉರುಳಿದವು. ಈ ಕಡೆ ಕೈ ಎತ್ತಿದರೆ, ಮೇಲಿಂದ ಕೆಳಗೆ, ಮಣೆ, ಹಿಟ್ಟಿನ ಜರಡೆ, ತಲೆ ಮೇಲೆ ಎರಗಿದವು. ತಲೆ ಕೆಟ್ಟು, ಅಡಿಗೆ ಮನೆ ಬಾಗಿಲು ಒಂದು ವಾರ ತೆಗೀಲೇ ಇಲ್ಲ.

ಮತ್ತೆ ಬೇಕರಿ ತಿಂಡಿ ತಂದು ಹೊಟ್ಟೆ ಊದಿಕೊಂಡಿತು. 3–4 ದಿನ, ಮಲ ವಿಸರ್ಜನೆ ಆಗದೇ, ಅಕ್ಕ ಪಕ್ಕದ ಮನೇವ್ರು ಕೊಟ್ಟ, ಜುಲಾಬಿನ ಗುಳಿಗೆ ನುಂಗಿದ್ದೇ ನುಂಗಿದ್ದು. ಆಸ್ಪತ್ರೆ, ವೈದ್ಯರು, ಔಷಧಿ ಅಂಗಡಿ 4.5ಕಿ.ಮೀ. ದೂರ ಏನು ಮಾಡೋದು. ನಂತರ ಶುರು ಆಯ್ತು, ನೋಡಿ, ನಾನ್‌ಸ್ಟಾಪ್ ಭೇದಿ. ಸುಸ್ತೋ ಸುಸ್ತು. ತುರ್ತು ಕೆಲಸವಿದ್ದುದರಿಂದ ಕಛೇರಿಗೆ ರಜಾ ಹಾಕಲಾಗದೇ, ಹೋಗಿ, ಒತ್ತಡದ ಕೆಲಸ, ವೇಗದಲ್ಲಿ ಮಾಡಬೇಕಾಯ್ತು, ಆಗ "ಎಲ್ಲಿದೀಯೇ ಯಾವಾಗ ಬರ್ತಿಯೇ?" ಅಂತ ಮನಸಲ್ಲೇ, ಹಲುಬುತ್ತಾ ಬೇಡುವ ಸ್ಥಿತಿ. ಅದರೂ ಪತ್ರ ಬರೀದೇ, ಫೋನ್ ಮಾಡದೇ 4–5 ದಿನ ತಳ್ಳಿದೆ.

3 ಅಂತಸ್ತಿನ ಕ್ವಾರ್ಟಸ್‌ನ ಮೇಲ್ಭಾಗದ ಮನೆ. ಪೈಪು ಹಿಡಿದು ಹತ್ತಿ, ಮನೆ ತುಂಬಾ ಓಡಾಡುವ, ಇಲಿ ಸಂಸಾರ. ರೂಮಿಂದ ಅಡಿಗೆ ಮನೆಗೆ, ಕತ್ತಲಲ್ಲಿ ರನ್ನಿಂಗ್ ರೇಸ್. ಬೆಳಕು ಹಾಕಿದೊಡನೆ, ಕಿಟಕಿ ಬಾಗಿಲುಗಳ ಸಂದಿಗಳಲ್ಲಿ, ತೂರಿ ಓಡಿದವು.

ಚುಮುಚುಮು ನಸುಕಿನಲ್ಲಿ, ನಿದ್ರೆ ಕಣ್ಣಿನಲ್ಲಿ ಬಂದು, ಅಡಿಗೆ ಮನೆ ಹೊಕ್ಕು, ಗ್ಯಾಸ್ ಹತ್ತಿಸಲು ಕಡ್ಡಿ ಗೀರುತ್ತಿದ್ದೇನೆ. ಅಷ್ಟರಲ್ಲೇ ಭುಸ್ಸೆಂದು, ಸದ್ದು ಸತತ ಬರುತ್ತಿದೆ. ಇದೇನಪ್ಪಾ, ಹಾವೇ, ಎಂದು ಚೀರುವವನಿದ್ದೆ. ಅಷ್ಟರಲ್ಲೇ ಆರನೇ ಪ್ರಜ್ಞೆಯಿಂದ, ಗ್ಯಾಸ್ ಸೋರುವಿಕೆ ಇರಬಹುದೆಂದು, ತಕ್ಷಣ ರೆಗ್ಯುಲೇಟರ್ ಆರಿಸಿದೆ. ಲೈಟು ಹಾಕಿ ಗಮನಿಸಿದರೆ ಸಿಲಿಂಡರಿನಿಂದ ಗ್ಯಾಸ್ ಒಲೆಗೆ ಹೋಗುವ, ಪ್ಲಾಸ್ಟಿಕ್ ಪೈಪಿನ ಮಧ್ಯೆ, ಅರ್ಧ ಅಡಿ

ನೂಲಿನ ಗೆರೆಯಷ್ಟು ಬಿಟ್ಟು, ಉಳಿದದ್ದನ್ನು ಇಲಿ ಭಕ್ಷಿಸಿಬಿಟ್ಟಿದೆ. ಅಕಸ್ಮಾತ್ ಕಡ್ಡಿ ಗೀರಿ, ಗ್ಯಾಸ್ ಸೋರುವಿಕೆಯಿಂದ ಸ್ಫೋಟ ಆಗಿದ್ದಲ್ಲಿ, ಏನು ಗತಿ! ಅಪರೂಪದ ಚಳಿಯಲ್ಲೂ ಬೆವರಿತು ರಾಯಚೂರಿನಲ್ಲಿ.

ಗ್ಯಾಸ್ ಒಲೆ ಬಿಟ್ಟು, ಹಳೇ ಸ್ಟವ್ ತೆಗೆದು ಬತ್ತಿ ನೋಡಿದೆ, ಅರ್ಧಂಬರ್ಧ ಇದ್ದವು ಹೊರಗೆ, ಅದನ್ನ ಕಟಿಂಗ್ ಪ್ಲೇಯರ್‌ನಲ್ಲಿ ಎಳೆದು, ಎಣ್ಣೆ ಹಚ್ಚಿ, ಕೈಯಿಂದ ತಿರುವಿ, ಕೈಎಲ್ಲಾ ಬೊಬ್ಬೆ. ಸೀಮೆಣ್ಣೆ ಇಲ್ಲ. ಬಾಟಲಿ ಹಿಡಿದು ಸೀಮೆಣ್ಣೆಗೆ ಹುಡುಕಾಟ. ಸಿಗದೇ ಯಾರದೋ ಮನೆಯಿಂದ ಸೀಮೇಣ್ಣೆ ಕಡ ತಂದೆ. ಕಡ್ಡಿ ಗೀರಲು, ಬೆಂಕಿಪಟ್ಟಣ ಹುಡುಕಿದರೆ, ಬಚ್ಚಲೊಲೆ ಹಚ್ಚಲು ಹೋಗಿ, ನೀರು ಬಿದ್ದು, ನೆನದು ಹೋಗಿದೆ. ಆ ದಿನದ ಅಡಿಗೆ ಮನೆ ಅನ್ವೇಷಣೆ, ಅಲ್ಲಿಗೇ ಸ್ಟಾಪ್!.

ಬಳಸದೇ ಮುಚ್ಚಿಟ್ಟ ಹಿಟ್ಟಿನ ಡಬ್ಬದಲ್ಲಿ, ಹುಳುಗಳು ಇಣುಕುತ್ತಿವೆ. ಅಕ್ಕಿಯಲ್ಲಿ ಈಗಾಗಲೇ ಇರುವ ಕಲ್ಲು ಮಣ್ಣಿನ ಹೆಂಟೆ, ಭತ್ತದ ಜೊತೆ, ಸ್ಪರ್ಧಿಸುತ್ತಿರುವ ಚಿಕ್ಕ ನುಸಿ. ಗೆದ್ದಿಲು ಹತ್ತಿರೋ ಟನ್ ಡಬ್ಬಗಳಲ್ಲಿಟ್ಟ ಕಾಳುಗಳಿಗೆ ಮುಗ್ಗಲು ವಾಸನೆ. ಎಲ್ಲ ಚೆಲ್ಲೋಣ ಎಂದು ಅಸಹ್ಯ. ಆದರೆ 3 ಮಹಡಿ ಮೆಟ್ಟಿಲುಗಳನ್ನುಳಿದು, 1 ಫರ್ಲಾಂಗ್ ನಡೆದು, ಮುಳ್ಳು ದಾರೀಲಿ, ಮುಳ್ಳು ಚುಚ್ಚಿಸಿಕೊಳ್ಳುತ್ತಾ, ಹೋಗಿ ತಿಪ್ಪೇಲಿ ಚೆಲ್ಲಬೇಕು.

ನೀರಾದರೂ ಕುಡಿಯೋಣ ಎಂದುಕೊಂಡರೆ, ಕುಡಿಯೋ ನೀರು, ಕೆಳಗಿನ ನಲ್ಲಿಯಿಂದ ತುಂಬಿ ತರಬೇಕು. ಕ್ಯೂ ದಲ್ಲಿ ಬೇಡ, ಅಂದುಕೊಂಡೆ. ತುಂಬಿಟ್ಟ ನೀರಲ್ಲಿ ಜಿರಲೆ ತೇಲುತ್ತಿದೆ.

ಇಟ್ಟ ಇಲಿ ಬೋನಿನಲ್ಲಿ, ಸತ್ತ ಇಲಿ ವಾಸನೆ, ಮನೆಯೆಲ್ಲಾ ತುಂಬಿದೆ. ಅದು ತೆಗೆಯುವಾಗ, ಸ್ಪ್ರಿಂಗ್ ಹಿಡಿತ, ಕೈ ಮೇಲೆ ವಾಪಸ್ ಬಿದ್ದು, ಕೈ ಜಜ್ಜಿತು. ಎಸೆಯಲು ನುಗ್ಗಿದರೆ, ಗಾಳಿಗೆ ಧಾವಿಸಿದ, ಬಚ್ಚಲ ಮನೆ ಬಾಗಿಲು ತಲೆಗೆ ಡಿಕ್ಕಿ ಹೊಡೆದು, ಬೋರೆ ಬಂತು.

ಯಾವುದೋ ದಾರ ಹುಡುಕುತ್ತಾ, ಅಟ್ಟ ಹತ್ತಲು ಹೋದರೆ, ಅಲ್ಲಿಟ್ಟ ಬೋಗುಣಿ ಉರುಳಿ, ರಂಗೋಲಿ ಹಿಟ್ಟು, ತಲೆ ಮುಖಕ್ಕೆ ಉಚಿತ ಮೇಕಪ್ ನೀಡಿತು. ಶರ್ಟಿಗೆ ಗುಂಡಿ ಹಾಕಲು ಹೋಗಿ, ಸೂಜಿ, ಬೆರಳ ತುದಿಗೆ ಜೋರಾಗಿ ಚುಚ್ಚಿ, ನೋವು. 'ಆ' ಎಂಬ ಉದ್ಗಾರದೊಂದಿಗೆ ರಕ್ತ ಚಿಮ್ಮಿತು. ಬಾಳೆಹಣ್ಣು ತಿನ್ನಲು ಹೋದೆ, ಅವಸರದಲ್ಲಿ, ಸಿಪ್ಪೆ ಬಿಡಿಸುತ್ತಾ ಏನೋ ಧ್ಯಾನದಲ್ಲಿ, ಬಾಳೆಹಣ್ಣು ಕಸದ ಬುಟ್ಟಿಗೆ ಎಸೆದು, ಸಿಪ್ಪೆ ಬಾಯಿಗೆ ಹಾಕಿಕೊಂಡೆ, ಲಿಂಬೆಹಣ್ಣು ಹೆಚ್ಚಲು ಹೋಗಿ, ಬೆರಳು ಸೀಳಿಕೊಂಡೆ, ಏಲಕ್ಕಿ ಕುಟ್ಟಲು ಹೋಗಿ ಕಾಲ ಬೆರಳ ಮೇಲೆ ಕಲ್ಲು ಹಾಕಿ ಜಜ್ಜಿಕೊಂಡೆ.

ಯಾವುದೋ ಧ್ಯಾನದಲ್ಲಿ ಸ್ನಾನ ಮಾಡೋವಾಗ, ಬಿಸಿ ಬಿಸಿ ಕುದಿವ ನೀರು ಸುರಿದು, ಮೈ ಕೆಂಪಾಗಿ, ಸ್ವಲ್ಪ ಸುಟ್ಟಿತು. ಯಾರದೋ ನೆನಪು ಅಂದರೆ, ಯಾರದು ಅಂದ್ಕೊಂಡ್ರೀ? ಹೂಂ ಇನ್ನಾರದೂ ಅಲ್ಲ, ಮಹರಾಯರೇ ಆ ನನ್ನವಳದೇ.

ಕುದಿಸಿದ ಮೈಸೂರು ಪಾಕ್ ಪಾಕ ಕಲ್ಲಾಗಿ, ತೂರಿಸಿದ ಬಾಯೊಳಗಿನ ಹಲ್ಲು, ಠಳ್ಳೆಂದು ಬಿದ್ದಿತು. ಬೇಯದ ಅನ್ನ. ಒಮ್ಮೆ ಹಾಕಿದರೆ ಗಂಜಿ ನೀರು. ಮತ್ತೊಮ್ಮೆ ಬೇಯದ ಬೇಳೆ. ಒಮ್ಮೆ ಕುಕ್ಕರ್‌ನಲ್ಲಿ ಕಡಿಮೆ ಇಟ್ಟಿದ್ದ ನೀರು ಮಾಯವಾಗಿ, ಸೀಕಲು ಬೇಳೆ. ಮತ್ತೊಮ್ಮೆ ಹುಳಿ ಹೆಚ್ಚಾಗಿ, ಹಲ್ಲು ಜುಮ್ಮೆಂದಿತು. ಒಮ್ಮೆ ಖಾರ "ಅಮ್ಮ" ಎಂದು ಒದರಿಸಿತು. ಮತ್ತೊಮ್ಮೆ ಫ್ಯಾಷನ್ ಎಂದು, ಹೇರ್ ಕಟ್ಟಿಂಗ್ ಅಂಗಡಿಯ, ಹೊಸ

ಹುಡುಗನ ಕತ್ತರಿ ನನ್ನ ತಲೆಕೂದಲನ್ನು ಪ್ರಯೋಗ ಪಶು ಮಾಡಿ, ನನ್ನ ಮುಖ ಪೂರಾ ಬದಲಾಯಿಸಿತಷ್ಟೇ ಅಲ್ಲ, ಕೆನ್ನೆ ಮೇಲೆ, ಹಿಂದಲೆ ಕೆಳಗೆ, ಗಾಯದ ಗೀರುಗಳು. ಸ್ನಾನದ ನೀರು ಹಾಕಿದಾಗ, ಭಗ್ಗೆಂದವು ಮನದ ನೆನಪುಗಳಂತೆ.

ಮನಸ್ಸಿನಲ್ಲಿ "ಶಾಂತಿ ಬೇಕು, ಶಾಂತಿ" ಎಂದುಕೊಂಡೆ, "ಯಾರ್ರೀ ಅವಳು ಶಾಂತಿ ನನ್ನ ಸವತೀನಾ........" ಅಂತ ಮದ್ವೆ ಆದ ಹೊಸದರಲ್ಲಿ, ಮುಖ ಊದಿಸಿಕೊಂಡು, ಮೂರು ದಿನ ಮಾತು, ಅನ್ನ ಬಿಟ್ಟಿದ್ದ ಮನೇವ್ಳ ಮುಖದ ನೆನಪು ತಂತು. ಫ್ಲಾಶ್ ಬ್ಯಾಕ್. "ಎಲ ಎಲವೋ ಮನವೇ, ನಿನ್ನ ಕಲ್ಪನೆ ಬರೀ ರಿವೈಂಡ್ ಆಗಿ ಫ್ಲಾಶ್ ಬ್ಯಾಕ್‌ಗೆ ಸೀಮಿತವಾಗಿರದೇ, ಅವಳು ವಾಪಸ್ಸು ಬಂದ ನಂತರದ, ಫ್ಲಾಶ್ ಫಾರ್‌ವರ್ಡ್ ಆಗ್ಲಿ", ಅಂತ ಹಪಹಪಿಸಿ ಜಪಿಸಿದೆ.

ಅಂತೂ ಬಲ್ಲವರು, ಅನುಭವಿಗಳು ಹಾಡಿರೋ ಹಾಗೇ, 'ಹೆಂಡತಿ ನೀ ಪ್ರಾಣ ಹಿಂಡುತೀ'. ಇಲ್ಲೇ ಇದ್ದರೂ, ಇಲ್ಲಿ ಕಾಡುವ ಹೆಂಡ್ತಿ, ಇಲ್ಲಿಲ್ಲದಿದ್ರೂ, ನನ್ನ ಮನದ, ನನ್ನ ಮನೆಯ ಅನಿವಾರ್ಯತೆ, ಅಸಹಾಯಕತೆಗಳನ್ನು ಕಂಡು, ವಾರೆಗಣ್ಣಲ್ಲೇ ನಕ್ಕು, ಛೇಡಿಸುವ ಕಲ್ಪನೆ, ನೆನಪುಗಳಲ್ಲೇ, ನನ್ನ ಪ್ರಾಣ ಹಿಂಡ್ತಿದೀಯಾ. ಪ್ರಿಯ ಗಂಡುಗಣವೇ ನಿಮ್ಮಲ್ಲಿ ಯಾರದಾದರೂ ಬೇರೆ ಅನುಭವವಿದ್ದರೆ, ನನ್ನೊಂದಿಗೆ ಹಂಚಿಕೊಳ್ತೀರಾ?!.

■

## ಬೇಕಾದ್ರೆ... ಏನ್ನಾರ್

**–ಮಂಗಳಾ ಎಂ. ನಾಡಿಗ್**

ಅಂದು ಅವಳು ತನ್ನ ಸ್ನೇಹಿತೆಯ ಜೊತೆ ಗಾರ್ಡನ್ ಸೇಲ್ನಲ್ಲಿ ಬಟ್ಟೆ ತೆಗೆದುಕೊಳ್ಳಲು ಹೋಗಿದ್ದಳು. ಗಾರ್ಡನ್ ಸೇಲ್ ನ ಬಟ್ಟೆಗಳು ತುಂಬಾ ಚೆನ್ನಾಗಿರುತ್ತವೆ. ಮೀಟರ್ ಲೆಕ್ಕದಲ್ಲಿ ಚೂಡಿದಾರ್ ಟಾಪ್ ಹೊಲಿಸಿಕೊಳ್ಳಲು ನಾಲ್ಕೈದು ತರದ ಬಟ್ಟೆ ತೆಗೆದುಕೊಂಡವಳು ಮ್ಯಾಚಿಂಗ್ ಲೆಗ್ಗಿಂಗ್ ಹಾಕಿಕೊಂಡರಾಯಿತೆಂದುಕೊಂಡು ಪ್ಯಾಂಟ್ ಬಟ್ಟೆ ತೆಗೆದುಕೊಳ್ಳಲಿಲ್ಲ.

ಟೈಲರ್ ಬಳಿ ಹೊಲಿಯಲು ಕೊಡಲು ಹೋದಾಗ ಅವರ ಬದಲು ಅವರ ಮಗ ಇದ್ದರು. ಬಟ್ಟೆಗಳನ್ನೆಲ್ಲಾ ನೋಡಿದ ಮೇಲೆ ಪ್ಯಾಂಟ್ ಬಟ್ಟೆ ಇಲ್ವಲ್ಲ ಮೇಡಂ ಅಂದರು. ಹೊಲಿದಾದ ಮೇಲೆ ಟಾಪ್ ತೆಗೆದುಕೊಂಡು ಹೋಗಿ ಮ್ಯಾಚಿಂಗ್ ಲೆಗ್ಗಿಂಗ್ ತೆಗೆದುಕೊಳ್ಳುತ್ತೇನೆ ಎಂದವಳ ಮಾತಿಗೆ, ಅವರು ಮಾತನಾಡುತ್ತಾ ಒಂದೊಂದೇ ಬಟ್ಟೆ ತೋರಿಸಿ ನೀವು ಇದುಕ್ ಬೇಕಾದ್ರೆ ಬ್ಲಾಕ್ ಲೆಗ್ಗಿಂಗ್ ಹಾಕ್ಕೋಬೋದು, ಬೇಕಾದ್ರೆ ರೆಡ್ಡು ಹಾಕ್ಕೊಂಬೋದು, ಇನ್ನೊಂದು ಬಟ್ಟೆ ತೋರಿಸಿ ಇದ್ಕು ಬೇಕಾದ್ರೆ ಬ್ಲಾಕ್ ಹಾಕ್ಕೊಂಬೋದು ಎಂದರು. ಅವರು ಹೇಳುವಾಗಲೇ ಅವಳಿಗೆ ಒಳಗೊಳಗೇ ನಗು. ಮೊದಲೇ ತರಲೆ (ತಲಹರಟೆ) ಬುದ್ಧಿಯವಳಾದ ಅವಳು ಬೇಕಾದ್ರೆ ಏನ್ನಾರ್? ಹಾಕ್ಕೊಳ್ಳೇಬೇಕು ಎಂದಳು.

**ಅಪರಂಜಿ ಏಪ್ರಿಲ್ 1993 ಸಂಚಿಕೆಯಿಂದ**

# ನಮ್ಮ ಮೂಣುಮಲ್ಶೈ ಮುತ್ತಣ್ಣ

**ಡಾ. ಎಚ್.ಕೆ. ರಂಗನಾಥ್**

ನೀವು ನಮ್ಮ ಬಡಾವಣೆಯಲ್ಲಿ ಇದ್ದಿದ್ದರೆ, ಮೂಣುಮಲ್ಶೈ ಮುತ್ತಣ್ಣನನ್ನು ಅನುಸರಿಸದೇ ಇರಲು ಸಾಧ್ಯವೇ ಇಲ್ಲ. ನಮ್ಮ ಬಡಾವಣೆಯ ವಾಟರ್ ಮ್ಯಾನೇಜ್‌ಮೆಂಟು ಅವನದೇ ವೀಸಲು. ಸಂಪು, ಪಂಪು, ನಲ್ಲಿ, ಗಲ್ಲಿ, ಪೈಪು, ಟ್ಯಾಂಕು ಹೀಗೆ ನೀರಿಗೆ ಸಂಬಂಧಪಟ್ಟ ಏನೆಲ್ಲ ವಿಷಯಗಳಲ್ಲಿ ಅವನದು ಸಿದ್ಧಹಸ್ತ. ರಿಪೇರಿ ಅಂದರೆ ಹೆಸರುವಾಸಿ. ತನ್ನ ಗುಜರಿ ಅಂಗಡಿಯ ಹಿಂಭಾಗದಲ್ಲಿಯೇ ಮೂಣುಮಲ್ಶೈ ಮುತ್ತಮ್ಮನೊಂದಿಗೆ ಆತನ ಸಂಸಾರ. ಸಾಲಾಗಿ ಏಳು ಮಕ್ಕಳು. ಬೆಂಗಳೂರಿನಲ್ಲಿಯೇ ಇಪ್ಪತ್ತು ವರುಷಗಳಿಂದ ಬೀಡುಬಿಟ್ಟಿರುವುದರಿಂದ ಕನ್ನಡ ಬರುವುದಿಲ್ಲ. ಬಂದರೂ ನಮಗೆ ಅರ್ಥವಾಗುವುದು ಕಷ್ಟ.

ಮೊನ್ನೆ ಭಾನುದಾರ, ತಿಂಗಳ ಅಭ್ಯಂಜನದ ಕಾರಣ, ವಿಪರೀತ ಚೌಕಾಶಿ ಮಾಡಿ ಪೈಸೆಗೆ ಒಂದು ತೊಟ್ಟಿನಂತೆ ಬೆಲೆಕಟ್ಟಿ, ಹನ್ನೆರಡು ರೂಪಾಯಿಗೆ ನೂರಾ ಇಪ್ಪತ್ತು ತೊಟ್ಟು + ಎರಡು ತೊಟ್ಟು ಕೂಸರು ಹೀಗೆ ಒಟ್ಟು ನೂರಾ ಇಪ್ಪತ್ತೆರಡು ತೊಟ್ಟು ಕೊಬರಿ ಎಣ್ಣೆಯನ್ನು ಚಿಂಗಲುಪೇಟೆ ಚಿನ್ನಪ್ಪಸಾಮಿಯ ಅಂಗಡಿಯಿಂದ ಕೊಂಡುತಂದೆ. ಮನೆಯಲ್ಲಿ ನಾನೇ ನಾನು. ಉಳಿದವರೆಲ್ಲ ಊರಿಗೆ ಅದರಿಂದ ಹಿಂದಿರುಗಿ ಬರುತ್ತ, ಬತ್ತಾಸಿನಂಥ ಎರಡು ಇಡಲಿ ದೊಡ್ಡ ತೂತಿನ ಎರಡು ಸಣ್ಣ ವಡೆ, ಪುಟ್ಟ ಲೋಟದಲ್ಲಿ ಒಂದು ಔನ್ಸು ಕಾಫಿ, ಹೀಗೆ ಒಂಭತ್ತೂವರ ರೂಪಾಯಿಗಳಿಗೆ ಗಡದ್ದಾಗಿ ನಾಷ್ಟಾ ಹೊಡೆದೆ. ಹೊಟ್ಟಿನ ವದ್ದೆ ಮಾಡಿಕೊಳ್ಳೋಣ ಅಂದರೆ ಶುತ್ತೂರು ಶಾರಂಗಪಾಣಿ, ನೀರನ್ನೂ ರೇಷನ್ ಮಾಡಿಬಿಟ್ಟಿದಾನೆ. ಹೋಗಲಿ ಬಿಡಿ, ನೋಡದೆಯೇ ಕುಡಿಯಬೇಕಾದ ನೀರು ಅದು!

ಬೀಗ ತೆಗೆದು ಒಳಗೆ ಬಂದರೆ ಇಂಥ ಚಳಿಗಾಲದಲ್ಲೂ ಮನೆಯಲ್ಲಿ ಬೆಚ್ಚಗಿನ ಹಬೆ! ನೋಡಿದರೆ ಬಚ್ಚಲ ಮನೆಯ ಬಾಯ್ಲರ್‌ನಲ್ಲಿ ನೀರು ಕೊತಕೊತ ಕುದೀತಿದೆ. ಸ್ವಿಚ್ ಆರಿಸಿ, ಪಂಪಿನ ಸ್ವಿಚ್ ಆನ್ ಮಾಡಿ, ಬಟ್ಟೆ ತೆಗೆದು, ಅಷ್ಟೂ ಎಣ್ಣೆಯನ್ನು ತಲೇಮೇಲೆ ಸುರಿದುಕೊಂಡು ಅದರಿಂದಲೇ ಮೈ ಕೈಗಳಿಗೆ ಸವರಿಕೊಂಡು ಹತ್ತು ನಿಮಿಷಗಳಲ್ಲಿ ಬಚ್ಚಲಿಗೆ ಇಳಿದೆ. ಬಕೀಟಿಗೆ ಕುದಿನೀರು ಬಿಟ್ಟುಕೊಂಡು ತಣ್ಣೀರಿಗಾಗಿ ನಲ್ಲಿ ತಿರುಗಿಸಿದರೆ ಬರೀ ಗಾಳಿ! ಬಿಸೀ ಗಾಳಿ! ನಾನು ನಂತರ ಮಾಡಿದ ಏನೇನು ಸರ್ಕಸ್ಸಿಗೂ ಅದು ಮಾಗಲಿಲ್ಲ. ಭಗವಂತಾ ಅಂತ ಬಿಸುಸುಯ್ದು ಒಣಗಿದ ಟವಲ್ಲಿನಿಂದ ತಲೆ, ಮೈಕೈ ಒರೆಸಿಕೊಂಡು ಹಳೆಯದನ್ನೇ ಮತ್ತೆ ಉಟ್ಟು ತೊಟ್ಟು ಬೀದಿಗೆ ಬಿದ್ದದ್ದು ನಾನು ಮೂಣುಮಲ್ಶೈ ಹೆಸರನ್ನು ಜಪಮಾಡುತ್ತ.

ಅಂಗಡೀ ಮಧ್ಯದಲ್ಲಿ ಮಗುಚಿ ಹಾಕಿದ್ದ ಮುರುಕಲು ಡ್ರಮ್ಮಿನ ಮೇಲೆ ಥಾಳಾಗಿ ಕುಳಿತಿದ್ದ. ದ್ವಾದಶಿ ಮೇಲೆ ಅಮಾವಾಸ್ಯೆ ಏರಿಕೊಂಡ ಹಾಗೆ ಅವನ ಹೊಟ್ಟೆ ಮೇಲಿನ ಮುಖ. ಕತ್ತೇ ಪತ್ತೇ ಇಲ್ಲ. "ಬಾಸಾರ್" ಅಂದ ನನ್ನನ್ನು ನೋಡಿ "ಏನು ಕೆಟ್ಟಿದೆ? 'ಏ' ಕಳಿಸಲೋ 'ಬಿ' ಕಳಿಸಲೋ?" ಎಂಬ ಅರ್ಥದ ಮಿತಕ (ಮಿಶ್ರ ತಮಿಳು ಕನ್ನಡ) ಆಡಿದ. ತನ್ನ ಮಕ್ಕಳ ಜೊತೆಗೆ ಇನ್ನೂ ಮೂವರು ಪುಟ್ಟ ವಯಸ್ಸಿನ ಪಡ್ಡೆ ಹುಡುಗರನ್ನ ಸೇರಿಸಿಕೊಂಡು ಮೇಟ್ರನ್ ಮುತ್ತಮ್ಮನ ಮೇಲು ವಿಚಾರಣೆಯಲ್ಲಿ 'ಮೆಕ್ಯಾನಿಕ್ ಬ್ರಿಗೇಡ್'

ಕಟ್ಟಿಕೊಂಡಿದ್ದಾನೆ. ಟ್ರೇನಿಂಗು ಅವಲಂಬಿಸಿ. ಏ.ಬೀ.ಸೀ. ಎಂಬ ಮೂರು ಕ್ಯಾಟಗರಿಯಲ್ಲಿ ಅವುಗಳನ್ನು ಮಡಗಿಕೊಂಡಿದ್ದಾನೆ. 'ಏ', 'ಬೀ' ಗಳ ಅನುಭವ ನನಗೆ ಚೆನ್ನಾಗಿದೆ. ಸರಿಯಾಗಿದ್ದ ಏನನ್ನೂ ತೋರಿದರೂ ಅವು ಕೆಡಿಸಿ ಹಾಳುಗೆಡವುತ್ತವೆ. ಅನಂತರ 'ಸಿ' ಹುಡುಗನನ್ನು ಒಂದು ಸಣ್ಣ ಸುತ್ತಿಗೆ ಒಂದು ಸ್ಪ್ಯಾನರ್ ಜೊತೆ ಕಳುಹಿಸುತ್ತಾನೆ. ಅವನು ಕೆಡದೆ ಉಳಿದದ್ದನ್ನು ಪೂರಾ ಕೆಡಿಸಿದ ನಂತರ ಸ್ವತಃ ತಾನೇ ಬಂದು, ಆ ಕ್ಯಾಟಗರಿಗಳನ್ನು ಕ್ಯಾಕರಿಸಿ ಬೈಯುತ್ತ ತಾನೇ ಸ್ವತಃ ರಿಪೇರಿ ಕೆಲಸದಲ್ಲಿ ತೊಡಗುತ್ತಾನೆ. ನಿಮ್ಮ ಪುಣ್ಯ ಚೆನ್ನಾಗಿದ್ದರೆ ಅದು ಸರಿಹೋಗಲೂಬಹುದು. ಸರಿಹೋದರೂ, ಹೋಗದಿದ್ದರೂ ಒಟ್ಟು ಟೀಂ ಕೆಲಸಕ್ಕೆ ಛಾರ್ಜು ಮಾಡುವುದು ಅವನಿಟ್ಟುಕೊಂಡಿರುವ ಸಂಪ್ರದಾಯ. ಈ ಎಲ್ಲಾ ಕೂಡಿದರೆ ಕೇವಲ ನಲ್ಲೀ ರಿಪೇರಿಗೇ ಈ ಒಂದೊಂದು ಸಲ 75ರಿಂದ 130ರವರೆಗೆ ಮುಟ್ಟುತ್ತದೆ. ಅದರಿಂದ ಹೇಳಿದೆ ಅವನಿಗೆ–

'ಏ' ನೂ ಬೇಡ – 'ಬೀ' ನೂ ಬೇಡ ಸ್ವತಃ ನೀನೇ ಬರಬೇಕಪ್ಪಾ. ವಿಪರೀತ ಅರ್ಜೆಂಟು" ಅಂತ ತಲೆ ತೋರಿಸಿದೆ. ಅಸಹ್ಯಪಟ್ಟುಕೊಂಡು, "ಅರೆ ಮಣಿ ತಾಳು ಸಾರ್– ಅಲೇ ಮೇಲೆ ಟವಲ್ ಪೋಟ್ಟು ಉಕ್ಕಾರ್" ಅಂದ. ಅಲ್ಲಿ ಅವನ ಬಿಡುವಿಗಾಗಿ ಕಾಯುತ್ತ ಕೂತೆ. ಮೇಟ್ರನ್ ಮುತ್ತಮ್ಮ ಬಂದು ಅವನನ್ನ ಬಿಡುಗಡೆ ಮಾಡುವವರೆಗೂ.

ಅಂತೂ ಬಂದ. ದೊಡ್ಡ ಸುತ್ತಿಗೆ, ಸ್ಪ್ಯಾನರ್ ತಂದ. ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಪಂಪನ್ನು ಮುಟ್ಟಿ ಮುಟ್ಟಿ ತಕ್ಕೆಸಿದ. ಬಚ್ಚಲು ನಲ್ಲಿಯನ್ನು ಮೂಸಿ ನೋಡಿದ. ಕಡೆಗೊಮ್ಮೆ, ಪಂಪಿನ ಹಿಂಭಾಗವನ್ನು ಬೆರಳುಗಳಿಂದ ಮುಟ್ಟಿ ತಡಕಾಡಿ, ಪರೀಕ್ಷಿಸಿ, ದೊಡ್ಡ ಸುತ್ತಿಗೆಯಿಂದ ಗುರಿಹಿಡಿದು ಒಂದು ಭಾರೀ ಹೊಡೆದ ಬಡಿದ ಅದಕ್ಕೆ. ನಂಬಿದರೆ ನಂಬಿ–ಬಿಟ್ಟರೆ ಬಿಡಿ ಸಾರ್. ಹೌದು ತಾವು ಊಹಿಸಿದ್ದು ಸರಿ. ಛಟೀರನೆ ಅಲ್ಲಿಂದ ನೀರು ಚಿಮ್ಮಿತು. "ಇಪ್ಪೋ ಸ್ವಿಚ್ ಹಾಕು ಸಾರ್" ಅಂದ. ಹಾಕಿದೆ. ಒಂದು ಸಲ ಧಡಕ್ ಅಂತ ಶಬ್ದಮಾಡಿ, ಕಜ್ಜೀನಾಯಿ ತನ್ನ ಕಿವೀನ ಕಾಲಿಂದ ಕೆರಕೊಳ್ಳೋವಾಗ ಹೊರಡಿಸುವ "ಕುಯ್ಯೋ" ಅಂತ ಮಧ್ಯಮದಿಂದ ತಾರಸ್ಥಾಯಿ ಷಡ್ಜದವರೆಗಿನ ಚೂಪು ಶಬ್ದ ಹೊಮ್ಮಿಸಿ, ಛಟರ್, ಛಟರ್ ಅಂತ ನೀರು ಉಗ್ಗಿಸಿ, ಕೆಲಸ ಶುರುಮಾಡಿತು. "ಇಪ್ಪೊ ಬಚ್ಚಲು ಪೋಯಿ ನೋಡು ಸಾರ್" ಅಂದ. ನೋಡಿದರೇ ಮೈಗಾಡ್ ! ನಿಜವಾಗಿ ಮೂಣುಮಲೇನ ಅಪ್ಪಿಕೊಂಡು ಮುದ್ದಾಡಬೇಕು ಅನ್ನಿಸಿತು. ಸ್ವಲ್ಪ ತಡಕೊಂಡೆ.

ಇದು ಆಶ್ಚರ್ಯ ನೋಡಿ. ಹೇಳಿದ ಮಾತು ಕೇಳದೆ, ಏನೇನು ಉಪಚಾರಕ್ಕೂ ಮಣಿಯದೇ ಇರೋ ಮಿಷೀನುಗಳಿಗೆ ಇಂಥ ಒದಿಕೆಗಳೇ ಉತ್ತರ ಅನ್ನೋದು ನನ್ನ ಅನುಭವ. ಜನಕ್ಕೆ ಕೂಡ ಈ ಮಾತನ್ನ ಅನ್ವಯಿಸಬಹುದು – ಅನ್ವಯಿಸಬೇಕೂ ಅನ್ನೋ ನಿರ್ಣಯಕ್ಕೆ ಸುಪ್ರಸಿದ್ಧ ಸಂಶೋಧಕ ಶಂಕರತೀರ್ಥಾನಂದ ಸನ್ಯಾಸಿ ಸ್ವಾಮಿಗಳವರು ಬಂದಿದ್ದಾರೆ ಅಂತ ಮೊನ್ನೆ ಪೇಪರಿನಲ್ಲಿ ಬಂದಿತ್ತು.

ನೋಡಿ, ಹೀಗೇ ಆಯಿತು ಧಾರವಾಡದ ಆಕಾಶವಾಣೇಲಿ ನಾನಿದ್ದಾಗ. ಛೀಫ್ ಇಂಜನಿಯರು ಇನ್ಸ್‌ಪೆಕ್ಷನ್‌ಗೆ ಬಂದಿದ್ದರು. ನಮ್ಮ ಕೆ. ರಾಮಸ್ವಾಮಿ ಕೇಂದ್ರದ ಇನ್‌ಛಾರ್ಜು. ಅವರ ಹಿರಿತನದಲ್ಲಿ ನೆಲ–ಗೋಡೆ ಮೊದಲುಗೊಂಡು ಏನೆಲ್ಲವನ್ನೂ ತಿಕ್ಕಿಸಿ ತೊಳೆಸಿ, ಪಾಲಿಷ್ ಹೊಡೆಸಿ, ಅವತ್ತು ತಾವೂ ಸ್ನಾನ ಮಾಡಿ, ಬಿಳಿ ಬಿಳಿ ಬಟ್ಟೆ ಧರಿಸಿ, ಹೊಳೆಹೊಳೆವ ಕಪ್ಪು ಷೂ ಏರಿಸಿ, ಛೀಫ್‌ನ ಎದುರುಗೊಂಡು, ಸ್ಟುಡಿಯೋ ಕಂಟ್ರೋಲ್ ರೂಮು, ಕಾರಿಡಾರು, ಸ್ಟೋರ್ ರೂಮು ಎಲ್ಲ ಸಾವಕಾಶವಾಗಿ ತೋರಿಸಿಕೊಂಡು ಬಂದು ಹೊಳೆ ಹೊಳೆಯುತ್ತಿದ್ದ ತಮ್ಮ ರೂಮಿಗೆ ಕರೆತಂದು ಭರ್ಜರಿ ಮೇಜವಾನಿ ಹೊಡೆಸೋದರಲ್ಲಿದ್ದಾಗ,

ಚೀಪು.

"ಅದೆಲ್ಲ ಸರಿ, ಸ್ಟೋರ್ ರೂಮಿನ ಪಕ್ಕದ ಕೋಣೆಯ ಕತ್ತಲು ಮೂಲೆಯಲ್ಲಿ ಕೂತಿದೆಯಲ್ಲ ಗುಪ್ಪೆ ! –ಏನದು?" ಅಂತ ಕೇಳಿದರು. ಅದೊಂದೇ ಪ್ರಾಣಪ್ರಶ್ನೇನೇ ರಾಮಸ್ವಾಮಿ ತಪ್ಪಿಸಿಕೊಳ್ಳೋಕೆ ಪ್ರಾಣಬಿಡ್ತಿದ್ದದ್ದು ! ಆ ಪ್ರಶ್ನೆ ಕಿವಿಗೆ ಬಿದ್ದ ತಕ್ಷಣ, ಕೈಕಾಲುಗೆಟ್ಟು, ಕಂಗಾಲಾಗಿ, ಕಣ್ಣುಕಣ್ಣು ಬಿಟ್ಟು, ಕಳವಳಿಸುತ್ತ ಬಾಯಿ ಒಣಗಿ "ಸಾರ್ ಅದು ಜನರೇಟರ್ರು !" ಅಂದರು. "ಅದನಾಕೆ ಅಲ್ಲಿ ಹಾಗೆ ಗೌಸು ಕಟ್ಟಿ ಕೂರಿಸಿದೀರಿ?" ಛೀಫ್ ಸಾಹೇಬರ ಪ್ರಶ್ನೆ! "ಅದು ಸ್ವಲ್ಪ ಕೆಟ್ಟಿತ್ತು ಸಾರ್" ಕೆ.ರಾ. ಉತ್ತರ. "ಯಾವಾಗ ಕೆಟ್ಟಿದ್ದು?" ಪ್ರಶ್ನೆ. "ಇವತ್ತು ಬೆಳಿಗ್ಗೆ ತಾನೆ ಸಾರ್" ಸುಳ್ಳು ಉತ್ತರ! "ಬೆಳಿಗ್ಗೆ ಇಂದ ಅದನ್ನ ರಿಪೇರಿ ಮಾಡದೆ ನನ್ನ ಹಿಂದೆ ಮುಂದೆ ತಗರುಬುಗರಿ ಮಾಡ್ತಾ ಇದ್ದೀರಾ, ಯು ಅನ್‌ಫಿಟ್. ಮೊದಲು ಅಟೆಂಡ್ ಟು ದಟ್ ಯು ಸ್ಟುಪಿಡ್" ಅಂದವರೇ ಮೇಜನಾಗಿ ತಳ್ಳಿಹಾಕಿ, ಕಾರು ತರಿಸಿ, ತಾವೇ ಬಾಗಿಲು ತೆಗೆದುಕೊಂಡು, ಒಳಗೆ ಕುಸಿದು ಇನ್ಸ್‌ಪೆಕ್ಷನ್ ಬಂಗಲೋಗೆ ದೌಡಾಯಿಸಿಬಿಟ್ಟರು. ಕೆ.ರಾಗೆ ಹೇಗೆ ಆಗಿರಬೇಡ! ಕಾದ ಸರಳುಗಳು ಕಿವಿಗಳನ್ನು ಇರಿದಂತಾಗಿ, ಹೊಟ್ಟೆಗೆ ಬೆಂಕಿ ಬಿದ್ದು, ಬೆನ್ನು ಮೇಲೆ ಚಾಟಿ ಏಟುಗಳನ್ನು ಬಾರಿಸಿದಂತಾಗಿ, ಕಣ್ಣೀರು ಸುರಿಸುತ್ತ, ದಾವುಗಾಲು ಹಾಕಿ ಧಾವಿಸಿದ ರಾಮಸ್ವಾಮಿ ಸ್ಟೋರ್ ರೂಮಿನ ಕತ್ತಲೆ ಮೂಲೆಗೆ ನುಗ್ಗಿ, ಮುಸುಗನ್ನು ಕಿತ್ತೆಸೆದು ಜನರೇಟರಿಗೆ ಕೆಟ್ಟ ಪೋಲಿ ಮಾತು ಬೈದು ಗುರಿ ಇಟ್ಟು ಝಾಡಿಸಿ ಒದ್ದರು. ನೋಡಿ ಆ ಕ್ಷಣದಲ್ಲಿ, ತಿಂಗಳಿನಿಂದ ಯಾವ ಯಾವ ಯಾರ ಯಾರ ಕೈವಾಡಗಳಿಗೂ ಮಣಿಯದೆ ಹಟ ಹಿಡಿದು ಕೂತಿದ್ದ ಜನರೇಟರ್ರು ಫಿರ್ ವಶ್ ಭಢ ಭಢ ಎಂದು ಘೋರವಾದ ಶಬ್ದ ಮಾಡಿ ಸ್ಟಾರ್ಟ್ ಆಯಿತು. ಆ ಸಂಜೆ ದಿಲ್ಲಿಗೆ ಹೊರಡುವ ಮೊದಲು ಛೀಫ್ ಇಂಜನೀರ್ ಸಾಹೇಬರು, ಸ್ವತಃ ಸಿವಿಲ್ ಆಸ್ಪತ್ರೆಗೆ ತೆರಳಿ, ಕಾಲಿನ ಮಲ್ಟಿಪಲ್ ಫ್ರಾಕ್ಚರುಗಳ ಕಾರಣ ಯಮಯಾತನೆಯಲ್ಲಿದ್ದ ರಾಮಸ್ವಾಮಿಯನ್ನು ತುಂಬು ತೃಪ್ತಿಯಿಂದ ಕಾಂಪ್ಲಿಮೆಂಟಸಿದರು.

ನೆನಪಿನಿಂದ ನೆಲಕ್ಕೆ ಇಳಿದು ಮೂಣುಮಲ್ಯೆಯನ್ನು ಮನಸಾರೆ ಹೊಗಳಿ, 'ಎಷ್ಟು ದಿನ ಗ್ಯಾರಂಟಿ?' ಎಂದು ಕೇಳಿದ್ದಕ್ಕೆ ಆತ ಒಂದು ವೇಳೆ ಮನೆ ಕುಸಿದು ಕೆಡವಿಕೊಂಡು ಬೆದ್ದರೂ ಪಂಪಿನ ಆರೋಗ್ಯಕ್ಕೆ ಏನೇನೂ ಧಕ್ಕೆ ಇಲ್ಲ ಮತ್ತೆ ಕೆಡುವವರೆಗೆ ಅಂತ ಹಟಕಟ್ಟಿ ಕ.ಮಿ.ತ. (ಕನ್ನಡ ಮಿಶ್ರಿತ ತಮಿಳು) ಮಾಡಿದ. ಆತನ ಆ ಸುತ್ತಿಗೆ ಹೊಡೆತಕ್ಕೆ ಪಂಪು ಪೈಪುಗಳ ಜಾಯಿಂಟ್ ಕಳಚಿಕೊಂಡು ಸಣ್ಣಗೆ ಲೀಕ್ ಆಗುತ್ತಿದ್ದ ನೀರಿನ ಬಗ್ಗೆ ನನ್ನ ಗಾಬರಿಯನ್ನು ಗಮನಿಸಿ, "ಅತು ರೊಂಬ ಮೈನರ್ ಪ್ರಾಬ್ಲಮ್ಮು ಸಿಮೆಂಟು ಕೊಡು ಸಾರ್" ಎಂದ. ಎಲ್ಲಿಂದ ತರಲಿ? ಸಿಮೆಂಟು! ಮಟಮಟ ಮಧ್ಯಾಹ್ನ; ಭಾನುವಾರ! "ತಾಳು ಸಾರ್ ದಾರ ಕೊಡು ಸಾರ್ ಶುತ್ತಿ ಶುತ್ತಿ ಕೊಡುವೆ' ಎಂದ. ಪಂಚೆ ಅಂಚಿನಿಂದ ಎಳೆದುಕೊಟ್ಟೆ ಲೊಚಗುಟ್ಟಿದ.

ಈ ಎಲ್ಲ ರಿಪೇರಿಗೆ ಅದೆಷ್ಟು ಕೇಳುತ್ತಾನೋ ಏನೋ ಅಂತ ಸ್ವಲ್ಪ ಗಾಬರಿಯಿಂದಲೇ ಕೇಳಿದೆ. "ನೂರಾಮೂವತ್ತೈದು ರೂಪಾಯಿ ಅರವತ್ತೈದು ಪೈಸೆ" ಅಂದ. ಬವಳಿ ಬಂದ ಹಾಗಾಯಿತು. ಆದರೆ ಚೂಪಾಗಿ ಚಿಲ್ಲರೆ ಮಾಡಿದನೋಡಿ ಬಾಟಾ ಆಸಾಮಿ. ಅಷ್ಟು ದುಡ್ಡು ಅದನ್ನ ಹೇಗೆ ಲೆಕ್ಕ ಹಾಕಿದ? ಬಂದಿದ್ದಕ್ಕೆ ನಿಂತಿದ್ದಕ್ಕೆ ನೋಡಿದ್ದಕ್ಕೆ ಮುಟ್ಟಿದ್ದಕ್ಕೆ ಸ್ಪೆಸಿಫಿಕ್ ರೇಟು ಹಾಕೇ ಹಾಕುತ್ತಾನೆ. ಬಿಡ್ತಾನೆಯೇ? 'ಅದ್ಯಾಕಪ್ಪಾ ಅಷ್ಟೊಂದು ಅಂದೆ. ಅನ್ನಬಾರದಾಗಿತ್ತು.

"ಇದೇನು ಪಡಪೋಶಿ ಕೆಲಸವಾ? ಕಾಲೇಜಿನಲ್ಲಿ ಪಾಠ ಹೇಳಿದ ಹಾಗಾ? ಅಥವಾ

ಮೂತಿ ನೋಡಿ ಇಂಜಕ್ಷನ್ ಚುಚ್ಚಿ ಕಾಸು ಕಿತ್ಕೊಳೋ ರೀತೀನಾ? ಇಲ್ಲವೆ, ಸುಳ್ಳು ತಟವಟ ಮಾಡಿ ಕಾಸು ಕಮಾಯಿಸಿ ಮನೇ ಮುಂದೆ ಬೋರ್ಡು ಸಿಕ್ಕಿಸಿಕೊಳ್ಳೋ ಹಾಗಾ? ಅಥವಾ ಮೂರಕ್ಕೆ ತಂದು ಆರಕ್ಕೆ ಮಾರೋ ದಳ್ಳಾಳಿಗಳ ಲೆಕ್ಕಾನಾ? ಇಲ್ಲ ಲಂಚಾನಾ? ಖುಷುವತ್ತಾ? ಕೈ ಕೆಲಸ ಇದು ನೋಡು ಸಾರ್ ಬುದ್ಧೀ ಕೆಲಸ" ಅಂತ ಎಲ್ಲಾ ಪ್ರೊಫೆಷನ್ನೂಗಳನ್ನೂ ಒಟ್ಟಿಗೆ ಗುಡಿಸಿ ಚರಂಡಿಗೇ ತಳ್ಳಿ ತಾನೊಬ್ಬನೇ ಉದ್ಧಾರಕ, ನಿಸ್ಪೃಹ ಅಂತ ಬಾವುಟ ಎತ್ತಿ ಮಹಾಕೆಟ್ಟ ಸ್ಪೀಡಿನಲ್ಲಿ ತಮಿತ (ತಮಿಳು ಮಿಶ್ರಿತ ತಮಿಳು) ಮಾಡಿದ.

ಇದೇ ಥರಾ ಆಯಿತಂತೆ ಸಾರ್, ಲಂಡನ್ನಿನಲ್ಲಿ ಕಳೆದ ವರ್ಷ. ಹಳೇ ಕಾಲದ ನೀರಿಂಜನ್ನು ನಿಂತೇ ಹೋಯಿತಂತೆ ರೈಲ್ವೇಯಾರ್ಡಿನಲ್ಲಿ, ಯಾರ್ಯಾರು ಏನೇನು ಮಾಡಿದರೂ ಜಗ್ಗಲಿಲ್ಲ. ಕಡೇಗೆ ಎಲ್ಲಾ ಇಂಜಿನೀರುಗಳೂ ತಲೆ ಮೇಲೆ ಕೈಹೊತ್ತು ಯೋಚನೆ ಮಾಡೀ ಮಾಡೀ ಸಾಗದೆ, ಅಂಥ ಇಂಜನ್ ಹಿಂದೆ ನಡೆಸುತ್ತಿದ್ದು ಹದಿನೈದು ವರ್ಷದ ಹಿಂದೆಯೇ ರಿಟೈರ್ ಆಗಿದ್ದ ಹಳೇ ಮೆಕ್ಯಾನಿಕ್ ಮುದುಕನನ್ನು ಹಿಡಿತರಿಸಿ ಇಂಜನ್ ಒಳಗೆ ಬಿಟ್ಟರು! "ನೀನು ಎಷ್ಟು ಬೇಕಾದರೂ ಛಾರ್ಜು ಮಾಡು ಆದರೆ ಇದನ್ನ ಸರಿಮಾಡಿಕೊಡು ಷಂಟಿಂಗೇ ನಿಂತುಹೋಗಿದೆ" ಅಂತ ಅವನ ಎದುರಿಗೆ ಹಲುಬಿದಾಗ ಅವನ ತರ್ಜನಿಯಿಂದ ಅಲ್ಲಿ ಇಲ್ಲಿ ಮುಟ್ಟಿ ತಟ್ಟಿ ಟಕ್ ಟಕ್ ಮಾಡಿ, ನಾಲಿಗೆಯನ್ನ ತನ್ನ ಬಾಯಿಯೊಳಗೇ ಅಲ್ಲಾಡಿಸುತ್ತ, ಮೂಗು ಅರಳಿಸಿ, ಎಡಗಿವಿಯಲ್ಲೊಮ್ಮೆ ಬೆರಳಾಡಿಸಿ, ಬಲಗಣ್ಣನ್ನು ಮೆಳ್ಳ ಮಾಡಿ, ದೊಡ್ಡದಾಗಿ ಶೀನಿ, ನಂತರ ಸಣ್ಣದಾಗಿ ಒಮ್ಮೆ ಕೆಮ್ಮಿ, ಒಂದೇ ಒಂದು ಕೆಟ್ಟ ಪೋಲಿ ಮಾತು ಬೈದು ಕಲ್ಲಿದ್ದಲ ಗಟ್ಟಿಯಿಂದ ನಿರ್ದಿಷ್ಟವಾದ ಒಂದು ಆ ಕಡೆಗೆ ಕಡೆ ಸಣ್ಣ ಕ್ರಾಸ್ ಬರೆದು, ಇಂಜನ್ ನಡುಗುವ ಹಾಗೆ ದೊಡ್ಡ ಸುತ್ತಿಗೆಯಿಂದ ಅಲ್ಲಿ ಒಂದು ಧನಬಡಿತ ಬಡಿದ. ತಕ್ಷಣ ಸುತ್ತಿಗೆ ಮುರಿಯಿತು ಇಂಜಿನ್ ಹೊರಟಿತು. ಎಲ್ಲರಿಗೂ ವಿಪರೀತ ಆಶ್ಚರ್ಯ, ಸಿಕ್ಕಾಪಟ್ಟೆ ಹೊಗಳಾಟ! "ಅದೆಲ್ಲ ಇರಲಿ ರಿಪೇರಿ ಮಾಡಿದ್ದಕ್ಕೆ ನೂರು ಪೌಂಡು ಮಡಗಿ" ಅಂತ ಕೈಯಲ್ಲೇ ಬರೆದು ಬಿಲ್ಲು ಕೊಟ್ಟನಂತೆ! "ಅಲ್ಲಯ್ಯ ಒಂದೇ ಒಂದು ಏಟು ಬಡಿದಿದ್ದಕ್ಕೆ ನೂರು ಪೌಂಡು ಅಂದರೆ ವಿಪರೀತ ದುಬಾರಿ ಆಯ್ತಲ್ಲಪ್ಪಾ ಅಂದದ್ದಕ್ಕೆ ಅವನೂ ನಮ್ಮ ಮೂಣುಮಲೈ ತರಹಾನೆ ಸಿಠ್ರಂತ ಕೆರಳಿ "ಅಲ್ರೀ ಸುತ್ಗೆ ಏಟಿಗೆ ಒಂದೇ ಪೌಂಡು ರೀ ಛಾರ್ಜು. ಆದರೆ ಎಲ್ಲಿ ಕರೆಕ್ಟಾಗಿ ಎಲ್ಲಿ ಹೊಡೀಬೇಕೂಂತ ನಿರ್ಧರಿಸಿದ ತಲೇ ಬೆಲೆ ತೊಂಭತ್ತೊಂಭತ್ತು ಪೌಂಡು ರೀ ಛಾರ್ಜು ಮೊದಲು ಮಡಗಿ" ಅಂತ ಕೈ ನೀಡಿದನಂತೆ.

ನನ್ನದೂ ಅದೇ ಆಯಿತು ಕಥೆ. ಇಂಡಿಯನ್ ವರ್ಶನ್ ಅಷ್ಟೆ! ನೇಟಿವ್ ಸೊಗಡು ಸೇರಿ, ಮುಂದಿನ ಅರ್ಧಗಂಟೆಯವರೆಗೆ ಘನಘೋರವಾದ ಚೌಕಾಶಿ ಮಾಡಿದ ನಂತರ, ಅರವತ್ತೈದು ಪೈಸೆ ಬಿಟ್ಟುಕೊಡಲು ಒಪ್ಪಿದ.

ಇನ್ನೂ ಲೀಕ್ ಆಗುತ್ತಿದ್ದ ನೀರನ್ನು ತೋರಿ "ಇದನ್ನ ಯಾವಾಗಪ್ಪ ರಿಪೇರಿ ಮಾಡಿಕೊಡುತ್ತೀಯೆ ನನ್ನ ಮುದ್ದು ಮೂಣುಮಲೈ" ಅಂತ ಬೆಣ್ಣೆ ಹಚ್ಚಿದೆ. ಬಿರಿದ ಪೈಪನ್ನು ನಿಟ್ಟಿಸಿ ನೋಡಿದ ರಿಪೇರಿ ಸಾರ್ವಭೌಮ, "ಅದೆಂಥ ಚಿಲ್ರೆ ಕೆಲಸ. ಈ ಜುಜುಬಿ ಕೆಲಸಕ್ಕೆ ನಮ್ಮಂಥವರು ಬೇಕಾ? ಯಾವ ಹಳ್ಳಿ ಮಂಗ ಬೇಕಾದರೂ ಯಾಕೆ ನೀನು ಕೂಡ ರಿಪೇರಿ ಮಾಡಬಹುದು ಸಾರ್. ಸಿಮೆಂಟು ತಂದು ತೆಳ್ಳಗೆ ಕಲಸಿ ಒತ್ತಿ ಹಚ್ಚಿ, ಅದರ ಮೇಲೆ ಸಿಮೆಂಟಿನ ಧೂಳು ಹಚ್ಚು ಸಾರ್" ಅಂದವನೇ, ಮತ್ತೆ ಹಿಂದಿರುಗಿಯೂ ನೋಡದೆ, ಮೂಣುಮಲೈ ಮುತ್ತಮ್ಮನತ್ತ ನಡೆದುಬಿಟ್ಟ. ■